
ಸಂಪುಟ 22 ಸಂಚಿಕೆ 26
ಜೂನ್ 25, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



ಮಲಪ್ರಭಾ ನೀರಾವರಿ ರೈತರ ಸಂಕಟಗಳು

ಪಂಚಾಯ್ತಿ ಚುನಾವಣೆಗಳು ಹಣ, ಹೆಂಡದ ಸೂರೆ

ಶ್ರೀಲಂಕಾ: ಬಯಲುಗೊಂಡ ಗೊಂದಲಗಳು



ಚಲನಚಿತ್ರಗಳಲ್ಲಿ 'ಅಭಿನಯ' ಕಲೆ

ಕಳೆದ ಸಂಚಿಕೆಯಲ್ಲಿ ಅಂಚೆ-ತಂತಿ ನೌಕರರ ದೃಢ ಹೋರಾಟವನ್ನು ವಿವರಿಸಿದ ಜ್ಯೋತಿಬಸು ಅವರು ಈಸಂಚಿಕೆಯಲ್ಲಿ ತಮ್ಮ ಮಾಸ್ಕೋ ಪ್ರವಾಸದ ಸಂದರ್ಭದಲ್ಲಿ ಸೋವಿಯತ್ ನಾಯಕರೊಂದಿಗೆ ನಡೆದ ಚರ್ಚೆಯನ್ನು ಹಾಗೂ ಅಮೃತಸರದಲ್ಲಿ ನಡೆದ ಪಕ್ಷದ ಮಹಾಧಿವೇಶನದ ಬಗ್ಗೆ ಬರೆದಿದ್ದಾರೆ.

ಸ್ಟಾಲಿನ್‌ಗೆ ಮಸಿ ಹಚ್ಚಲು ಯತ್ನ

ಸ್ಟಾಲಿನ್ ಬದುಕಿದ್ದಾಗಲೇ ಅವರನ್ನು ಟೀಕಿಸಲಿಲ್ಲವೇಕೆ ಎಂದು ನಾನು ಸೋವಿಯತ್ ನಾಯಕರನ್ನು ಪ್ರಶ್ನಿಸಿದೆ. ಹಾಗೂ ಕಮ್ಯುನಿಸ್ಟ್ ಆಂದೋಲನದಲ್ಲಿ ನಿಮ್ಮ ಪಾತ್ರವೇನು ಎಂದೂ ನಾನು ಕೇಳಿದೆ.

ಸ್ಟಾಲಿನ್ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಅದೇ ರೀತಿ ಸೋವಿಯತ್ ಒಕ್ಕೂಟದ ನೇತಾರ ಎಂದು ಸುಶೋಲೋವ್ ಉತ್ತರಿಸಿದರು. ಸ್ಟಾಲಿನ್ ನೀತಿಯ ಗುಣಾವಗುಣಗಳ ಬಗ್ಗೆ ಆಗ ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ.

ನಾವು ಮಾಸ್ಕೊದಲ್ಲಿ ಕೆಲವೇ ದಿನಗಳ ಕಾಲ ಉಳಿದಿದ್ದೆವು. ಮರಳಿದ ಮೇಲೆ ಕಾರ್ಯಸಮಿತಿಗೆ ವರದಿ ಸಲ್ಲಿಸಿದೆವು. ಮಾಸ್ಕೊದಲ್ಲಿ ಸೋವಿಯತ್ ನಾಯಕರೊಂದಿಗೆ ನಾವು ಮಾಡಿದ ಚರ್ಚೆಯ ಬಗ್ಗೆ ನನ್ನ ಮೌಲ್ಯಮಾಪನ ಇತರ ಇಬ್ಬರು ಸಂಗಾತಿಗಳದ್ದಕ್ಕಿಂತ ಭಿನ್ನವಾಗಿತ್ತು. ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ (CPSU) 22ನೇ ಮಹಾಧಿವೇಶನದಲ್ಲಿ ಪ್ರಮೋದ್‌ದಾಸ್‌ಗುಪ್ತ ಸಿಪಿಐ ಪ್ರತಿನಿಧಿಯಾಗಿ ಭಾಗವಹಿಸಿದ್ದರು ಎನ್ನುವುದು ಒಂದು ಆಸಕ್ತಿದಾಯಕ ಅಂಶ. ಆಗ ಅವರು ಪಕ್ಷದ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮತ್ತು ಕಾರ್ಯ ಸಮಿತಿಯ ಸದಸ್ಯರಾಗಿದ್ದರು.


ಅಮೃತಸರ ಮಹಾಧಿವೇಶನ

1958 ರಲ್ಲಿ ಮಾಸ್ಕೋದಲ್ಲಿ ಒಂದು ವಿಶೇಷ ಅಧಿವೇಶನ ನಡೆಯಿತು. ಪಕ್ಷದ ಸಂಘಟನೆಯಲ್ಲಿ ಕೆಲವು ಮಹತ್ವದ ಬದಲಾವಣೆಗಳನ್ನು ತುರ್ತಾಗಿ ತರಬೇಕೆಂದು ಭಾವಿಸಿದ್ದರಿಂದ ಇದನ್ನು ವ್ಯವಸ್ಥೆಗೊಳಿಸಲಾಯಿತು. ಸಮಿತಿಗಳು ಇರಬಾರದು; ಮಂಡಳಿಗಳಷ್ಟೇ ಇರಬೇಕು ಎಂಬುದು ಮಹತ್ವದ ತಿದ್ದುಪಡಿಗಳಲ್ಲಿ ಒಂದಾಗಿತ್ತು. ಆಗ ಅಜಯ್ ಘೋಷ್ ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿದ್ದರು. ಕೆಲವು ತಿದ್ದುಪಡಿಗಳನ್ನು ನಾವು ಅನೇಕರು ವಿರೋಧಿಸಿದೆವು. ಆದರೆ ಅಂತಿಮವಾಗಿ ಅವು ಮತದಾನದ ನಂತರ ಅಂಗೀಕಾರವಾದವು.

ಮಹಾಧಿವೇಶನಕ್ಕೆ ಮುನ್ನ ಪಕ್ಷದ ರಾಜ್ಯ ಸಮ್ಮೇಳನಗಳು ನಡೆದವು. ನಾನು ಬಂಗಾಳ ರಾಜ್ಯಸಮಿತಿಯ ಕಾರ್ಯದರ್ಶಿಯಾಗಿದ್ದೆ.

ಪಕ್ಷದ ಅವಕಾಶ ಮತ್ತು ಸಾಮೂಹಿಕ ಚಳುವಳಿಗಳಲ್ಲಿ ಅದರ ಒಳಗೊಳ್ಳುವಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿತ್ತು. ಹೀಗಾಗಿ ನಾನು ಘಟಕಗಳ ಪಾತ್ರವನ್ನು ಗುರುತಿಸುವುದು ಹಾಗೂ ವಿಸ್ತರಿಸುವುದು ಅಗತ್ಯವಾಗಿತ್ತು. ಇಲ್ಲದಿದ್ದರೆ ವಿಧಾನಸಭೆಯ ಒಳಗೆ ಮತ್ತು ಹೊರಗೆ ಪಕ್ಷದ ಪ್ರಗತಿ ಕುಂಠಿತವಾಗುತ್ತಿತ್ತು.

ಸಂಘಟನೆಯಲ್ಲಿ ನಾನು ಹೊಂದಿದ್ದ ಜವಾಬ್ದಾರಿಗಳನ್ನು ಬೇರೆಯವರಿಗೆ ವಹಿಸಿಕೊಟ್ಟು ನಾನು ಪೂರ್ಣವಾಗಿ ಸಾಮೂಹಿಕ ಚಳುವಳಿಗೆ ಗಮನ ಕೊಡಬೇಕು ಎಂಬುದು ನನ್ನ ಅಭಿಪ್ರಾಯ ವಾಗಿತ್ತು. ನನ್ನನ್ನು ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆ ಮಾಡುವಂತೆ ರಾಜ್ಯಸಮಿತಿಯನ್ನು ಕೋರಿದೆ. ಅನೇಕ ಸಂಗಾತಿಗಳು ಅದಕ್ಕೆ ಒಪ್ಪಲಿಲ್ಲ. ಬರ್ದಮಾನ್‌ನಲ್ಲಿ 1961 ರಲ್ಲಿ ನಡೆಯಲಿರುವ ಪಕ್ಷದ ರಾಜ್ಯ ಸಮ್ಮೇಳನಗಳವರೆಗೆ



ಮಾತ್ರ ನಾನು ಕಾರ್ಯದರ್ಶಿಯಾಗಿ ಮುಂದುವರಿಯುವೆ ಎಂದು ಆಗ ನಾನು ಹೇಳಿದೆ. ಸಂಗಾತಿಗಳು ಅದಕ್ಕೆ ಸಮ್ಮತಿಸಿದರು. ಬರ್ದಮಾನ್‌ನಲ್ಲಿ ನಡೆದ 8ನೇ ರಾಜ್ಯ ಸಮ್ಮೇಳನ ದಲ್ಲಿ ಪ್ರಮೋದ ದಾಸ್ ಗುಪ್ತ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣೆಗಳ ನಂತರ 1957 ಜೂನ್‌ನಲ್ಲಿ ನಡೆದ ರಾಜ್ಯ ಸಮ್ಮೇಳನದಲ್ಲಿ ಪ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು ಪಕ್ಷವ ದೇಶಾದ್ಯಂತ ಬೆಳೆಸಲು ಕೇಂದ್ರ ಸಮಿತಿ ಆದ್ಯ ನೀಡುತ್ತದೆ ಎಂದು ಆ ಗೊತ್ತುವಳಿ ಹೇಳಿತು ಯಾವುದೇ ಪಕ್ಷವಾದರೂ ಪ್ರತಿ ಹಂತದ ಬೆಳೆಯದಿದ್ದರೆ ಪ್ರಭಾವ ಬೀರಲು ಅದ ಸಾಧ್ಯವಾಗದು ಎಂಬ ವಾಸ್ತವದ ಹಿನ್ನೆಲೆಯಲ್ಲಿ ಇದ ಹೆಚ್ಚಿನ ರಾಜಕೀಯ ಮಹತ್ವವಿತ್ತು. ಸದಸ್ಯ ನೊಂದಾವಣೆಯ ದೊಡ್ಡ ಆಂದೋಳನವೂ ಅಗತ (ಪಕ್ಷದ ಪತ್ರ, 1957, ನಂ.21 ಭಾರತ ಕಮ್ಯುನಿಸ ಪಕ್ಷ ಪಶ್ಚಿಮ ಬಂಗಾಳ ರಾಜ್ಯ ಸಮಿತಿ)

1957ರ ಡಿಸೆಂಬರ್ ಹೊತ್ತಿಗೆ ಸದಸ್ಯ ಬಲವನ್ನು ದುಪ್ಪಟ್ಟುಗೊಳಿಸಬೇಕು ಎಂದೂ ಪಕ್ಷ ಪತ್ರ ಒತ್ತಿಹೇಳಿತ್ತು. ತಕ್ಷಣವೇ ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕು ಎಂದಿತ್ತು.

ಚುನಾವಣೆ ಕೆಲಸ ಕಾರ್ಯಗಳು ಮತ್ತು ಚಳುವಳಿಗಳಲ್ಲಿ ಭಾಗವಹಿಸಿದವರಿಗೆ ಸದಸ್ಯತ್ವ ಕೊಡಬೇಕು. ಸದಸ್ಯತ್ವದ ಅರ್ಹತೆ ಸರಳವಾಗಿತ್ತು. ಪಕ್ಷದ ಆದರ್ಶಗಳನ್ನು ಪಾಲಿಸಬೇಕು, ಯಾವುದಾದರೂ ಮುಂಚೂಣಿ ಸಂಘಟನೆಯಲ್ಲಿ ಕೆಲಸ ಮಾಡಬೇಕು, ಪಕ್ಷದ ಶಿಸ್ತನ್ನು ಪಾಲಿಸಬೇಕು ಮತ್ತು ಪಕ್ಷದ ನಿಧಿಗೆ ಕೊಡುಗೆ ನೀಡಬೇಕು. ಈಗ ಹಿಂದೆ ನೋಡುವ ಪ್ರಶ್ನೆಯೇ ಇರಲಿಲ್ಲ. ಹೊಸ ಸದಸ್ಯರಿಗೆ ಶಿಕ್ಷಣ ನೀಡುವುದು ಮತ್ತು ಹಳೆ ಸದಸ್ಯರಲ್ಲಿ ಆದರ್ಶಗಳನ್ನು ಮರುಸ್ಥಾಪಿಸುವುದು ಮಹತ್ವದ ಕೆಲಸವಾಗಿತ್ತು. ದಾಖಲೆ ಪತ್ರಗಳು ಮತ್ತು ಸಂಶೋಧನಾ ಪ್ರಬಂಧಗಳನ್ನು ವ್ಯವಸ್ಥೆಗೊಳಿಸಿ ತರಗತಿಗಳನ್ನು ನಡೆಸಬೇಕಿತ್ತು.

ಬಂಗಾಳ ಪ್ರಾಂತೀಯ ಸಮಿತಿಯ ವಿಶೇಷ ಸಮ್ಮೇಳನವೊಂದು 1958 ರಲ್ಲಿ ನಡೆಯಿತು. ಅದೇ ವರ್ಷ ಸಿಪಿಐನ ಒಂದು ವಿಶೇಷ ರಾಷ್ಟ್ರೀಯ ಅಧಿವೇಶನವೂ ನಡೆಯಿತು. 1958 ಜನವರಿ 28 ರಂದು ರಾಜ್ಯ ವಿಶೇಷ ಸಮ್ಮೇಳನವನ್ನು ಸಿಪಿಐ ಪ್ರಧಾನ ಕಾರ್ಯದರ್ಶಿ ಅಜಯ್ ಘೋಷ್ ಉದ್ಘಾಟಿಸಿದರು. ಬಂಕಿಮ್ ಮುಖರ್ಜಿ ಸಮರ್ ಮುಖರ್ಜಿ, ಸೀತಾರಾಮ ಸಿಂಗ್, ಗೋಪಾಲ ಆಚಾರ್ಯ, ಮತ್ತು ಜೆದುಗೋಪಾಲ ಸೇನ್ ಪ್ರಾಂತೀಯ ಸಮಿತಿಯಲ್ಲಿದ್ದರು. ಒಟ್ಟು 24,448 ಸದಸ್ಯತ್ವ ದಲ್ಲಿ 346 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಪಶ್ಚಿಮ ಬಂಗಾಳ ಪ್ರಾಂತೀಯ ಸಮಿತಿಯ


ಸ್ಟಾಲಿನ್

ಕಾರ್ಯದರ್ಶಿಯಾಗಿ ನಾನು ಮುಖ್ಯ ವರದಿಯನ್ನು ಮಂಡಿಸಿದೆ. ಪಕ್ಷದ ಮುಖವಾಣಿಯಾಗಿ 'ಸ್ವಾಧೀನತಾ'ದ ಬೆಳವಣಿಗೆಯ ಬಗ್ಗೆ ಸರೋಜ್ ಮುಖರ್ಜಿ ವರದಿ ನೀಡಿದರು. ಹಿಂದಿ ಸ್ವಾಧೀನತಾ ಬಗ್ಗೆ ಇಂದ್ರಜೀತ್ ಗುಪ್ತಾ ವಿವರಿಸಿದರು.

ವ್ಯಾಪಕವಾದ ಚರ್ಚೆ ನಡೆಯಿತು. ಆತ್ಮ ಶೋಧನೆಯಲ್ಲಿ ಭವಿಷ್ಯ ಅಡಗಿದೆ ಎಂದು ತೀರ್ಮಾನಿಸಲಾಯಿತು. ಅಮೃತಸರ ಮಹಾಧಿವೇಶನದಲ್ಲಿ ಪಾಲ್ಗೊಳ್ಳಲು 62 ಪ್ರತಿನಿಧಿಗಳು ಮತ್ತು 10 ಪರ್ಯಾಯ ಪ್ರತಿನಿಧಿಗಳನ್ನು ಆರಿಸಲಾಯಿತು. ಅಮೃತಸರ ಮಹಾಧಿವೇಶನದ ಬಗ್ಗೆ ಆ ಮೇಲೆ ಹೇಳುವೆ. ಆದರೆ, ಈ ನಡುವೆ ಮಹಾನ್ ಹೋರಾಟಗಾರ-ಕ್ರಾಂತಿಕಾರಿ ಹೋಚಿಮಿನ್ ಭಾರತಕ್ಕೆ ಬಂದರು.

ಸ್ಫೂರ್ತಿ ತುಂಬಿದ ಹೋಚಿ ಮಿನ್....

ಮುಂದಿನ ವಾರ

ಕರ್ನಾಟಕ ಈ ವಾರ-ಬಂದ

ನೋಡುಗ: ಗುರುಶಾಂತ್.ಎಸ್.ವೈ

ಹೈಕೋರ್ಟ್‌ನ ಇನ್ನೊಂದು ಪೀಠದ ಸ್ಥಾಪನೆಯ ಸಾಧ್ಯತೆಯನ್ನು ಹೈಕೋರ್ಟ್‌ನ ಐವರು ನ್ಯಾಯಾಧೀಶರ ಸಮಿತಿ.. ತಳ್ಳಿಹಾಕಿದೆ. ಇದು ಪ್ರಕಟಣೆಯಾಗುತ್ತಿದ್ದಂತೆಯೇ ಹುಬ್ಬಳ್ಳಿ-ಧಾರವಾಡಗಳಲ್ಲಿ ಮತ್ತೆ ಚಳುವಳಿ ಆರಂಭಗೊಂಡಿದೆ. ಕೆಲವರಂತೂ ಪ್ರತ್ಯೇಕ ರಾಜ್ಯದ ಮಾತನ್ನು ಆಡಿದ್ದಾರೆ.

ಕರ್ನಾಟಕದ ಭೌಗೋಳಿಕ ಹಾಗೂ ಮೊಕದ್ದಮೆಗಳ ಪ್ರಮಾಣವನ್ನು ಗಮನಿಸಿದರೆ ಇನ್ನೊಂದು ನ್ಯಾಯಪೀಠದ ಅಗತ್ಯವಂತೂ ಇದ್ದೇ ಇದೆ. ಆ ಭಾಗದಲ್ಲಿ ಒಂದು ನ್ಯಾಯಪೀಠದ ಸ್ಥಾಪನೆಯ ಬೇಡಿಕೆ ನ್ಯಾಯಸಮ್ಮತವಾದುದು. ದೇಶದ ಉತ್ತರಪ್ರದೇಶದಲ್ಲಿ, ಅಲಹಬಾದ್, ಲಕ್ನೋ, ರಾಜಸ್ತಾನ, ಜೋಧ್‌ಪುರ, ಮಹಾರಾಷ್ಟ್ರದ ನಾಗಪುರ, ಇತ್ತೀಚೆಗೆ ತಮಿಳುನಾಡಿನಲ್ಲಿಯೂ ಹೈಕೋರ್ಟ್‌ನ ಇನ್ನೊಂದು ಪೀಠ ಸ್ಥಾಪನೆಯಾಗಿ ಕಾರ್ಯಾರಂಭಗೊಂಡಿದೆ. ಹೀಗಿರುವಾಗ ಧಾರವಾಡ-ಹುಬ್ಬಳ್ಳಿ, ಕಲಬುರ್ಗಿ, ಬಳ್ಳಾರಿ, ವಿಜಾಪುರದಲ್ಲಿ ನ್ಯಾಯಪೀಠ ಸ್ಥಾಪನೆಯಾಗಬೇಕೆಂಬ ಬೇಡಿಕೆ ಇರುವುದಿರಂದ ಸಾಧುವಲ್ಲ ಎಂದು ಸಮಿತಿಯು ಅಭಿಪ್ರಾಯ ಪಟ್ಟಿರುವುದು ಅಸಮಂಜಸವಾದದ್ದು. ಪೀಠ ಸ್ಥಾಪನೆಯ ಸ್ಥಳದ ಬಗ್ಗೆ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ ಅದನ್ನು ಸರ್ವಪಕ್ಷಗಳು, ಸಂಘಟನೆಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ, ವೈಜ್ಞಾನಿಕ ತೀರ್ಮಾನಕ್ಕೆ ಬರಬಹುದು.

ಉಚ್ಚ ನ್ಯಾಯಾಲಯದ ಪೀಠದ ಸ್ಥಾಪನೆಗೆ ತಮ್ಮ ಸರ್ಕಾರ ಬದ್ಧವೆಂದು ಮುಖ್ಯ ಮಂತ್ರಿಗಳೇನೋ ಹೇಳಿದ್ದಾರೆ. ವಿವಾದಗಳು ಎದ್ದು ಬಂದಾಗ ತಮ್ಮ ಬದ್ಧತೆಯನ್ನು ಪುನರುಚ್ಚರಿಸುವುದು ಮುಖ್ಯಮಂತ್ರಿಗಳಿಗೆ ರೂಢಿಯಾಗಿದೆ ಎಂದು ವ್ಯಾಪಕ ಟೀಕೆಗಳೂ ಇವೆ. ಆದ್ದರಿಂದ ತುಟಿಮೇಲಿನ ಬದ್ಧತೆ ಪ್ರದರ್ಶನಕ್ಕಿಂತ ಕೂಡಲೇ ಸರ್ವರ ಸಭೆ ಸೇರಿಸಿ, ಒಮ್ಮತ ರೂಪಿಸಲು ಮುಂದಾಗಬೇಕು. ಹುಬ್ಬಳ್ಳಿ-ಧಾರವಾಡದ ಪ್ರದೇಶದ ಜನತೆ ಸಹ ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುವುದು ಸರಿಯಲ್ಲ. ಪ್ರತ್ಯೇಕ ರಾಜ್ಯದ ಬೇಡಿಕೆ ಬಾಲಿಶಃ ಮಾತ್ರವಲ್ಲ ವಿಭಜನಾಕಾರಿಯಾಗಿದೆ ಎಂಬುದನ್ನು ಅರಿಯಬೇಕು.

★ ★ ★

ಹಾಲಿನ ಕಣಜವೆಂದೇ ಖ್ಯಾತವಾಗಿರುವ ಪಂಜಾಬ್, ಹರ್ಯಾಣದಲ್ಲಿ 40 ಸಾವಿರ ಟನ್ ಹಾಲಿನ ಪುಡಿಯು ಬಂದು ಕುಳಿತಿದೆ. ಹಾಲು ಉತ್ಪಾದಕ ರೈತರು ಕಂಗಾಲಾಗಿದ್ದಾರೆ. ಆದರೂ ಹಲವು ಕಂಪನಿಗಳು ಒಳಬರಲು ಕಾದಿವೆ. ಕರ್ನಾಟಕದಲ್ಲಿಯೂ ದಿನನಿತ್ಯ ಕೆ.ಎಂ.ಎಫ್. ನಿಂದ ಆರು ಲಕ್ಷ ಲೀಟರ್ ಹಾಲುಹೆಚ್ಚುವರಿಯಾಗಿ ಉತ್ಪಾದನೆಯಾಗುತ್ತಿದೆ. ಈ ಹೆಚ್ಚುವರಿ ಹಾಲು ಏನು ಮಾಡುವುದು ಎಂದು ಚಿಂತಾಜನಕ ಸ್ಥಿತಿಯಿರುವಾಗಲೇ ಆಂಧ್ರದ 'ಹೆರಿಟೇಜ್' ಹಾಲು (ಆಂಧ್ರದ ಮುಖ್ಯಮಂತ್ರಿಗಳದ್ದು) ಲಕ್ಷಾಂತರ ಲೀಟರ್ ಕರ್ನಾಟಕದೊಳಗೆ ಹರಿಯುತ್ತಿದೆ. ಅಮೆರಿಕದ 'ನೆಸ್ಲೆ' ಕಂಪನಿಯೊಂದಿಗೆ ಒಪ್ಪಂದವೇರ್ಪಟ್ಟಿದ್ದು ಕರ್ನಾಟಕದಲ್ಲಿ ಎರಗಲು ಹವಣಿಸಿದೆ. ಒಂದೆಡೆ ಕೇಂದ್ರ ಸರ್ಕಾರದ 'ಎಕ್ಸಿಮ್' ಪಾಲಿಸಿಯಿಂದ ಹೊಸ ಹೊಸ ಆಕ್ರಮಣಗಳು ಬರತೊಡಗಿವೆ. ರಾಜ್ಯದ ಮುಖ್ಯಮಂತ್ರಿಗಳು ಅದೇ ನೀತಿಗಳನ್ನು ಅನುಸರಿಸಿ ಕೀರ್ತಿ ಪಡೆಯಲು ಕಾತರಿಸುತ್ತಿದ್ದಾರೆ. ಈ ನಡುವೆಯೇ ಹೆರಿಟೇಜ್ ಸೇರಿ ಖಾಸಗಿ ಹಾಲು ಮಾರಾಟಕ್ಕೆ ಕರ್ನಾಟಕದಲ್ಲಿ ಅವಕಾಶ ಇಲ್ಲವೆಂದು ರಾಜ್ಯದ ಸಹಕಾರ ಸಚಿವರು ಡಿ.ಕೆ.ಶಿವಕುಮಾರ್ ಕಿಡಿನುಡಿ ಆಡಿದ್ದಾರೆ. ಇದು ಸ್ವಾಗತಾರ್ಹ. ಈ ಸಹಕಾರ ಸಂಘಗಳನ್ನು ಬಲಪಡಿಸಬೇಕು. ರೈತರನ್ನು ಅದರ ಎಲ್ಲಾ ವ್ಯವಹಾರಗಳಲ್ಲಿ ಭಾಗಿಯಾಗಲು ಪೂರ್ಣ ಅವಕಾಶ ಕಲ್ಪಿಸಬೇಕು. ಹೀಗಾದಲ್ಲಿ ರಾಜ್ಯದ ರೈತರ ಹಿತವನ್ನು ಕಾಪಾಡಬಹುದಲ್ಲದೆ ಆರ್ಥಿಕ ಪ್ರಗತಿ ಸಾಧಿಸಬಹದು. 19 ರಂದು ಬರಲಿರುವ ಜಂಟಿ ಸಮಿತಿ ಮುಂದೆ ಸಂಸತ್ ಸದಸ್ಯರು ಸರ್ಕಾರದ ಪ್ರತಿನಿಧಿಗಳು ರೈತರ ಹಿತಗಳನ್ನು ಕಾಯಲು ಜೊತೆಗೂಡಬೇಕಿದೆ.

★ ★ ★

ವಿಶ್ವಬ್ಯಾಂಕಿನೊಂದಿಗೆ ಮಾಡಿಕೊಳ್ಳಲಾದ ಒಳ ಒಪ್ಪಂದಗಳೆಂಬ ವಿಷದ ಹಾವುಗಳು ಮುಖ್ಯಮಂತ್ರಿ ಕೃಷ್ಣರವರ ಕೋಟಿನ ಜೇಬಿನಿಂದ ಒಂದೊಂದಾಗಿ ಜನರೆಡೆಗೆ ಹರಿಹಾಯತೊಡಗಿವೆ. ರಾಜ್ಯದ ಇಡೀ ನೀರಾವರಿ ವ್ಯವಸ್ಥೆಯನ್ನು 'ಬಳಕೆದಾರರ ಸಹಕಾರಿ ಸಂಘ'ಗಳಿಗೆ ವಹಿಸುವ 'ಸುಗ್ರೀವಾಜ್ಞೆ'ಯನ್ನು ಈ ಗುಲಾಮ ದೊರೆಗಳು ಹೊರಡಿಸಿದ್ದಾರೆ. ಸದನದಲ್ಲಿ ಮಂಡಿಸಿ ಚರ್ಚೆ ನಡೆಸಲಾಗದೇ ಹೇಡಿತನದಿಂದ ಹೊರಡಿಸಿದ ಈ ಸರ್ವಾಧಿಕಾರದ ಫರ್ಮಾನು ರಾಜ್ಯದ ರೈತರ ಪಾಲಿಗೆ ಉರುಳಾಗಲಿದೆ. ಈಗಾಗಲೇ ವಿದ್ಯುತ್ ದರಗಳ ಏರಿಕೆ, ಕುಡಿಯುವ ನೀರಿನ ಖಾಸಗೀಕರಣ ಎಂಬ ಘಾತುಕ ತೀರ್ಮಾನಗಳೂ

ಕೇಂದ್ರ ಸರ್ಕಾರದ ಆಮದು ನೀತಿ ವಿರುದ್ಧ ಆಂದೋಲನ

ಉದಾರೀಕರಣದ ದಿಕ್ಷಗಾಳಿ ದೇಶದೆಲ್ಲೆಡೆ ಮೆಲ್ಲ ಮೆಲ್ಲನೆ ಪಸರಿಸತೊಡಗಿದೆ. ನ್ಯೂಟ್ರಾನ್ ರಕ್ಕಸಿಯಂತೆ ಅದು ಉಸಿರಾಡಿದೆಡೆಯೆಲ್ಲಾ ಕೃಷಿ ಕೈಗಾರಿಕೆ, ದಿವಾಳಿಯೆದ್ದು ಜೀವದುಸಿರು ಕಳೆದುಕೊಂಡಿವೆ. ಈ ಅಧಃಪತನ, ಜನ ಆಕ್ರಂದನಗಳು ಆಳುವವರಿಗೆ ಕೇಳಿಸುತ್ತಿಲ್ಲ, ಕೇಳಿದರೂ ಅದೆಲ್ಲಾ ಮಹಾನ್ ಧ್ಯೇಯ ಸಾಧನೆಗೆ ಚಿಲ್ಲರೆ ಸಂಗತಿಗಳು.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಣ್ಣ ಕೈಗಾರಿಕೆಗಳ ಸಂಘ 'ಕಾಸಿಯಾ'ದ ಸಮಾರಂಭದಲ್ಲಿ ಮಾತನಾಡಿದ ಉದ್ದಿಮೆದಾರರು' ದೇಶದಲ್ಲಿ ಹತ್ತಾರು ಲಕ್ಷ ಸಣ್ಣ ಕೈಗಾರಿಕೆಗಳು ಮುಚ್ಚಿವೆ. ಇನ್ನೂ ಲಕ್ಷಾಂತರ ಮುಚ್ಚಲಿವೆ, ಆದ್ದರಿಂದ ಈ ಉದಾರೀಕರಣ, ಜಾಗತೀಕರಣ ನೀತಿಯ ಧಾಳಿಯಿಂದ ರಕ್ಷಿಸಿ ' ಎಂದು ಮೊರೆದವರು ಹಲವರು. ಕೋಟ್ಯಾಂತರ ಜನರಿಗೆ ಉದ್ಯೋಗ ಒದಗಿಸುತ್ತಿದ್ದ ಈ ವಲಯ ಬಿಕ್ಕಳಿಸುತ್ತಿದೆ. ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಗುಲಬರ್ಗಾ, ಮಂಗಳೂರು ಮುಂತಾದ ನಗರಗಳ ಕೈಗಾರಿಕಾ ವಸಾಹತುಗಳಲ್ಲಿ ಎಲ್ಲವೂ ಮುಗಿದು ಹೋದಂತೆ ಸ್ಮಶಾನ ಮೌನದಲ್ಲಿ ನೆಲಕಚ್ಚುತ್ತಿರುವ ದೃಶ್ಯ ಕಾಣುತ್ತದೆ. ಸಣ್ಣ- ದೇಶೀಯ ಕೈಗಾರಿಕೆ, ಕೃಷಿ ಕೊನೆಯುಸಿರೆಳೆಯುವ ದಿಕ್ಕಿನತ್ತ ಸಾಗಲು ಮುಖ್ಯ ಕಾರಣ ಕೇಂದ್ರ ಸರ್ಕಾರದ ಆಮದು-ರಫ್ತು ನೀತಿ. ಎನ್.ಡಿ.ಎ. ಕೇಂದ್ರಸರ್ಕಾರ ಎಕ್ಸಿಂ ಪಾಲಿಸಿ ಎಂದು ಘೋಷಿಸಿದ ನೀತಿ, ಕೃಷಿ-ಕೈಗಾರಿಕೆಗಳ ಚರಮಗೀತೆಯ ನೀತಿ.

ಕೃಷಿ ಉತ್ಪನ್ನಗಳು, ಅಡಿಕೆ, ಕಾಫಿ, ತೆಂಗು, ಭತ್ತ, ಗೋಧಿ, ಹತ್ತಿ ರೇಷ್ಮೆ ಎಣ್ಣೆಕಾಳು ಬೇಳೆ... ಒಂದೆರಡಲ್ಲ, ಬಹುತೇಕ ಎಲ್ಲಾ ಕೃಷಿ ಉತ್ಪನ್ನಗಳು ವಿದೇಶಗಳಿಂದ ದೇಶದ ಮಾರುಕಟ್ಟೆಯೊಳಗೆ ಪ್ರವಾಹೋಪಾದಿಯಲ್ಲಿ ನುಗ್ಗತೊಡಗಿವೆ. ಪಂಜಾಬ್ ಪ್ರಾಂತ್ಯಕ್ಕೆ ಲಕ್ಷಾಂತರ ಕಿಲೋ ಹಾಲಿನ ಪುಡಿ ಅಮೇರಿಕಾದಿಂದ ಒಂದು ಕಂತಿನಲ್ಲೇ ಬಂದುಕುಳಿತು ರೈತರನ್ನು ಕಂಗಾಲಾಗಿಸಿದೆ. ಮಿಲಿಯ ಮಿಲಿಯ ಟನ್ ಅಡಿಗೆ ಎಣ್ಣೆ ಹೊತ್ತ ಹಡಗುಗಳು ನಿತ್ಯವೂ ಮಂಗಳೂರು, ಮದ್ರಾಸ್, ಗುಜರಾತ್, ಬಾಂಬೆಗಳ ಸಮುದ್ರತೀರದಲ್ಲಿ ಬಂದು ಸೇರುತ್ತವೆ. ಎಣ್ಣೆ ಸುರಿದು ಮತ್ತೇ ಹಿಂತಿರುಗುತ್ತವೆ. ಹೀಗೆ ರೈತರು ಬೆಳೆದ ಬೆಳೆಗೆ ಬೆಲೆಯಿಲ್ಲದೇ ರೈತರು, ಕೈಗಾರಿಕೆ ನಡೆಯದೇ ಉದ್ದಿಮೆದಾರರು ಕಂಗಾಲಾಗಿದ್ದಾರೆ.

ಆದರೆ ಅಗತ್ಯ ವಸ್ತುಗಳ ಬೆಲೆ ಕಡಿಮೆ ಇದೆಯೇ? ಇಲ್ಲ ಅವುಗಳ ಬೆಲೆಯೂ ಏರುತ್ತಲೇ ಇದೆ. ಪಡಿತರ ಅಂಗಡಿಯಲ್ಲಿ ದೊರೆಯುವ ಕಳಪೆ ಗುಣಮಟ್ಟದ ವಸ್ತುಗಳಾದರೂ ವಿಪರೀತವಾಗಿ ಹೆಚ್ಚಿಸಲಾದ ಬೆಲೆ ಏರಿಕೆಯಿಂದಾಗಿ ಖರೀದಿಸದ ಸ್ಥಿತಿಗೆ ಜನಸಾಮಾನ್ಯರು ನೂಕಲ್ಪಟ್ಟಿದ್ದಾರೆ. ಈ ಮೂಲಕ ಕೇಂದ್ರ, ಸರ್ಕಾರ ಬಡವರಿಂದ ಹೊಟ್ಟೆಯ ಹಿಟ್ಟನ್ನು ಕಸಿದುಕೊಳ್ಳತೊಡಗಿದೆ. ಮುಕ್ತ ಮಾರುಕಟ್ಟೆಯ ಬೆಲೆಗಳ ಎದುರು ನಿಲ್ಲದ ಸ್ಥಿತಿ.

ಕೇಂದ್ರದ ಎನ್.ಡಿ.ಎ ಸರ್ಕಾರದ ಪ್ರಧಾನಿ ವಾಜಪೇಯಿ ಸಂಪುಟದ ಉದಾರೀಕರಣದ ಆರಾಧಕರು ಈ ನೀತಿಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲವೆಂದು ಘೋಷಿಸುತ್ತಿದ್ದಾರೆ. ಇಂತಹ ನೀತಿಗಳಿಂದಲೇ ತಮಗೂ ಮುಕ್ತಿಯೆಂದು ಹೈಟೆಕ್ ರಾಜ್ಯದ ಭ್ರಮಾದೀನ ಮುಖ್ಯಮಂತ್ರಿ ಕೃಷ್ಣರವರು ಭಾವಿಸಿದ್ದಾರೆ. ಬಿಜೆಪಿ ಸರ್ಕಾರದ ದುಷ್ಟ ಜನವಿರೋಧಿ ನೀತಿಗಳ ಬವಣೆಗಳಿಗೆ ಕಿಂಚಿತ್ತಾದರೂ 'ಪರಿಹಾರ' ಜನರಿಗೆ ನೀಡಬಹುದಾದ ಎಲ್ಲಾ ಅವಕಾಶಗಳನ್ನೂ ನಿರಾಕರಿಸಿ, ಅವರೊಂದಿಗೆ ಸ್ಪರ್ದೆಗಿಳಿಯಬಯಸುತ್ತಾರೆ. ಕೇಂದ್ರ ರಾಜ್ಯದ ನಾಯಕರು ಮೇ 11ರ ಯಶಸ್ವಿ ಸಾರ್ವತ್ರಿಕ ಮುಷ್ಕರದ ಯಶಸ್ಸು, ಜನರ ಆಕ್ರೋಶಗಳನ್ನು ಪರಿಗಣಿಸುವ ಗೋಜಿಗೆ ಹೋಗಬಯಸುತ್ತಿಲ್ಲ.

ಈ ಸ್ಥಿತಿಯಲ್ಲಿ ಇಂತಹ ನೀತಿಗಳ ವಿರುದ್ಧ ಜನರನ್ನು ಜಾಗೃತಗೊಳಿಸಿ, ಅವಕ್ಕೆ ಎದುರಾಗಿ ಹೋರಾಡುವುದು ಒಂದೇ ಮಾರ್ಗವೆಂದು ಸಿಪಿಐಎಂನ ದೃಡ ನಂಬಿಕೆ. ಅಂತೆಯೇ ರಾಜ್ಯದಾದ್ಯಂತ ಪ್ರಬಲ ಆಂದೋಲನವನ್ನು ರೂಪಿಸಲು ಇದೇ ಜೂನ್ 13, 14 ರಂದು ಬೆಂಗಳೂರಿನಲ್ಲಿ ಸೇರಿದ್ದ ಸಿಪಿಐ(ಎಂ)ನ ರಾಜ್ಯಸಮಿತಿಯು ನಿರ್ಧರಿಸಿದೆ. ಇದನ್ನು ಯಶಸ್ವಿಗೊಳಿಸಲು ಎಲ್ಲರಲ್ಲಿ ವಿನಂತಿಸಲಾಗಿದೆ.

- ಜುಲೈ ತಿಂಗಳ ಕೊನೆಯೊಳಗ ತಾಲೂಕುಸಮಾವೇಶಗಳು.
- ಆಗಸ್ಟ್ ತಿಂಗಳಿನಲ್ಲಿ 15 ದಿನಗಳ ಪ್ರಚಾರ-ಪ್ರಕ್ಷೋಭೆ.
- ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ರ‍್ಯಾಲಿಗಳು, ಕೇಂದ್ರ ಕಛೇರಿಗಳ ಎದುರು ಪಿಕೆಟಿಂಗ್.

ತಾಲ್ಲೂಕು, ಜಿಲ್ಲಾಪಂಚಾಯತಿ ಚುನಾವಣೆಗಳು ಬಿಜೆಪಿಗೆ ಶಿಕ್ಷೆ - ಕಾಂಗ್ರೆಸ್‌ಗೆ ಲಾಭ

ತಾಲ್ಲೂಕು, ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಬಿ.ಜೆ.ಪಿ. ಹೀನಾಯ. ಸೋಲು ಅನುಭವಿಸಿದೆ. ರಾಜ್ಯ ವಿಧಾನಸಭೆಯಲ್ಲಿ 44 ಸ್ಥಾನಗಳನ್ನು ಹೊಂದಿರುವ ಬಿಜೆಪಿ ಇಡಿ ರಾಜ್ಯದಲ್ಲಿ ಕೇವಲ 41 ಜಿಲ್ಲಾ ಪಂಚಾಯತ್ ಸ್ಥಾನಗಳನ್ನು ಪಡೆದಿದೆ. ಅದರ ಭದ್ರ ಕೋಟೆಗಳೆಂದು ಪರಿಗಣಿಸಲ್ಪಡುತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇವಲ ಒಂದು ಜಿಲ್ಲಾ ಪಂಚಾಯತ್ ಸ್ಥಾನವನ್ನು ಪಡೆದುಕೊಂಡಿರುವ ಬಿಜೆಪಿಗೆ ಉಡುಪಿ ಜಿಲ್ಲೆಯಲ್ಲಿ ಒಂದು ಸ್ಥಾನವೂ ಸಹ ದೊರೆಯಲಿಲ್ಲ. ಕೋಲಾರ, ಚಾಮರಾಜನಗರ, ಹಾಸನ, ಬೆಳಗಾವಿ ಮೊದಲಾದ ಜಿಲ್ಲೆಗಳಲ್ಲಿ ಬಿಜೆಪಿಗೆ ಖಾತೆಯನ್ನು ತೆರೆಯಲು ಸಾಧ್ಯವಾಗಿಲ್ಲ.

ಕೋಮುವಾದಿ ಬಿಜೆಪಿಯನ್ನು ಮತ್ತೊಮ್ಮೆ ನಿರ್ಣಾಯಕವಾಗಿ ಹಿಂದಕ್ಕೆ ತಳ್ಳುವ ಮೂಲಕ ಕರ್ನಾಟಕದ ಜನತೆ ತಾವು ಜಾತ್ಯಾತೀತ ಶಕ್ತಿಗಳ ಪರ ಎಂದು ತೋರಿಸಿರುವುದು ಸ್ವಾಗತಾರ್ಹ.

ಸಂಪಾದಕೀಯ

ಕಾಂಗ್ರೆಸಿಗೆ ಅವರ ನಿರೀಕ್ಷೆಗೆ ಮೀರಿ ಜಯ ದೊರಕಿದೆ. ಇದು ತಮ್ಮ ಸರ್ಕಾರದ ಹೈಟೆಕ್ ನೀತಿಗಳಿಗೆ ದೊರೆತ ಜನಬೆಂಬಲ ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಭಾವಿಸಿದ್ದರೆ, ಅದು ಕೇವಲ ಅವರ ಭ್ರಮೆ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಜನವಿರೋಧಿ ನೀತಿಗಳಿಗಾಗಿ ರಾಜ್ಯದ ಜನತೆ ಬಿಜೆಪಿಯನ್ನು ತಿರಸ್ಕರಿಸಿದ್ದು ಮತ್ತು ಕಾಂಗ್ರೆಸ್ - ಬಿಜೆಪಿಯೇತರ ವಿರೋಧ ಪಕ್ಷಗಳ ನಡುವಿನ ಅನೈಕ್ಯತೆಯಿಂದಾಗಿ ಕಾಂಗ್ರೆಸಿಗೆ ಲಾಭವಾಗಿದೆ.

ಕೇಂದ್ರ ಸರ್ಕಾರದಂತೆಯೇ, ರಾಜ್ಯ ಕಾಂಗ್ರೆಸ್ ಸರ್ಕಾರವೂ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳ ದಾರಿಯಲ್ಲಿಯೇ ಧಾವಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಕೃಷ್ಣ ಸರ್ಕಾರವು ಜನರ ದೊಡ್ಡ ಪ್ರತಿರೋಧವನ್ನು ಎದುರಿಸಬೇಕಾಗುವುದು. ಈ ಫಲಿತಾಂಶಗಳ ಬೆನ್ನಲ್ಲೇ ನಗರ ನೀರು ಸರಬರಾಜು ವ್ಯವಸ್ಥೆಯನ್ನು ಹಾಗೂ ವಿದ್ಯುತ್ ಪ್ರಸರಣ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ರಾಜ್ಯ ಸರ್ಕಾರದ ಯೋಚನೆ ಖಂಡನೀಯ ಅಲ್ಲದೆ ವಿದ್ಯುತ್ ಹಾಗೂ ನೀರಾವರಿ ದರ ಏರಿಕೆಯ ಪ್ರಸ್ತಾಪವನ್ನು ಕೂಡಲೇ ಕೈಬಿಡಬೇಕು.

ಶಿಕ್ಷಣ ಶುಲ್ಕ ಹೆಚ್ಚಳ - ಶಾಲಾ ವೇಳೆ ಬದಲಾವಣೆಗೆ ವಿರೋಧ

ರಾಜ್ಯದಲ್ಲಿ ಶಾಲೆ ಕಾಲೇಜುಗಳ ಶುಲ್ಕವನ್ನು ಹೆಚ್ಚಿಸಿರುವ ಹಾಗೂ ಶಾಲಾ ವೇಳೆಯನ್ನು ಬದಲಾಯಿಸಿರುವ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಮಾಧ್ಯಮಿಕ ಶಾಲೆಗಳಲ್ಲಿ 14 ರೂ. ಇದ್ದ ಶುಲ್ಕವನ್ನು ರೂ. 30 ಕ್ಕೆ ಹಾಗೂ ಪ್ರೌಢ ಶಾಲೆಗಳಲ್ಲಿ ರೂ. 65 ಇದ್ದ ಶುಲ್ಕವನ್ನು ರೂ. 144 ಕ್ಕೆ ಏರಿಸಲಾಗಿದೆ. ಸರ್ಕಾರದ ಈ ನಿರ್ಧಾರದಿಂದ ಬಡವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದು ಹೆಚ್ಚುವುದಲ್ಲದೆ 14 ವರ್ಷ ವಯಸ್ಸಿನವರೆಗೆ ಉಚಿತ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕೆಂಬ ಸಂವಿಧಾನದ ನಿರ್ದೇಶಕತತ್ವವನ್ನು ಉಲ್ಲಂಘಿಸಿದಂತಾಗುವುದು.

ಪಾಲಿಟೆಕ್ನಿಕ್ ಕಾಲೇಜುಗಳ ಶುಲ್ಕವನ್ನು ಹೆಚ್ಚಿಸಿರುವುದು ಮತ್ತು ಇಲ್ಲಿಯವರೆಗೆ ಉಚಿತವಾಗಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮೇಲೆಯೂ ಶುಲ್ಕವನ್ನು ಹೇರಿರುವುದು ಖಂಡನೀಯವಾಗಿದೆ.

ಸಹಾಯಧನ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿರುವ ಅಧ್ಯಾಪಕರಲ್ಲಿ ಕೆಲವರನ್ನು ಹೆಚ್ಚುವರಿ ಎಂದು ಪರಿಗಣಿಸಿ ಕಿತ್ತು ಹಾಕುವ ಕ್ರಮ ಕೈಗೊಂಡಿದೆ. ಈ ನೇಮಕಾತಿಗಳು ಸರ್ಕಾರಿ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿಗಳ ದೋಷದಿಂದಾದುಕ್ಕೆ ಸಂಬಂಧಪಟ್ಟ ಶಿಕ್ಷಕರ ಜೀವನಕ್ಕೆ ಕೊಡಲಿಪೆಟ್ಟು ಹಾಕುವುದು ಯಾವ ರೀತಿಯಲ್ಲೂ ನ್ಯಾಯವಲ್ಲ. ಆದುದರಿಂದ ಒಬ್ಬ ಶಿಕ್ಷಕನು ಕೆಲಸ ಕಳೆದುಕೊಳ್ಳುವಂತಾಗದೆ ಅವರ ಸೇವೆಯನ್ನು ಬಳಸಿಕೊಳ್ಳಬೇಕು. ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳನ್ನು ಶಿಕ್ಷಿಸಬೇಕು.

ಶಾಲೆಗಳ ವೇಳೆಯನ್ನು ಬದಲಾವಣೆ ಮಾಡಿ ಸರ್ಕಾರ ಅನಗತ್ಯ ಗೊಂದಲವನ್ನು ಉಂಟು ಮಾಡಿದೆ. ವೇಳೆ ಬದಲಾವಣೆಯಿಂದ ವಿದ್ಯಾರ್ಥಿಗಳಿಗೆ, ಮುಖ್ಯವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲಕ್ಕಿಂತ ಹೆಚ್ಚು ಅನಾನೂಕೂಲವಾಗಲಿದ್ದು ಸರ್ಕಾರ ಶಾಲಾ ವೇಳೆ ಬದಲಾವಣೆಯ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ವಿಧಾನಪರಿಷತ್ ಚುನಾವಣೆಯಲ್ಲಿ ಜಾತ್ಯಾತೀತ ಜನತಾದಳಕ್ಕೆ ಸಿಪಿಐ(ಎಂ) ಬೆಂಬಲ

ಪದವೀಧರ ಹಾಗೂ ಶಿಕ್ಷಕ ಕ್ಷೇತ್ರಗಳಿಂದ ರಾಜ್ಯ ವಿಧಾನಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಜಾತ್ಯಾತೀತ ಜನತಾದಳದ ಅಭ್ಯರ್ಥಿಗಳನ್ನು ಬೆಂಬಲಿಸಲು ಸಿಪಿಐ(ಎಂ) ನಿರ್ಧರಿಸಿದೆಯೆಂದು ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ನೋಟ

ಪಾಲಿಗೆ ಉರುಳಾಗಲಿದೆ. ಈಗಾಗಲೇ ವಿದ್ಯುತ್ ದರಗಳ ಏರಿಕೆ, ಕುಡಿಯುವ ನೀರಿನ ಖಾಸಗೀಕರಣ ಎಂಬ ಘಾತುಕ ತೀರ್ಮಾನಗಳೂ ಸಹ ಇದೇ ಸ್ವರೂಪದವು. ಈಗಾಗಲೇ ಕೃಷಿರಂಗದ ಜುಟ್ಟು ಬಹುತೇಕ ವಿಶ್ವಬ್ಯಾಂಕಿನ ಕೈಯಲ್ಲಿದೆ ಎಂಬುದನ್ನು ನೆನಪಿಸಿಕೊಳ್ಳಬೇಕು.

ಈ ಸುಗ್ರೀವಾಜ್ಞೆಯಂತೆ ನೀರಾವರಿ ಇಲಾಖೆ ಅಥವಾ ನಿಗಮಗಳಿಂದ ಬಳಕೆದಾರರ ಸಂಘಗಳು ನೀರನ್ನು ಪಡೆದು ಬಳಸುವುದು, ಅದರ ವೆಚ್ಚ ನಿಗದಿ, ಬಂಡವಾಳಸಂಗ್ರಹ, ನೀರು ಹಂಚಿಕೆ ಪ್ರಮಾಣ, ಕಾಲುವೆಗಳ ನಿರ್ವಹಣೆ, ಬೆಲೆ ವಿಧಾನದ ನಿರ್ಧಾರ ಮುಂತಾದವುಗಳನ್ನು ವಹಿಸಿಕೊಳ್ಳುತ್ತವೆ. ಇಲ್ಲಿ ರೈತರದ್ದೇ ಸಂಘಗಳು ಎಂಬುದು ಆಕರ್ಷಕವಾದರೂ ಸರ್ಕಾರ ಎಲ್ಲವನ್ನು ಖಾಸಗಿಯವರಿಗೆ ಮತ್ತು ಲಾಭ ಎಂಬ ಸುಲಿಗೆಯ ವ್ಯಾಪಾರಕ್ಕೆ ನಿಷ್ಠುರವಾಗಿ ಅದರತ್ತ ಇದನ್ನು ತಳ್ಳುವುದು ಸ್ಪಷ್ಟವಾದ ಅಂಶ. ಈ ಸರ್ವಾಧಿಕಾರಿ, ಜನದ್ರೋಹಿ ನೀತಿಯನ್ನು ವಿರೋಧಿಸಬೇಕಿದೆ.

★ ★ ★

ಆಶ್ರಯ ವಸತಿ ಯೋಜನೆಯ ಅಧ್ಯಕ್ಷರು ಆಯಾ ಕ್ಷೇತ್ರದ ಶಾಸಕರಾಗಿರುತ್ತಾರೆ ಎಂಬ ಅತ್ಯಂತ ಪ್ರಜಾಪ್ರಭುತ್ವ ಹಾಗೂ ಜನವಿರೋಧಿ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಮತ್ತು ಯೋಜನೆಯ ಜಾರಿಯ ಹೊಣೆಯನ್ನು ಜಿಲ್ಲಾ ಆಡಳಿತಕ್ಕೆ ವಹಿಸಿದೆ.

ಅತ್ಯಂತ ದುರ್ಬಲ, ನಿರ್ಗತಿಕ ಜನತೆಗಾಗಿ ರೂಪಿಸಿದ ಈ ಯೋಜನೆ ಎಷ್ಟೆಲ್ಲಾ ಹಗರಣ, ಅವ್ಯವಹಾರಗಳ ಉರಿಯಲ್ಲಿ ಬೆಂದು ಹೋಗಿದೆ ಎಂಬುದು ಮನೆ ಮನೆಯ ಕಥೆಯಾಗಿದೆ. ಈಗ ಕಾಂಗ್ರೆಸ್ ಮತ್ತೆ ಈ ಯೋಜನೆಯನ್ನು ಶಾಸಕರ ಮಡಿಲಿಗೆ ಹಾಕಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದೆಂದರೆ ಪ್ರಜಾಪ್ರಭುತ್ವದ ಕ್ರಿಯೆಗೆ ಸದಾ ಸಂಚಕಾರ. ಈ ಶಾಸಕರ ನೇತೃತ್ವದ ಸಮಿತಿಗಳು ಬಹುತೇಕ ಕಡೆಗಳಲ್ಲಿ ಅಗತ್ಯವಿರುವವರಿಗೆ ಬಿಟ್ಟು ತೀರಾ ಪಕ್ಷಪಾತ ನೀತಿ, ಅನುಸರಿಸಿರುವ ಉದಾಹರಣೆಗಳು ನೂರಾರು. ಬಳ್ಳಾರಿಜಿಲ್ಲೆಯ ಹೊಸಪೇಟೆಯಲ್ಲಿ ಆಶ್ರಯದ ಮನೆಗಳು ಶ್ರೀಮಂತರಿಗೆ, ಶಾಸಕರ ಚೇಲಾಗಳಿಗೆ, ರಾಜಕೀಯ ಪುಡಾರಿಗಳಿಗೆ ಪೂರ್ತಿ ಹಂಚಿಕೆಯಾದ ಪ್ರಕರಣದ ವಿರುದ್ಧ ನಡೆಸುತ್ತಿರುವ ಹೋರಾಟ ಏಳು ವರ್ಷಗಳಾದರೂ ಇನ್ನೂ ಫಲಿತಾಂಶ ಮಾತ್ರ ಶೂನ್ಯ. ಇದು ಒಂದು ಉದಾಹರಣೆ ಮಾತ್ರ.


ಆದ್ದರಿಂದ ಶಾಸಕರ ಅಧ್ಯಕ್ಷತೆಯ ನಿರ್ಧಾರ ಮತ್ತು ಅಧಿಕಾರಶಾಹಿಗಳಿಗೆ ನೀಡಿರುವ ಅಧಿಕಾರ ರದ್ದುಪಡಿಸಬೇಕು. ನಿಜವಾದ ಫಲಾನುಭವಿಗಳಿಗೆ ಆಶ್ರಯಮನೆ ಸಿಗಬೇಕಾದಲ್ಲಿ ಇಡೀ ಯೋಜನೆಯನ್ನು ಗ್ರಾಮಪಂಚಾಯತ್‌ಗಳಿಗೆ, ಅದರಲ್ಲೂ ಗ್ರಾಮ ಸಭೆಗಳಿಗೆ ಅಧಿಕಾರ ನೀಡಬೇಕು. ಅದರ ಯಶಸ್ವೀ ಕಾರ್ಯಾಚರಣೆಗೆ ಸರ್ಕಾರ ಬದ್ಧವಾಗಿ ಪ್ರೋತ್ಸಾಹಿಸಬೇಕು. ಕಾಂಗ್ರೆಸ್ ಸಂಸತಿ ಬದಲಾಗುವುದೆ?

★ ★ ★

ಅಂತೂ ನಡೆಸಲೇಬಾರದೆಂದಿದ್ದ ಸಹಕಾರ ಸಂಘಗಳ ಚುನಾವಣೆಗಳನ್ನು ಜುಲೈ ಒಳಗೆ ಪೂರ್ತಿಗೊಳಿಸಬೇಕೆಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿ ನಿರ್ದೇಶನ ನೀಡಿದೆ. ಕಾಂಗ್ರೆಸ್‌ನ ಹುಟ್ಟುಗುಣದಂತೆ ಈ ಸಂಘಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿ ತನ್ನ ಹಿಡಿತದಲ್ಲಿಡಲು ಹವಣಿಸಿತ್ತು. ಮತ್ತು ಚುನಾವಣೆಗಳು ಮುಂದೂಡಲು ಶತಾಯಗತಾಯ ಪ್ರಯತ್ನಿಸಿತ್ತು.

ಬಹುತೇಕ ಸಹಕಾರ ಸಂಘಗಳೆಂದರೆ ರಾಜಕೀಯ ಪುಡಾರಿಗಳ ಆಡಂಬೋಲದ ಮೈದಾನವಾಗಿವೆ. ಜನಸಾಮನ್ಯರು ಶೇಕಡವಾರು ಅಥವಾ ಸದಸ್ಯರುಗಳಾಗಿರುವುದು ತೀರಾ ಕಡಿಮೆ. ಹೀಗಾಗಿ ಜನ ದೂರವಾಗಿ ತೀರಾ ಸೀಮಿತಗೊಂಡು ಅದರಲ್ಲಿ ಸೌಲಭ್ಯಗಳು ಸಿಗದೇ ಹೋಗಿ, ಸಂಘದ ಆಸ್ತಿ-ವಹಿವಾಟುಗಳನ್ನು ಸೊಂಪಾಗಿ ಮೇದು 'ಹಾನಿ' ಎಂಬ ಕೊಳಚೆಗೆ ನೂಕುವುದು ಸರ್ವಸಾಧಾರಣ ಕಂಡುಬರುವ ದೃಶ್ಯ. ಹೇಗೋ ಹೇಗೋ ಅನುಭವಿಸಬಯಸಿದ ಕಾಂಗ್ರೆಸ್‌ನ ಹವಣಿಕೆಗೆ ಕೋರ್ಟ್ ತೀರ್ಪು ಏಟು ನೀಡಿದೆ. ಇದು ಸ್ವಾಗತಾರ್ಹ ತೀರ್ಪು.

ಶಾಂತಿ ಮತ್ತು ಅಭಿವೃದ್ಧಿಗಾಗಿ ಈಶಾನ್ಯ ರಾಜ್ಯಗಳಲ್ಲಿ ಬೃಹತ್ ರ್‍ಯಾಲಿ



ಏಳು ಜನ ಸಹೋದರಿಯರು ಎಂದು ಕರೆಯಲ್ಪಡುವ ಅಸ್ಸಾಂ, ನಾಗಾಲ್ಯಾಂಡ್, ಮೇಘಾಲಯ, ಮಿಜೋರಾಂ, ಮಣಿಪುರ, ಅರುಣಾಚಲ ಪ್ರದೇಶ ಮತ್ತು ತ್ರಿಪುರ ರಾಜ್ಯಗಳ ಭೂ ಪ್ರದೇಶ, ಭಾರತದೇಶದ ಪ್ರಮುಖ ಭಾಗ. ಸುಂದರವಾದ ಕಾಡು, ಬೆಟ್ಟ-ಪರ್ವತಗಳಿಂದ ಆವೃತವಾದ ಈ ಪ್ರದೇಶದ ತಗ್ಗು ಪ್ರದೇಶಗಳಲ್ಲಿ ಬ್ರಹ್ಮಪುತ್ರ ನದಿಯು ವೈಯ್ಯಾರದಿಂದ ಹರಿಯುತ್ತದೆ. ಬೆಟ್ಟ ಪ್ರದೇಶದ ಅಲ್ಲಲ್ಲಿ ಚಹಾ ತೋಟಗಳು ಹಸಿರಿನ ಮೆರುಗಿಗೆ ಇನ್ನಷ್ಟು ಸೊಬಗನ್ನು ನೀಡಿದೆ.

ಆದರೆ ಇಂತಹ ಸುಂದರ ತಾಣಕ್ಕೆ ಸಾರಿಗೆ ಸೌಲಭ್ಯ ತೀರಾ ಕಡಿಮೆ. ಏನಿದ್ದರೂ ವಿಮಾನ ಮೂಲಕವೇ ಸಂಚರಿಸಬೇಕು - ಅಸ್ಸಾಂ ರಾಜ್ಯಕ್ಕೆ ಅಲ್ಪಸ್ವಲ್ಪ ರೈಲು ಸಂಚಾರ ಬಿಟ್ಟರೆ. ಹವಾಮಾನ ವೈಪರೀತ್ಯವಾದರೆ ಅದೂ ಸಾಧ್ಯವಿಲ್ಲ. ಆದ್ದರಿಂದ ಪ್ರವಾಸಿಗರು ಹೋಗಬೇಕೆಂದರೂ ಕಷ್ಟಸಾಧ್ಯವಾದ ಸ್ಥಳ. ಕಾಡು ಉತ್ಪತ್ತಿ, ಪೆಟ್ರೋಲಿಯಂ ಬಾವಿ, ನೈಸರ್ಗಿಕ ಅನಿಲ, ಚಹಾ ತೋಟ ಹೀಗೆ ಹಲವಾರು ನೈಸರ್ಗಿಕ ವಾಣಿಜ್ಯ ಸಂಪತ್ತುಗಳು ಇದ್ದರೂ ಅದನ್ನು ಸಂಪೂರ್ಣವಾಗಿ ವಿನಿಯೋಗಿಸಿ ಅದರ ಫಲವನ್ನು ಜನಸಾಮಾನ್ಯರಿಗೆ ನೀಡಲಾಗದ ಸ್ಥಿತಿ. ಅದರ ಜತೆಯಲ್ಲಿ ಆಳುವ ಸರಕಾರಗಳ ನಿರ್ಲಕ್ಷ್ಯ. ಆಳುವ ಶ್ರೀಮಂತರ ಖಜಾನೆಗೆ ಲಾಭವನ್ನು ದೊರಕಿಸಿ ಕೊಟ್ಟರೂ ಅವರ ಲೋಲುಪತೆಗೆ ಸಾಕಷ್ಟು ಅವಕಾಶಗಳು ಈ ರಾಜ್ಯಗಳಲ್ಲಿ ಇಲ್ಲ. ಅಂತೆಯೇ ಇಂಡಿಯಾ ದೇಶದಿಂದ ಬಹುದೂರದಲ್ಲಿದ್ದೇವೆ ಎನ್ನುವ ಭಾವನೆ ಈ ಜನರಿಗೆ.

ಅದಕ್ಕೆ ತಕ್ಕನಾಗಿ ಸಾಮ್ರಾಜ್ಯಶಾಹಿಯ ಏಜೆಂಟರು ಈ ಜನರ ದಿಕ್ಕನ್ನು ತಪ್ಪಿಸಲು ಹಲವುಬಗೆಯ ನಾಟಕವನ್ನಾಡುತ್ತಿದ್ದಾರೆ. 'ಆಪರೇಷನ್ ಬ್ರಹ್ಮಪುತ್ರ' ಎಂಬ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಪ್ರೇರಿತ ಶಕ್ತಿಗಳು ಇಡೀ ಏಳು ರಾಜ್ಯಗಳನ್ನು ಭಾರತದಿಂದ ಪ್ರತ್ಯೇಕಿಸಲು ದೊಡ್ಡ ಯೋಜನೆಯನ್ನೇ ರೂಪಿಸಿದ್ದರು. ಅದರ ಒಂದು ಭಾಗವಾಗಿಯೇ ಅಸ್ಸಾಂ ಚಳುವಳಿ ಆರಂಭವಾಗಿತ್ತು. ಅಲ್ಲಲ್ಲಿ ಜನಾಂಗೀಯ ಗಲಭೆಗಳು ನಡೆದವು, ನಡೆಯುತ್ತಿವೆ. ಈಗಲೂ ಮುಂದುರಿಯುತ್ತಿರುವ ಬೋಡೋ ಚಳುವಳಿ, ಅಸ್ಸಾಂ ರಾಜ್ಯದ, ಈಶಾನ್ಯ ಪ್ರದೇಶಗಳ ಆರ್ಥಿಕತೆಯನ್ನು ಬುಡಮೇಲು ಮಾಡಿದೆ.

ಕೇಂದ್ರದಲ್ಲಿ ಆಳುತ್ತಿರುವ ಸರಕಾರಗಳ ನಿರ್ಲಕ್ಷ್ಯ ಒಂದೆಡೆಯಾದರೆ ಕಿತ್ತು ತಿನ್ನುವ ಬಡತನ ಹಾಗೂ ದೇಶ ವಿರೋಧಿ ಶಕ್ತಿಗಳ ಕುತಂತ್ರದಿಂದಾಗಿ ಆಗಾಗ ಭಯೋತ್ಪಾದಕ ಚಟುವಟಿಕೆಗಳು, ಉಗ್ರಗಾಮಿ ಕೃತ್ಯಗಳು ಅಲ್ಪಸ್ವಲ್ಪ ಅಭಿವೃದ್ಧಿಯನ್ನು ಹಾಳು ಗೆಡವುತ್ತಿವೆ. ಉಗ್ರಗಾಮಿಗಳಿಗೆ, ಭಯೋತ್ಪಾದಕರಿಗೆ ಶಸ್ತ್ರ, ತರಬೇತಿಗಳಿಗೆ ಹತ್ತಿರದ ಬಾಂಗ್ಲಾದೇಶ ನೆಲೆಯಾಗಿರುವಾಗ ಅದನ್ನು ತಪ್ಪಿಸಲು ಕೇಂದ್ರ ಸರ್ಕಾರದ ಯಾವುದೇ ಕ್ರಮ ಇಲ್ಲ. ಉದಾಹರಣೆಗೆ ಕಾಶ್ಮೀರದಲ್ಲಿ ಗಡಿ ಭದ್ರತಾ ಪಡೆಯ ಒಂದು ಬೆಟಾಲಿಯನ್ 15-20 ಕಿ.ಮಿ ಗಡಿ ಪ್ರದೇಶವನ್ನು ಕಾಯುತ್ತಿದ್ದರೆ ತ್ರಿಪುರದಲ್ಲಿ ಪ್ರತಿಯೊಂದು ಬೆಟಾಲಿಯನ್ 107 ಕಿ.ಮಿ. ಗಡಿಯನ್ನು ಕಾಯಬೇಕಾಗುತ್ತದೆ. ಅಂದರೆ 856 ಕಿ.ಮಿ. ಗಡಿ ಪ್ರದೇಶ ಕಾಯಲು ಬರೀ 8 ಬೆಟಾಲಿಯನ್ ಪಡೆ ಮಾತ್ರವಿದೆ.

ಈ ಪ್ರದೇಶದ ಎಲ್ಲಾ ರಾಜ್ಯಗಳೂ ಜಾಸ್ತಿ ಮಿಲಿಟರಿ ಪಡೆಗಳನ್ನು ಒದಗಿಸಲು ಕೇಳುತ್ತಿದ್ದರೂ ಕೇಂದ್ರ ಸರ್ಕಾರ ಗಮನಹರಿಸುತ್ತಿಲ್ಲ.

856 ಕಿ.ಮಿ. ಗಡಿ ಪ್ರದೇಶದಿಂದ ಸುತ್ತುವರಿದ ತ್ರಿಪುರಾದ ಸ್ಥಿತಿ ಇನ್ನೂ ಗಂಭೀರ. ಈಶಾನ್ಯ ರಾಜ್ಯಗಳ ನಿರ್ಲಕ್ಷ್ಯತೆಯ ಕಥೆ ಒಂದೆಡೆಯಾದರೆ, ಮಾರ್ಕ್ಸಿಸ್ಟರ ಭದ್ರಕೋಟೆಯನ್ನು ನಾಶಪಡಿಸಬೇಕೆಂದು ಕೇಂದ್ರ ಸರ್ಕಾರ ಮತ್ತು ಸಾಮ್ರಾಜ್ಯಶಾಹಿಗಳ ತವಕ ಇನ್ನೊಂದೆಡೆ. ತ್ರಿಪುರ ರಾಜ ಮನೆತನದ ವಿರುದ್ಧ ಭೂಸುಧಾರಣೆಗಾಗಿ ನಡೆದ ಹೋರಾಟದಲ್ಲಿ ನೇತೃತ್ವ ವಹಿಸಿದ್ದ ಕಮ್ಯುನಿಸ್ಟ್ ಪಕ್ಷ, ಆ ಹೋರಾಟದ ಮೂಲಕ ಗುಡ್ಡಗಾಡು ಜನರ ಮತ್ತು ಬೆಂಗಾಲಿ ಜನರ ಐಕ್ಯತೆಯನ್ನು ಸಾಧಿಸಿತ್ತು. ಆದರೆ ಆ ಐಕ್ಯತೆಯನ್ನು ಮುರಿಯಲು, ಎಡ ಪಕ್ಷಗಳ ನೇತೃತ್ವ ವಹಿಸಿರುವ ಸಿಪಿಐ(ಎಂ) ನ ಪ್ರಭಾವವನ್ನು ಹಿಮ್ಮೆಟ್ಟಿಸಲು ಹಲವಾರು ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಹಿಂದೆ ಟಿ.ಯು.ಜೆ.ಎಸ್., ತ್ರಿಪುರಾ ಲಿಬರೇಷನ್ ಫ್ರಂಟ್ ಹೆಸರಿನಲ್ಲಿ ಕಮ್ಯುನಿಸ್ಟರನ್ನು ವಿರೋಧಿಸುತ್ತಿದ್ದ ಶಕ್ತಿಗಳು, ಅವುಗಳ ಒಳ ಜಗಳಗಳಿಂದ ದುರ್ಬಲಗೊಳ್ಳುತ್ತ 1999 ರಲ್ಲಿ ಲೋಕಸಭಾ ಚುನಾವಣಾ ಸಂದರ್ಭದಲ್ಲಿ 'ಐಪಿಎಫ್‌ಟಿ' ಹೆಸರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿತು.

ಆದರೆ ಇತ್ತೀಚಿಗೆ ನಡೆದ ಗುಡ್ಡಗಾಡು ಪ್ರದೇಶದ ಸ್ವಾಯತ್ತ ಜಿಲ್ಲಾ ಮಂಡಳಿ(TTAADC) ಗೆ ನಡೆದ ಚುನಾವಣೆಯಲ್ಲಿ ಐ.ಪಿ.ಎಫ್.ಟಿ. ಹಿಂಸೆ, ಅಪಹರಣ, ಕೊಲೆಗಳ ಮೂಲಕ ಅಧಿಕಾರ ಗ್ರಹಣ ಮಾಡಿತು.

ಈ ಸಂಘಟನೆಯ ಹಿಂಸೆಯ ಪ್ರಮಾಣ ಎಷ್ಟರ ಮಟ್ಟಿಗೆ ಇತ್ತೆಂದರೆ ಗುಡ್ಡಗಾಡು ಸ್ವಾಯತ್ತ ಜಿಲ್ಲಾ ಮಂಡಳಿಯ ಚುನಾವಣೆಯ ಸಂದರ್ಭದಲ್ಲಿ ಎಡರಂಗಕ್ಕೆ ಸೇರಿದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದಂತೆ ಮಾಡಲು, ಅವರ ಕುಟುಂಬವರ್ಗದ ಆಪ್ತರನ್ನು ಅಪಹರಣ ಮಾಡಿತು. ಉದಾಹರಣೆಗೆ ಜಿಲ್ಲಾ ಮಂಡಳಿಗೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯದಿನವಾದ ಏಪ್ರಿಲ್ 10 ರ ಮೊದಲು ಅಂದರೆ ಏಪ್ರಿಲ್ 9 ರ ಮಧ್ಯರಾತ್ರಿ ಎಡರಂಗಕ್ಕೆ ಸೇರಿದ ಸಿಪಿಐ ಅಭ್ಯರ್ಥಿ ಮಣೀಂದ್ರ ರಿಯಾಂಗ್ ಅವರ ಪತ್ನಿ ಪಾರ್ವತಿ ರಿಯಾಂಗ್ ಅವರನ್ನು ಅಪಹರಿಸಲಾಯಿತು. ಹೀಗೆ ಇನ್ನಿತರ ಅಭ್ಯರ್ಥಿಗಳ ತಂದೆ, ತಾಯಿ, ಅಣ್ಣ, ತಮ್ಮ ಮುಂತಾದವರ ಅಪಹರಣ, ಕೊಲೆ ಮಾಡುವುದರ ಮೂಲಕ ನಾಮಪತ್ರ ಹಿಂತೆಗೆಯಲು ಒತ್ತಾಯಿಸಲಾಯಿತು. ಎಡರಂಗದ ಅಭ್ಯರ್ಥಿಗಳು ಯಾವುದಕ್ಕೂ ತಲೆಬಾಗದಿದ್ದಾಗ ಚುನಾವಣೆಯ ಕಣವೇ ರಣರಂಗವಾಯ್ತು. ಇಂತಹ ಪರಿಸ್ಥಿತಿಯಲ್ಲಿ ಬಿಜೆಪಿ-ತೃಣಮೂಲ ಜೋಡಿ, ಚುನಾವಣೆಯನ್ನು ಬಹಿಷ್ಕರಿಸಿ, ಪರೋಕ್ಷವಾಗಿ ಉಗ್ರಗಾಮಿಗಳಿಗೆ ಸಹಾಯ ಮಾಡಿತು.

ಹಿಂದೆ ನಾಗಾಲ್ಯಾಂಡಿನಲ್ಲಿ ಅಸೆಂಬ್ಲಿ ಚುನಾವಣೆಗಳು ನಡೆದಾಗ ಅಲ್ಲಿನ ಉಗ್ರಗಾಮಿಗಳ ಬೆದರಿಕೆಗೆ ಕಾಂಗ್ರೆಸ್ಸಿನ ಸ್ಪರ್ಧಾಳುಗಳು ಹೆದರಿ ಸ್ಪರ್ಧೆಯಿಂದ ಹಿಂದೆ ಸರಿದದ್ದನ್ನು ನೆನಪಿಸಿಕೊಳ್ಳಬಹುದು. ಮಣಿಪುರದಲ್ಲಿ ಭಯೋತ್ಪಾದಕ ಚಟುವಟಿಕೆಗಳ ಹೆಸರಿನಲ್ಲಿ ಅಲ್ಲಿನ ರಾಜ್ಯ ಸರ್ಕಾರ ರಾಷ್ಟ್ರೀಕೃತ ಬ್ಯಾಂಕಿಗೆ ನೀಡಬೇಕಾದ ಸಾಲವನ್ನು ವಾಪಾಸು ನೀಡುತ್ತಿಲ್ಲ. ಬ್ಯಾಂಕುಸಾಲವನ್ನು ವಾಪಸು ಮಾಡಿ ಎಂದು ಸರಕಾರಕ್ಕೆ ಒತ್ತಾಯಿಸಿದರೆ, ಬ್ಯಾಂಕಿಗೆ ನೀಡಿದ ಭದ್ರತಾ ಪೋಲೀಸ್ ಪಡೆಯನ್ನು ವಾಪಸು ತೆಗೆದುಕೊಳ್ಳುವುದಾಗಿ ಅಲ್ಲಿನ ರಾಜ್ಯ ಸರಕಾರ ಬೆದರಿಕೆ ಹಾಕುತ್ತಿದೆ.

ಈ ಚಟುವಟಿಕೆಗಳಿಂದಾಗಿ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಹಿನ್ನಡೆ ಆದುದು ಮಾತ್ರವಲ್ಲದೆ, ಈಗಾಗಲೇ ಬಂಡವಾಳದ ಕೊರತೆ ಅನುಭವಿಸುತ್ತಿರುವ ಈಶಾನ್ಯ ರಾಜ್ಯಗಳು ಅಭಿವೃದ್ಧಿಯಿಂದ ವಂಚಿತವಾದವು. ಈ ಹಿನ್ನೆಲೆಯಲ್ಲಿ ಮೇ ತಿಂಗಳ 12 ರಂದು ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಅಸ್ಸಾಂ ನ ಮುಖ್ಯಮಂತ್ರಿ ಪ್ರಫುಲ್ಲಕುಮಾರ್ ಮಹಂತಾ ಕರೆದಿದ್ದರು. ಛಿದ್ರಕಾರಿ, ಭಯೋತ್ಪಾದಕ, ಉಗ್ರಗಾಮಿ ಚಟುವಟಿಕೆಗಳು ಅಭಿವೃದ್ಧಿಗೆ ಮಾರಕ ಎಂಬುದಾಗಿ ಪರಿಗಣಿಸಿದ ಸಭೆಯು ಜೂನ್ 8 ರಂದು ಈಶಾನ್ಯ ರಾಜ್ಯದ ಎಲ್ಲಾ 7 ರಾಜಧಾನಿಗಳಲ್ಲೂ ಬೃಹತ್ತಾದ 'ಶಾಂತಿ ಮತ್ತು ಅಭಿವೃದ್ಧಿಗಾಗಿ' ರ್‍ಯಾಲಿಯನ್ನು ನಡೆಸಬೇಕೆಂದು ತೀರ್ಮಾನಿಸಿತು. ಈ ಏಳು ರಾಜ್ಯಗಳಿಂದ ದೂರದಲ್ಲಿದ್ದರೂ ಭೌಗೋಳಿಕವಾಗಿ, ಆರ್ಥಿಕವಾಗಿ ಅದೇ ಅನುಭವವನ್ನು ಹೊಂದಿರುವ ಸಿಕ್ಕಿಂ, ತಾನೂ ಕೂಡ ಈ ರ್‍ಯಾಲಿಯಲ್ಲಿ ಭಾಗವಹಿಸುವುದಾಗಿ ಹೇಳಿತು.

ತ್ರಿಪುರಾದಲ್ಲಿ ಈ ರ್‍ಯಾಲಿಯನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲಾಯಿತು. ಮೇ 12 ರಂದು 7 ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ನಿರ್ಧಾರ ಕೈಗೊಂಡ ನಂತರ ತ್ರಿಪುರಾದ ಎಲ್ಲಾ ಮೊಹಲ್ಲಾಗಳಲ್ಲಿ ಶಾಂತಿ ಮತ್ತು ಅಭಿವೃದ್ಧಿ ಸಭೆಗಳನ್ನು ಸಂಘಟಿಸಲಾಯಿತು. 1947 ರಲ್ಲಿ ದೇಶಕ್ಕೆ ಸ್ವಾತಂತ್ರ ದೊರಕಿದ ಸಂದರ್ಭದಲ್ಲಿ ಬಹು ಸಂಖ್ಯಾತ ಜನರಾಗಿದ್ದ ತ್ರಿಪುರಾದ ಗುಡ್ಡಗಾಡು ಜನಾಂಗದವರು ಇದೀಗ ಅಲ್ಪಸಂಖ್ಯಾತರಾಗಿದ್ದಾರೆ. ಬಾಂಗ್ಲಾ ದೇಶದಿಂದ (ಅಂದಿನ ಪೂರ್ವ ಪಾಕಿಸ್ತಾನ) ನಿರಾಶ್ರಿತರಾಗಿ ಬಂದಿದ್ದ ಬಂಗಾಳಿ ಮಾತನಾಡುವ ಜನರು ಇದೀಗ ಬಹುಸಂಖ್ಯಾತರಾಗಿದ್ದು ಇವರ ನಡುವೆ ಐಕ್ಯತೆಯನ್ನು ಸಾಧಿಸಲು ಕಮ್ಯುನಿಸ್ಟ್ ಪಕ್ಷ ಪ್ರಯತ್ನಿಸುತ್ತಿದ್ದರೆ, ನಿರಂತರ ವೈಮನಸ್ಯ, ದೊಂಬಿ ಹುಟ್ಟು ಹಾಕಲು ದೇಶ ವಿರೋಧಿ ಉಗ್ರಗಾಮಿ ಸಂಘಟನೆಗಳು ಪ್ರಯತ್ನಿಸುತ್ತಿವೆ. ತ್ರಿಪುರಾದ ಅಭಿವೃದ್ಧಿಯಾಗಬೇಕಾದಲ್ಲಿ, ಈಶಾನ್ಯ ರಾಜ್ಯಗಳ ಆರ್ಥಿಕ ಸುಧಾರಣೆಯನ್ನು ಸಾಧಿಸಬೇಕಾದಲ್ಲಿ ಎಲ್ಲಾ ಜನರ ಐಕ್ಯತೆ, ರಾಜ್ಯ ರಾಜ್ಯಗಳ ನಡುವಣ ಸಹಕಾರ ಪ್ರಾಮುಖ್ಯವಾದುದು ಎಂದು ಜನರಿಗೆ ಮನ ಮುಟ್ಟುವಂತೆ ಮನವಿ ಮಾಡಿ ಜೂನ್ 8 ರಂದು ರಾಜ್ಯದ ರಾಜಧಾನಿ ಅಗರ್ತಲದಲ್ಲಿ ನಡೆಯುವ ರ್‍ಯಾಲಿಗೆ ಆಹ್ವಾನಿಸಿದರು.

ಅಂತೆಯೇ ಜೂನ್ 8 ರ ರ್‍ಯಾಲಿಯು ಸಾಮ್ರಾಜ್ಯಶಾಹಿ ಏಜೆಂಟರು, ದೇಶ ವಿರೋಧಿ ಶಕ್ತಿಗಳು, ಛಿದ್ರಕಾರಿ ಉಗ್ರಗಾಮಿಗಳ ರೂಪದಲ್ಲಿ ಮಾಡುತ್ತಿರುವ ಹೀನ ಕೃತ್ಯಗಳನ್ನು ಹಿಮ್ಮೆಟ್ಟಿಸಲು ಪಣ ತೊಟ್ಟಿತು. ಆ ಮೂಲಕ ಈಶಾನ ರಾಜ್ಯಗಳ ಅಭಿವೃದ್ಧಿಯನ್ನು ಸಾಧಿಸುವುದು ಮಾತ್ರವಲ್ಲದೆ, ದೇಶದ ಅಭಿವೃದ್ಧಿಯ ಪ್ರಮುಖ ವಾಹಿನಿಯಲ್ಲಿ ಸೇರಲು ಪ್ರತಿಜ್ಞೆ ಮಾಡಿತು.

ಅದೇ ಸಂದರ್ಭದಲ್ಲಿ ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು ಮಿಲಿಟರಿ, ಅರೆ ಮಿಲಿಟರಿ ಪಡೆಗಳನ್ನು ಒದಗಿಸಬೇಕೆಂದು, ಈಶಾನ್ಯರಾಜ್ಯಗಳ ಸಮಸ್ಯೆಯನ್ನು ಕಾಶ್ಮೀರ ಸಮಸ್ಯೆಯಷ್ಟೇ ಗಂಭೀರವಾಗಿ ಪರಿಗಣಿಸಬೇಕೆಂದೂ ಒತ್ತಾಯಿಸಿತು. ಇವೆಲ್ಲಕ್ಕೂ ಮುಖ್ಯವಾಗಿ, ಸಾರಿಗೆ, ಸಂಪರ್ಕ ಮತ್ತು ಬಂಡವಾಳದ ಕೊರತೆಯಿಂದಾಗಿ ಉತ್ಪಾದನೆ ಕುಂಠಿತಗೊಂಡಿರುವ ಈ ಪ್ರದೇಶದಲ್ಲಿ ಕೇಂದ್ರ ಸರ್ಕಾರವು ಸಾಕಷ್ಟು ಯೋಜನೆಗಳನ್ನು ರೂಪಿಸಿ ಬಂಡವಾಳವನ್ನು ವಿನಿಯೋಗಿಸಬೇಕೆಂದು ಈಶಾನ್ಯ ರಾಜ್ಯಗಳಲ್ಲಿ ನಡೆದ ರ್‍ಯಾಲಿ ಒತ್ತಾಯಿಸಿತು.

ಡಿವೈಎಫ್ಐ ಕಛೇರಿ 'ಭಗತ್ ಸಿಂಗ್ ಭವನ' ಉದ್ಘಾಟನೆ

ಕುಂದಾಪುರ: ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಇದರ ಸಕ್ರಿಯ ಘಟಕಗಳಲ್ಲಿ ಒಂದಾದ ಕುಂದಾಪುರದ ಚರ್ಚ್ ರಸ್ತೆ ಘಟಕವು ಕೆಲವು ಸಮಯದಿಂದ ತನ್ನ ಛಲ ಬಿಡದೆ ಪ್ರಯತ್ನ ಮಾಡಿರುವುದರ ಫಲವಾಗಿ ಸುಮಾರು 1.50 ಲಕ್ಷ ರೂಪಾಯಿ ಅಂದಾಜಿನಂತೆ ಸ್ವಂತ ಸ್ಥಳ ಮತ್ತು ಕಟ್ಟಡವನ್ನು ಹೊಂದಿ ಮೇ 1 ರಂದು 'ಭಗತ್ ಸಿಂಗ್ ಭವನ' ಎಂಬ ಹೆಸರಿನಲ್ಲಿ ಉದ್ಘಾಟನೆಗೊಂಡಿತು.

ಈ ಸಂದರ್ಭದಲ್ಲಿ ಡಿವೈಎಫ್ಐ ನ ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್‌ರವರು ಭಗತ್‌ಸಿಂಗ್ ಭವನವನ್ನು ಉದ್ಘಾಟಿಸಿ ಮಾತನಾಡುತ್ತಾ, ಇಂದು ದೇಶದಲ್ಲಿ ಯುವಜನರಿಗೆ ಉತ್ತಮ ಆದರ್ಶಗಳೇ ಇಲ್ಲವಾಗಿದೆ. ದೇವರು, ಧರ್ಮ, ಜಾತಿಯ ಹೆಸರಿನಲ್ಲಿ ಸಮಾಜಬಾಹಿರ ಚಟುವಟಿಕೆಗಳಲ್ಲಿ ಯುವಶಕ್ತಿ ಬಳಕೆಯಾಗುತ್ತಿರುವುದರ ಬಗ್ಗೆ ತಮ್ಮ ನೋವನ್ನು ವ್ಯಕ್ತಪಡಿಸಿದರು. ಆದರೆ ಭಗತ್‌ಸಿಂಗ್‌ನಂತಹ ದೇಶಪ್ರೇಮಿ ಯುವಕನ ಆದರ್ಶವನ್ನು, ಗುರಿಯನ್ನು ಮುಂದಿಟ್ಟುಕೊಂಡು ಯುವಜನರ ಸಮಸ್ಯೆಗಳ ಪರಿಹಾರಕ್ಕಾಗಿ ದೇಶದ ಮೂಲೆ ಮೂಲೆಯಲ್ಲಿ ಸಕ್ರಿಯವಾಗಿ ಚಟುವಟಿಕೆಯಲ್ಲಿ ನಿರತವಾಗಿರುವ ಡಿವೈಎಫ್ಐಗೆ ಈ ಪ್ರದೇಶದಲ್ಲಿ ಸಾರ್ವಜನಿಕರ ಸಹಕಾರದಿಂದ ಸ್ವಂತ ಕಛೇರಿ ಹೊಂದಲು ಸಾಧ್ಯವಾಗಿರುವುದು, ಮುಂದಿನ ದಿನಗಳಲ್ಲಿ ಹೆಚ್ಚು ಹೆಚ್ಚು ಯುವಜನರು ಸಂಘಟನೆಯೊಳಗೆ ಬರುವುದಕ್ಕೆ ಸಾಧ್ಯವಾಗಲಿ ಎಂದರು. ಈ ಕಛೇರಿ ನೊಂದವರು, ಸಂಕಷ್ಟದಲ್ಲಿರುವವರಿಗೆ ಪರಿಹಾರ, ಹೋರಾಟ ಸೂಚಿಸುವ ಕೇಂದ್ರವಾಗಲಿ ಎಂದರು.

ದೇಶದಲ್ಲಿ ಆಳುವವರ ತಪ್ಪು ಧೋರಣೆಗಳಿಂದಾಗಿ ವಿದೇಶಿ ಸಾಲ ವಿಪರೀತವಾಗಿ ಬೆಳೆಯುತ್ತಿದೆ. ಸಣ್ಣ ಮಧ್ಯಮ ಕೈಗಾರಿಕೆಗಳು, ಕೃಷಿ ಉತ್ಪನ್ನಗಳು ಕುಸಿಯುತ್ತಿದೆ. ದೇಶದ ಉತ್ಪಾದನೆಯ ಬಹುಪಾಲು ವಿದೇಶಿ ಸಾಲ ತೀರಿಸಲು ಹೋಗುತ್ತಿದೆ. ಉದ್ಯೋಗವಕಾಶಗಳು ಇಲ್ಲದೇ ಯುವಜನರು ಹತಾಶರಾಗುತ್ತಿದ್ದಾರೆ. ಸಮಾಜದಲ್ಲಿ ಅಶಾಂತಿ ಬೆಳೆಯುತ್ತಿದೆ. ಇವುಗಳನ್ನು ಬದಲಾಯಿಸಲು ಯುವಶಕ್ತಿ ಹೆಚ್ಚು ಹೆಚ್ಚು ಅಭ್ಯಾಸಗಳನ್ನು ಮಾಡಬೇಕು. ಸಮಾಜ ಬದಲಾವಣೆಗಾಗಿ ಇತರ ಜನವಿಭಾಗಗಳ ಜೊತೆ ಸೇರಿ ದೇಶದ ಅಭಿವೃದ್ಧಿಗಾಗಿ, ಪ್ರಗತಿಗಾಗಿ ಯುವಜನರ ಶಕ್ತಿ ಕ್ರೋಢೀಕೃತವಾಗಬೇಕೆಂದು ಕರೆ ನೀಡಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ಗುಣರತ್ನರವರು ಮಾತನಾಡುತ್ತಾ, ಯುವಜನರ ಶಕ್ತಿ ಅಪಾರವಾದುದು. ಅದನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಲು ಡಿವೈಎಫ್ಐ ಸರಿಯಾದ ವೇದಿಕೆಯಾಗಿದೆ. ಸ್ಥಳೀಯ ಸಮಸ್ಯೆಗಳಾದ ನಲ್ಲಿ ನೀರು, ದಾರಿದೀಪ, ರಸ್ತೆ ಮೊದಲಾದ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪುರಸಭೆಯ ಆಡಳಿತದೊಂದಿಗೆ ಸಹಕರಿಸುವುದರ ಜೊತೆಗೆ, ಶ್ರಮದಾನ ಮುಂತಾದ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ತೊಡಗಿ ಆ ಮೂಲಕ ಡಿವೈಎಫ್ಐ ಯಂತಹ ಸಂಘಟನೆ ಜನರ ಪ್ರೀತಿ ವಿಶ್ವಾಸವನ್ನು ಗಳಿಸಬೇಕು ಎಂದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಕುಂದಾಪುರ ಪುರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಜಿ.ಎಲ್.ಡಿ.ಲೀಮಾ ರವರು, ಮಂಗಳೂರು ಟೈಲ್ಸ್ ಲಿ. ಇದರ ಆಡಳಿತ ಪಾಲುದಾರರಾದ ಶ್ರೀ ಎಚ್.ಸೀತಾರಾಮ ನಕ್ಕತ್ತಾಯ ರವರು, ಸ್ಥಳೀಯ ಪುರಸಭಾ ಸದಸ್ಯರಾದ ಶ್ರೀ ವಿಲಿಯಂ ಡಿಸೋಜಾ, ಕುಂದಾಪುರದ ಖ್ಯಾತ ಉದ್ಯಮಿಗಳಾದ ಶ್ರೀ ಎಸ್. ಪ್ರಭಾಕರ ತೋಳಾರ್‌ರವರು ಮುಖ್ಯಅತಿಥಿಗಳಾಗಿ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕುಂದಾಪುರ ತಾಲ್ಲೂಕು ಡಿವೈಎಫ್ಐ ಅಧ್ಯಕ್ಷರೂ, ಪುರಸಭಾ ಸದಸ್ಯರೂ ಆದ ಶ್ರೀ ಎಚ್.ನರಸಿಂಹರವರು ಮಾತನಾಡಿ ಸ್ಥಳೀಯ ಎಲ್ಲಾ ವಿಭಾಗದ ಯುವಜನರು ಈ ಕೇಂದ್ರದ ಜೊತೆಗೆ ಸಂಪರ್ಕವಿರಿಸಿಕೊಂಡು, ದೇಶದ ಯುವಜನರ ಚಳುವಳಿಯನ್ನು ಅರ್ಥೈಸಿಕೊಳ್ಳಲು, ಸಮಾಜದ ಬದಲಾವಣೆಗಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಕರೆ ನೀಡಿದರು. ಪ್ರಾರಂಭದಲ್ಲಿ ಘಟಕದ ಕಾರ್ಯದರ್ಶಿ ಸುಧಾಕರ ...ಥಿ ಶ್ರೀಕಾಂಚನ್‌ರವರು ಸ್ವಾಗತಿಸಿ, ಅಧ್ಯಕ್ಷರಾದ ...ಎಂ ಶೇಖರ್‌ರವರು ಧನ್ಯವಾದ ಅರ್ಪಿಸಿದರು.

ಶ್ರೀಲಂಕಾ ಸಮಸ್ಯೆ ಬಯಲುಗೊಂಡ ಎನ್.ಡಿ.ಎ. ಸರ್ಕಾರದ ಗೊಂದಲಗಳು

ಸೀತಾರಾಂ ಯೆಚೂರಿ

ಕನ್ನಡಕ್ಕೆ - ಕೆ.ಮಹಾಂತೇಶ್

ಶ್ರೀಲಂಕಾದ ಮಂತ್ರಿ ಗುಣರತ್ನೆ ಸಹಿತ 21 ಜನರನ್ನು ಎಲ್‌ಟಿಟಿಇ ನಿರ್ಮಿತ ಮಾನವಬಾಂಬ್‌ನಿಂದ ಹತ್ಯೆ ಮಾಡಿದ ನಂತರ ದ್ವೇಷಯುತ ವಾತಾವರಣ ಉತ್ತರ ಶ್ರೀಲಂಕಾದಲ್ಲಿ ಮುಂದುವರೆದಿದೆ. ಇದು ವಿಶ್ವಕ್ಕೆ ಭಯಾನಕ ವಾತಾರವಣವನ್ನು ನಿರ್ಮಾಣ ಮಾಡಿದೆ.

ಇಂತಹ ಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಬಿಜೆಪಿ ಕೂಟದ ಸರ್ಕಾರ ಶ್ರೀಲಂಕಾ ಪರಿಸ್ಥಿತಿ ಕುರಿತಂತೆ ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಕುತೂಹಲಕಾರಿಯಾಗಿದೆ. ಅಧಿಕಾರದಲ್ಲಿರುವ ಬಿಜೆಪಿ ಕೂಟ ಮಿತ್ರ ಪಕ್ಷಗಳು ಮತ್ತು ಅದರ ನಾಯಕರುಗಳು ನೀಡುತ್ತಿರುವ ಹೇಳಿಕೆಗಳಿಂದ ವಾಜಪೇಯಿ ಸರ್ಕಾರಗೊಂದಲದಲ್ಲಿ ಮುಳುಗಿದೆ. ಪ್ರಮುಖವಾಗಿ ಬಿಜೆಪಿ ಕೂಟದ ಮಿತ್ರ ಪಕ್ಷಗಳಾದ ಡಿಎಂಕೆ, ಎಂಡಿಎಂಕೆ ಮತ್ತು ಪಿಎಂಕೆಯಂತಹ ಪಕ್ಷಗಳು ತೆಗೆದುಕೊಂಡಿರುವ ಜನಾಂಗೀಯ ನಿಲುವುಗಳ ಜೊತೆಗೆ ಸ್ವತಃ ಕೇಂದ್ರ ಸರ್ಕಾರವೇ ಈ ವಿಷಯದಲ್ಲಿ ಸ್ಪಷ್ಟತೆ ಹೊಂದಿದಂತಿಲ್ಲ.

ವಿದೇಶಾಂಗ ಸಚಿವರಾದ ಶ್ರೀ ಜಸ್ವಂತ್ ಸಿಂಗ್‌ರವರು ಸಂಸತ್ತಿನೊಳಗೆ ಭಾರತ ಸರ್ಕಾರವು ಶ್ರೀಲಂಕಾ ಸಮಸ್ಯೆಗೆ ಸಂಬಂಧಿಸಿದಂತೆ ತನ್ನ ಮೊದಲಿನ ಬದ್ಧತೆಯನ್ನು ಹೊಂದಿದೆ, ಶ್ರೀಲಂಕಾದ ಜನಾಂಗೀಯ ಸಮಸ್ಯೆಯನ್ನು ತನ್ನ ದೇಶದ ಸಾರ್ವಭೌಮತ್ವದ ಚೌಕಟ್ಟಿನೊಳಗೆ ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಮತ್ತು ಎಲ್ಲಾ ಸಮಕಾಲೀನ ಆಶೋತ್ತರಗಳನ್ನು ಪೂರೈಸಲು ಮತ್ತು ಶ್ರೀಲಂಕಾದಲ್ಲಿ ಶಾಂತಿ ಪುನರ್‌ಸ್ಥಾಪನೆಗೆ ಅಗತ್ಯವಿರುವ ಎಲ್ಲಾ ಸ್ನೇಹಪೂರ್ವಕ ಸಹಾಯ ನೀಡುವುದಾಗಿ ಪ್ರಕಟಿಸಿದರು.

ಆದರೆ ಅದೇ ಜಸ್ವಂತ್ ಸಿಂಗ್‌ರವರು 'ಟೆಲಿವಿಷನ್ ಚಾನಲ್‌ಗೆ ಸಂದರ್ಶನ ನೀಡುತ್ತಾ ಶ್ರೀಲಂಕಾ ಸರ್ಕಾರ ಮತ್ತು ಎಲ್‌ಟಿಟಿಇ ಎರಡೂ ಆಸಕ್ತಿ ವಹಿಸಿದರೆ ಭಾರತ ಶ್ರೀಲಂಕಾ ಸಮಸ್ಯೆ ಪರಿಹಾರಕ್ಕೆ ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂದು ಹೇಳಿದರು.

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಎಲ್‌ಟಿಟಿಇ ಒಂದು ಭಯೋತ್ಪಾದಕ ಸಂಘಟನೆ ಎಂದು ನಮ್ಮ ದೇಶದ ಕಾನೂನಿನನ್ವಯ ಘೋಷಿಸಲಾಗಿದೆ. ಅದೂ ಅಲ್ಲದೆ ಇತ್ತೀಚೆಗೆ ತಾನೆ ನಮ್ಮ ಸಂಸತ್ತೂ ಭಾರತದಲ್ಲಿ ಎಲ್‌ಟಿಟಿಇ ಮೇಲಿದ್ದ ನಿಷೇಧವನ್ನು ಎರಡು ವರ್ಷಗಳ ಅವಧಿಗೆ ವಿಸ್ತರಿಸಿದೆ. ಹೀಗಿದ್ದೂ ವಿದೇಶಾಂಗ ಸಚಿವರು ಶ್ರೀಲಂಕಾದ ಸಮಸ್ಯೆ ಕುರಿತಂತೆ ಮಧ್ಯಸ್ಥಿಕೆ ವಹಿಸಲು ಆಸಕ್ತಿ ವಹಿಸಿದ್ದಾದರು ಏಕೆ?

ಆದರೆ ತಕ್ಷಣದಲ್ಲಿಯೇ ಭಾರತ ಸರ್ಕಾರದ ವಿದೇಶಾಂಗ ಕಾರ್ಯದರ್ಶಿಯವರು ವಿದೇಶಾಂಗ ಸಚಿವರ ಹೇಳಿಕೆಯನ್ನು ನಿರಾಕರಿಸುತ್ತ, ಭಾರತ ಸರ್ಕಾರ ಎಲ್‌ಟಿಟಿಇಯೊಂದಿಗೆ ಯಾವುದೇ ಮಾತುಕತೆ ನಡೆಸುವುದಿಲ್ಲ ಎಂದು ಸ್ಪಷ್ಟೀಕರಿಸಿದರು.


ಈ ಮಧ್ಯೆ ಎನ್‌ಡಿಎ ಸರ್ಕಾರದಲ್ಲಿ ಭಾಗೀದಾರರಾಗಿರುವ ಎಂ.ಡಿ.ಎಂ.ಕೆ. ಮತ್ತು ಪಿ.ಎಂ.ಕೆ. ಪಕ್ಷಗಳು ಬಹಿರಂಗವಾಗಿಯೇ 'ಪ್ರತ್ಯೇಕ ತಮಿಳು ಈಳಂ' ಗೆ ಬೆಂಬಲಿಸಿದರೆ, ಡಿಎಂಕೆ ನಾಯಕ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿಯವರು ಮುಂದುವರೆದು, ಪ್ರತ್ಯೇಕ ತಮಿಳು ಗಣರಾಜ್ಯ ಸ್ಥಾಪಿಸಬೇಕೆಂದು ಶ್ರೀಲಂಕಾ ಸರ್ಕಾರವನ್ನು ಒತ್ತಾಯಿಸಿ ಹೇಳಿಕೆ ನೀಡಿದರು.

ಶ್ರೀಲಂಕಾ ವಿಷಯದಲ್ಲಿ ಈ ಎಲ್ಲಾ ಪಕ್ಷಗಳ ನಿಲುವುಗಳು, ಅವರದೇ ಆಳುವ ಎನ್.ಡಿ.ಎ. ಸರ್ಕಾರದ ವಿದೇಶಾಂಗ ಸಚಿವರು ಪಾರ್ಲಿಮೆಂಟ್‌ನಲ್ಲಿ ನೀಡಿದ ಹೇಳಿಕೆಗೆ ಸಂಪೂರ್ಣ ವಿರುದ್ಧವಾಗಿದೆ.

ಬಹಿರಂಗಗೊಳ್ಳುತ್ತಿರುವ ತೀವ್ರ ವೈರುಧ್ಯಗಳು

ನಮ್ಮ ದೇಶದಲ್ಲಿ ಬಿಜೆಪಿ ಕೂಟದ ಸರ್ಕಾರ ಶ್ರೀಲಂಕಾ ಪರಿಸ್ಥಿತಿ ಕುರಿತಂತೆ ವ್ಯಕ್ತಪಡಿಸಿರುವ ಪ್ರತಿಕ್ರಿಯೆ ಕುತೂಹಲಕಾರಿಯಾಗಿದೆ. ಅಧಿಕಾರದಲ್ಲಿರುವ ಬಿಜೆಪಿ ಕೂಟ ಮಿತ್ರ ಪಕ್ಷಗಳು ಮತ್ತು ಅದರ ನಾಯಕರುಗಳು ನೀಡುತ್ತಿರುವ ಹೇಳಿಕೆಗಳಿಂದ ವಾಜಪೇಯಿ ಸರ್ಕಾರಗೊಂದಲದಲ್ಲಿ ಮುಳುಗಿದೆ.

ಶ್ರೀಲಂಕಾ ಸಮಸ್ಯೆ ಕುರಿತಂತೆ ಎನ್.ಡಿ.ಎ. ಸರ್ಕಾರದೊಳಗಿರುವ ಭಿನ್ನಾಭಿಪ್ರಾಯಗಳು ಸ್ಪಷ್ಟವಾಗಿ ಗೋಚರಿಸತೊಡಗಿವೆ. (ಇವು ಕೇವಲ ತಮಿಳುನಾಡು ಪಕ್ಷಗಳಿಗೆ ಸೀಮಿತಗೊಂಡಿಲ್ಲ) ಇಂತಹ ಪರಿಸ್ಥಿತಿ ಮುಂದುವರೆದಾಗಲೂ ಮತ್ತು ಶ್ರೀಲಂಕಾ ಸರ್ಕಾರ ಭಾರತ



ನಿಲುಮೆ ಕುರಿತಂತೆ ಪ್ರಸ್ತಾಪಿಸಿದಾಗಲೂ ಮತ್ತು ಶ್ರೀಲಂಕಾದಲ್ಲಿ ಅಧಿಕಾರ ವಿಕೇಂದ್ರಿಕರಣಕ್ಕೆ ಸಂಬಂಧಿಸಿ ಹಿಂದಿನ ಮತ್ತು ಈಗಿನ ತೀರ್ಮಾನಗಳನ್ನು ಕುರಿತಂತೆ ಯಾವುದೇ ಮಾತನಾಡದೆ ಕೇವಲ ಬುದ್ಧಿಪೂರ್ವಕವಾಗಿ ಮೌನಿಯಾಗಿದ್ದಾರೆ. ಶ್ರೀಲಂಕಾದ ಸಮಸ್ಯೆಯ ಪರಿಹಾರಕ್ಕಾಗಿ ಭಾರತೀಯ ಮಿಲಿಟರಿ ಬಳಸಬೇಕೆಂದು ಯಾರೊಬ್ಬರೂ ಸೂಚಿಸಿಲ್ಲ. ಯಾಕೆಂದರೆ ಹಿಂದಿನ ಐಪಿಕೆಎಫ್ ಅನುಭವ ಇದೆ.

ಆದರೆ ಅಲ್ಲಿನ ಜನಾಂಗೀಯ ಸಮಸ್ಯೆಯ ಪರಿಹಾರಕ್ಕಾಗಿ ಭಾರತ ಸರ್ಕಾರ ತೀವ್ರ ಕೆಲಸ ಮಾಡಬೇಕಿತ್ತು. ಶ್ರೀಯುತ ವಾಜಪೇಯಿಯವರು ಅಂತಹ ಯಾವುದೇ ಪ್ರಯತ್ನವನ್ನು ನಡೆಸಲಿಲ್ಲ. ಬದಲಾಗಿ ಎನ್.ಡಿ.ಎ. ದೊಳಗಿನ ಒಗ್ಗಟ್ಟನ್ನು ಕಾಪಾಡುವುದರಲ್ಲೆ ಮಗ್ನರಾಗಿ, ತನ್ನ ಮಿತ್ರರು ಸರ್ಕಾರದಿಂದ ಹೊರಹೋಗದಂತೆ ಮತ್ತು ತಮ್ಮ ಸರ್ಕಾರ ಉರುಳದಂತೆ ನೋಡಿಕೊಳ್ಳುವ ಕಾರ್ಯದಲ್ಲಿ ಮಾತ್ರ ನಿರತರಾಗಿದ್ದಾರೆ.

ಅಧಿಕಾರ ವಿಕೇಂದ್ರೀಕರಣದ ಬಂಡಾರಕೆ ಯೋಜನೆ: ಜನಾಂಗೀಯ ಸಮಸ್ಯೆ ಪರಿಹಾರಕ್ಕಾಗಿ ಶ್ರೀಲಂಕಾದ ಇತಿಹಾಸವನ್ನು ಅವಲೋಕಿಸುವುದು ಈಗ ಅವಶ್ಯಕವಿದೆ. 1957 ರಲ್ಲಿ ಶ್ರೀಲಂಕಾದ ಆಗಿನ ಅಧ್ಯಕ್ಷ ಬಂಡಾರಕೆ, ತಮಿಳರಿಗೆ ಆಗುತ್ತಿರುವ ತೊಂದರೆಯನ್ನು ಮನಗಂಡು, ತಮಿಳು ಜನರಿಗಾಗಿ ಪ್ರತ್ಯೇಕ ಅಧಿಕಾರವುಳ್ಳ, ಸ್ವಾಯತ್ತ ಮಂಡಳಿಗಳನ್ನು ರಚಿಸುವ ಪ್ರಸ್ತಾವಗಳನ್ನು ಮುಂದಿರಿಸಿದ್ದರು. ಆ ಸಂದರ್ಭದಲ್ಲಿ ಅದು ಪೂರ್ತಿ ಪ್ರಗತಿದಾಯಕವಲ್ಲದಿದ್ದರೂ ಪ್ರಜಾಸತ್ತಾತ್ಮಕವಾಗಿತ್ತು. ಈ ಕಾರಣಗಳಿಂದಾಗಿಯೇ ಪ್ರತ್ಯೇಕತಾವಾದಿ ಸಿಂಹಳಿಯರಿಂದ- ಬಂಡಾರಕೆ ಹತ್ಯೆಗೊಳಗಾದರು. 30 ವರ್ಷಗಳ ನಂತರನಡೆದ ಇಂಡೋ-ಶ್ರೀಲಂಕಾ, 1987 ರ ಒಪ್ಪಂದಗಳು, ಈಶಾನ್ಯ, ಉತ್ತರ ಶ್ರೀಲಂಕಾ ಪ್ರಾಂತ್ಯಗಳ ಕುರಿತು ಯೋಚಿಸುವಂತೆ ಮಾಡಿತು. ಅಲ್ಲದೆ, ಉತ್ತರ ಈಶಾನ್ಯ ಭಾಗಗಳಲ್ಲಿ ತಮಿಳರು, ಬಹುಸಂಖ್ಯಾತರಲ್ಲದ ಪ್ರದೇಶಗಳಲ್ಲಿ ಸೇರ್ಪಡೆಗೊಳ್ಳುವ ಬಗ್ಗೆ ಜನಮತಗಣನೆ' ನಡೆಯಿತು. ಆದರೆ ಈ ಕೆಲಸ ಜಾರಿಯಾಗಲಿಲ್ಲ. ಈ ಮಧ್ಯೆ ಐ.ಪಿ.ಕೆ.ಎಫ್. ಪ್ರವೇಶದಿಂದಾಗಿ, ಪರಿಸ್ಥಿತಿಯೇ ಬದಲಾಯಿತು. ಅದರ ಭಾಗವಾಗಿಯೇ ಭಾರತದಲ್ಲಿ ತಮಿಳು ವ್ಯಾಘ್ರಗಳಿಂದ ರಾಜೀವ್ ಗಾಂಧಿಯವರ ಹತ್ಯೆಯಾಯಿತು. ಆನಂತರ 1997 ರ ಅಕ್ಟೋಬರ್‌ನಲ್ಲಿ ಕುಮಾರತುಂಗೆ ಸರ್ಕಾರ ಸಂವಿಧಾನ ಸುಧಾರಣೆ ಪ್ರಸ್ತಾವನೆಗಳನ್ನು ಮುಂದಿರಿಸಿ, ಜನಾಂಗೀಯ ಹೆಸರಿನಲ್ಲಿ ವಿಭಜನೆಯನ್ನು ತಡೆಯುವುದು, ಮತ್ತು ಚುನಾಯಿತ ಮಂಡಳಿಗಳನ್ನು ಯಾವುದೇ ಪ್ರಭುತ್ವ ಕಿತ್ತೊಗೆಯುವುದನ್ನು ತಡೆಯುವುದು (ನಮ್ಮಲ್ಲಿ 356 ಕಲಂನ್ನು ರಾಜ್ಯಗಳ ಮೇಲೆ ಬಳಸುವಂತೆ) ಮತ್ತು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ವಿಕೇಂದ್ರೀಕರಣವನ್ನು ಜಾರಿ ಮಾಡುವುದು ಸೇರಿದಂತೆ ಸಿಂಹಳಿ-ತಮಿಳು ಜನಾಂಗದ ಮಧ್ಯೆ ಇರುವ ಭಾಷೆ ತಾರತಮ್ಯ, ಎಲ್ಲಾ ಸಮುದಾಯದವರಿಗೆ, ಭಾಷೆ, ಧಾರ್ಮಿಕ ವಿಷಯದಲ್ಲಿ ಸಮಾನ ಅವಕಾಶ, ಇದರೊಂದಿಗೆ ಒಟ್ಟಾರೆ ಸ್ವಾಯತ್ತತೆ ಜೊತೆಗೆ ಆ ಪ್ರದೇಶದೊಳಗೆ ಪ್ರಾಬಲ್ಯವಿರುವ ಮುಸ್ಲಿಂ ಮತ್ತು ಸಿಂಹಳಿಯರಿಗೆ ಸ್ವಾಯತ್ತತೆ ನೀಡಬೇಕೆಂದು ಈ ಪ್ರಸ್ತಾವಗಳ ಮೂಲಕ ಈ ಸಮಸ್ಯೆಗಳ ಪರಿಹಾರಕ್ಕೂ ಮುಂದಾಯಿತು.


ವಾಜಪೇಯಿಗೆ ಆಸಕ್ತಿಯಿರುವುದು ಎನ್.ಡಿ.ಎ. ಸರ್ಕಾರದ ಬಗ್ಗೆ ಮಾತ್ರ! ಶ್ರೀಲಂಕಾ ಸಮಸ್ಯೆ ಕುರಿತು ಅಲ್ಲ

ಶ್ರೀಲಂಕಾ ಮತ್ತು ದಕ್ಷಿಣ ಏಶ್ಯಾ ಪ್ರದೇಶಗಳಲ್ಲಿ ಉದ್ಭವಿಸಿರುವ ಈ ಸಮಸ್ಯೆ ಪರಿಹಾರಕ್ಕಾಗಿ ವಾಜಪೇಯಿ ಸರ್ಕಾರ ತಾನು ವಹಿಸಬೇಕಿದ್ದ ಪಾತ್ರದ ಬದಲು ಅದು ತನ್ನ ಎನ್.ಡಿ.ಎ. ಸರ್ಕಾರವನ್ನು ಉಳಿಸಿಕೊಳ್ಳಲು ಮಾತ್ರ ಅಸ್ಥೆ ವಹಿಸಿದೆ. ವ್ಯಂಗ್ಯವೆಂದರೆ ಕೇವಲ ಅಮೆರಿಕದ ಕೃಪಾಕಟಾಕ್ಷದಲ್ಲಿ ತಾನೊಂದು ಪ್ರಾದೇಶಿಕ ಶಕ್ತಿ ಎಂದು ತೋರಿಸಿಕೊಳ್ಳಲು ಹವಣಿಸುತ್ತಿದೆ.

1983 ರ ನಂತರ ಶ್ರೀಲಂಕಾ ಸರ್ಕಾರ ಎಲ್.ಟಿ.ಟಿ.ಇ. ಜೊತೆ ಯಾವುದೇ ಮಾತುಕತೆಗಳನ್ನು ನಡೆಸಲಿಲ್ಲ. ಅಲ್ಲದೆ ಎಲ್‌ಟಿಟಿಇ ಯಾವುದೇ ಪ್ರಸ್ತಾಪ ಮತ್ತು ಮಾತುಕತೆಗೆ ಸಿದ್ಧವಿಲ್ಲ. ಬದಲಾಗಿ ತಮಿಳರ ಹಕ್ಕಿಗಾಗಿ ತನ್ನ ಶಸ್ತ್ರ ಸಜ್ಜಿತ ಹೋರಾಟ ಮುಂದುವರೆಯುವುದು ಎಂದು ಹೇಳುತ್ತಲೇ ಬಂದಿದೆ. ಈ ಉದ್ದೇಶದಿಂದ - ಮಾತುಕತೆಯ ಎಲ್ಲಾ ಮನವಿಗಳು ಸ್ವಾಭಾವಿಕವಾಗಿಯೇ ವಿಫಲಗೊಂಡವು.

ಈಗಲೂ ಆ ಸ್ಥಗಿತತೆ ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರದ ನಡುವೆ ಮುಂದುವರೆದಿದೆ. ಶ್ರೀಲಂಕಾದ ವಿರೋಧ ಪಕ್ಷ ಯು.ಎನ್.ಪಿ. 1997 ರ ಪ್ರಸ್ತಾವನೆಗಳು ಕುರಿತಂತೆ ನುಣುಚಿಕೊಳ್ಳುತ್ತಿದೆ. ಇಂತಹ ಸಂದರ್ಭಗಳಲ್ಲಿ ಶ್ರೀಲಂಕಾದ ಈ ಜನಾಂಗೀಯ ಸಮಸ್ಯೆಯ ಪರಿಹಾರಕ್ಕಾಗಿ, ಭಾರತದ ಪಾತ್ರ ಮತ್ತು ರಾಜಕೀಯ ಮಧ್ಯ ಪ್ರವೇಶಿಕೆ ಅಗತ್ಯವಿದೆ. ಅಲ್ಲಿನ ವಿರೋಧ ಪಕ್ಷವಾದ ಯು.ಎನ್.ಪಿ. ಇದನ್ನೇ ಬಯಸುತ್ತಿದೆ. 1997 ರ ಅಕ್ಟೋಬರ್ ಪ್ರಸ್ತಾವನೆಗಳು ಒಂದು ವೇಳೆ ಸಂವಿಧಾನದ ಚೌಕಟ್ಟಿನೊಳಗೆ ಈ ಸಮಸ್ಯೆಗಳನ್ನು ಬಗೆಹರಿಸಲು ಯಶಸ್ವಿಯಾದರೆ, ಜನಾಂಗೀಯ ತಮಿಳು ಸಮಸ್ಯೆಯನ್ನು ಪ್ರಜಾಸತ್ತಾತ್ಮಕವಾಗಿ ತೊಡೆದು ಹಾಕಬಹುದು. ಈ ಪರಿಸ್ಥಿತಿಯು ಎಲ್‌ಟಿಟಿಇಗೆ ಇಷ್ಟವಾಗದಿದ್ದರೂ ಅದು ಪ್ರತ್ಯೇಕ ಈಳಂ ರಾಷ್ಟ್ರದ ಬೇಡಿಕೆಯನ್ನು ಕೈಬಿಡಬಹುದು ಮತ್ತು ಸಂವಿಧಾನಿಕ ಚೌಕಟ್ಟಿನೊಳಗೆ ಶ್ರೀಲಂಕಾದ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ಆಂತರಿಕ ಗುಣಾತ್ಮಕ ಬದಲಾವಣೆ ಸಾಧ್ಯವಿದೆ. ಆದ್ದರಿಂದ ಭಾರತ, ಶ್ರೀಲಂಕಾದ ಅಧಿಕಾರ ನಡೆಸುತ್ತಿರುವ ಶ್ರೀಲಂಕಾ ಫ್ರೀಡಂ ಪಾರ್ಟಿ ಮತ್ತು ವಿರೋಧಪಕ್ಷಗಳನ್ನು ಒಂದೇ ವೇದಿಕೆಯಡಿಯಲ್ಲಿ ಕರೆತಂದು ಶ್ರೀಲಂಕಾದ ಸಮಸ್ಯೆಯ ಪರಿಹಾರಕ್ಕೆ ಮತ್ತು ಅದರ ಅಭಿವೃದ್ಧಿಗೆ ಅಗತ್ಯ ಸಹಾಯ ನೀಡುವುದು ಅಗತ್ಯ.

ಶ್ರೀಲಂಕಾ ವಿಷಯದಲ್ಲಿ ಎಡಬಿಡಂಗಿತನವನ್ನು ಪ್ರದರ್ಶಿಸುತ್ತಿರುವ ತಮಿಳುನಾಡಿನ ರಾಜಕೀಯ ಪಕ್ಷಗಳು




ಗೆದ್ದದ್ದು ಯಾವುದು?

ಕಪ್ಪು ಹಣ, ಸಾರಾಯಿ, ಜಾತಿ ರಾಜಕಾರಣವೋ, ಜನ ಹಿತವೋ?

ಫಲಿತಾಂಶಗಳು ಪ್ರಕಟಗೊಳ್ಳುವುದರೊಂದಿಗೆ ಬಳ್ಳಾರಿ ಜಿಲ್ಲಾ ಗ್ರಾಮೀಣ ಪ್ರದೇಶದ ಜನತೆಯ ಚುನಾವಣಾ ಭರಾಟೆ ಮುಗಿದಂತಾಗಿದೆ. ವಿಜಯೋತ್ಸವ ನಡೆದಿದೆ.

ಈ ಚುನಾವಣೆಯಲ್ಲಿ ಒಟ್ಟು 807724 ಮತದಾರರಿದ್ದು ಅವರಲ್ಲಿ ಶೇ. 29.60ರಷ್ಟು ಜನತೆ ಮತದಾನದ ಕೇಂದ್ರಗಳಿಗೆ ಬಾರದೇ ತಿರಸ್ಕರಿಸಿದರೇ ಶೇ. 71.40 ರಷ್ಟು ಜನತೆ ಮತದಾನದಲ್ಲಿ ಪಾಲ್ಗೊಂಡರು. ಜಿಲ್ಲಾ ಪಂಚಾಯತ್‌ನ ಇದುವರೆಗಿನ 2 ಅವಧಿಗಳನ್ನೂ ಆಡಳಿತ ನಡೆಸಲು ಜನತಾದಳಕ್ಕೆ ನೀಡಿದ್ದ ಗ್ರಾಮೀಣ ಮತದಾರ ಈ ಬಾರಿ ಅವರ ಕೈಯಿಂದ ಕಿತ್ತು ಕಾಂಗ್ರೆಸ್(ಐ) ಪಕ್ಷಕ್ಕೆ ನೀಡಿದ್ದಾನೆ. ಒಟ್ಟು 33 ಕ್ಷೇತ್ರಗಳಲ್ಲಿ 23 ಕ್ಷೇತ್ರಗಳನ್ನು ಕಾಂಗ್ರೆಗೆ ದಯಪಾಲಿಸಿದ್ದಾನೆ! ಹಡಗಲಿ, ಕೂಡ್ಲಿಗಿ ತಾಲೂಕು ಪಂಚಾಯತ್‌ಗಳನ್ನು ಕ್ರಮವಾಗಿ ಜನತಾದಳ(ಯು) ಹಾಗೂ ಅದರ ಮೈತ್ರಿಕೂಟಕ್ಕೆ ನೀಡಿದ್ದು ಬಿಟ್ಟರೆ ಉಳಿದ 5 ತಾಲೂಕು ಪಂಚಾಯತ್‌ಗಳಲ್ಲಿ ಬಹುಮತವನ್ನು ಕಾಂಗ್ರೆಗೆ ನೀಡಿದ್ದಾನೆ.



ಇದರೊಂದಿಗೆ ಶೇ. 54ರಷ್ಟು ಮತಪಡೆದು ಗ್ರಾಮೀಣ ಮತದಾರರ ಹೃದಯದಲ್ಲಿ ಕಾಂಗ್ರೆಸ್ ಪಕ್ಷ ಪ್ರಥಮ ಸ್ಥಾನ ಗಳಿಸಿದರೆ ಜನತಾದಳ(ಯು) 2ನೇ ಸ್ಥಾನಕ್ಕೆ ದೂಡಲ್ಪಟ್ಟಿದೆ. ಬಿಜೆಪಿ ಮೂರನೇ ಸ್ಥಾನದಲ್ಲಿದೆ. ಜನತಾದಳದಲ್ಲುಂಟಾದ ವಿಭಜನೆ ಕಾಂಗ್ರೆಸ್‌ನೊಳಗಿನ ಐಕ್ಯತೆ ಹಾಗೂ ಜಿಲ್ಲೆಯಲ್ಲಿ ಪ್ರಧಾನ ತುಂಡಾದ ಜನತಾದಳ(ಯು) ಬಿ.ಜೆ.ಪಿ.ಯ ಜೊತೆ ಕೈಜೋಡಿಸಿದ್ದು ಜನತಾದಳ ಪಕ್ಷವು ಪ್ರಥಮ ಸ್ಥಾನದಿಂದ ಹಿಂದೆ ಸರಿಯಲು ಹಾಗೂ ಮೂಲೆಗುಂಪಾಗುವಂತಹ ಕಡಿಮೆ ಸ್ಥಾನಪಡೆಯಲು ಕಾರಣವಾಗಿದೆ.

ಗೆದ್ದವರಾರು?

ಎಂದಿಗಿಂತ ಈ ಚುನಾವಣೆಯಲ್ಲಿ, ಜಿಲ್ಲೆಯ ಜನತೆ ಹೆಚ್ಚಿನ ಭರಾಟೆಯನ್ನು ಕಂಡಿತು.

ಜಿಲ್ಲೆಯ ಗ್ರಾಮೀಣ ಪ್ರದೇಶದ ಶೇ. 80ರಷ್ಟು ಕೃಷಿಕೂಲಿಕಾರರು, ಬಡರೈತರು ಹಾಗೂ ಮಧ್ಯಮ ರೈತರು ಖುಷಿಪಡುವ ಸಮಯದಲ್ಲೇನು ಚುನಾವಣೆ ಬಂದುದಿಲ್ಲಾ, ನೀರಾವರಿ ಪ್ರದೇಶದ 2 ಮುಖ್ಯ ಬೆಳೆಗಳಾದ ಒಣಮೆಣಸಿನಕಾಯಿ ನಷ್ಟವಾಗಿ ತೀವ್ರ ಶೋಕದಲ್ಲಿರುವಾಗ ಮತ್ತು ಭತ್ತದ ಬೆಲೆಯು ಪ್ರತಿಚೀಲಕ್ಕೆ 550 ರೂ ನಿಂದ 350ಕ್ಕೆ ಕುಸಿದು ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಹ ಸಂದರ್ಭ ರೈತನಿಗಾದರೇ, ಕೂಲಿ ಕೆಲಸವಿಲ್ಲದೆ ಬರ ಅನುಭವಿಸುವ ಸಂದರ್ಭ ಕೂಲಿಕಾರನಿಗೆ ಇರುವ ಭತ್ತದ ಬೆಳೆಯ ಕುಯಿಲಿನ ಹೆಚ್ಚಿನ ಕೆಲಸವು ಯಂತ್ರಗಳ ಪಾಲಾಗಿತ್ತು. ಒಂದೆಡೆ ಬರ ಮತ್ತೊಂದೆಡೆ ಬೆಲೆಏರಿಕೆ ತೀವ್ರವಾಗಿಯೇ ಇವರನ್ನು ಕಾಡಿತ್ತು. ಬಡ್ಡಿದಾರಸ್ಥರಿಗೆ, ಭೂಮಾಲಿಕರಿಗೆ, ಹಾಗೂ ಕಪ್ಪು ಹಣ ಮತ್ತು ಸಾರಾಯಿಗೆ, ಸಾಲಗಾರ ಹಾಗೂ ಹಸಿದ ಮತದಾರರ ಮೇಲೆ ಒತ್ತಡ ಹೇರಲು ಅನುಕೂಲಕರ ಪರಿಸ್ಥಿತಿಯೇ ಇದಾಗಿತ್ತು.

ಆದುದರಿಂದಾಗಿಯೇ ಕೆಲ ಅಭ್ಯರ್ಥಿಗಳು ತಮ್ಮ ಪಕ್ಷದ ಕಾರ್ಯಕರ್ತರ ಒಳಜಗಳವನ್ನು ಮುಂದುವರೆಸಿ, ಅವರನ್ನು ಕಡೆಗಣಿಸಿ ನೇರವಾಗಿ ಮತದಾರರ ಬಳಿ ಹೋಗಿ ಮತ ಪಡೆಯುವ ಭರವಸೆಯನ್ನು ಹುಟ್ಟಿಸಿತ್ತು.

ಅಭ್ಯರ್ಥಿಗಳ ನಾಮಪತ್ರ ವಾಪಾಸು ಪಡೆಯುವ ಕೊನೆಯ ದಿನಾಂಕ ಮುಗಿಯುತ್ತಿದ್ದಂತೆಯೇ ಪ್ರಚಾರ ಅಬ್ಬರ ಪಡೆಯಿತು.

ಜನರು ಸಂಕಟದಲ್ಲಿರುವಾಗ ವಾಸ್ತವವಾಗಿ ಜನಗಳ ಅಭಿವೃದ್ಧಿಯ ಪ್ರಶ್ನೆಗಳ ಸಾಧನೆಯನ್ನಿಡಿದು ಜನಗಳ ಬಳಿಸಾರುವ ಯಾವ ಮುಖವೂ ಜನತಾದಳ- ಕಾಂಗ್ರೆಸ್ ಹಾಗೂ ಬಿಜೆಪಿಗಳಿಗಿರಲಿಲ್ಲ.! ಆದ್ದರಿಂದಲೇ ಅವರು ಜಿಲ್ಲೆಯ ತಾಲೂಕಿನ ಅಭಿವೃದ್ಧಿಯ ಕಾರ್ಯಕ್ರಮಕ್ಕೆ ಮತಕೇಳದೇ ಹಣ- ಹೆಂಡ- ಜಾತಿ-ಧರ್ಮಗಳಿಗೆ ಮತ ಕೇಳಿದರು. ಅವುಗಳನ್ನೇ ಗೆಲ್ಲುವ ಅಸ್ತ್ರಗಳನ್ನಾಗಿ ಬಳಸಿದ್ದು ಗುಟ್ಟಿನ ವಿಷಯವೇನಲ್ಲ? ಚುನಾವಣೆಯ ಮುನ್ನಾದಿನ ಓಣಿ-ಓಣಿಗಳಲ್ಲಿ ಸಾರಾಯಿ ಪಾಕೇಟ್ ಮತ್ತು ಎಂ.ಸಿ. ಬಾಟಲ್ ಸೆರೆ. ಹಣ-ಹಂಚುವ ಜೀಪು ಕಾರುಗಳು ಬೀಡುಬಿಟ್ಟು ರಾತ್ರಿಯನ್ನು ಓಕುಳಿಯಾಡುವ ಹಗಲನ್ನಾಗಿ ಪರಿವರ್ತಿಸಿದ್ದವು! ಹಂಚುವ ಪೈಪೋಟಿಯಲ್ಲಿ ಬಿಜೆಪಿ, ಕಾಂಗ್ರೈ, ಜನತಾದಳ(ಯು) ಜೊತೆ ಕೆಲ ಪಕ್ಷೇತರ ಅಭ್ಯರ್ಥಿಗಳು ತೊಡಗಿಸಿಕೊಂಡಿದ್ದರು.

ಚುನಾವಣೆಯ ಮುಂಚಿನ 15 ದಿನಗಳ ಹಿಂದಿನಿಂದಲೇ ಇದರೊಳಗೆ ಪೈಪೋಟಿ ಸಾಗಿತ್ತು.

ಓಣಿ, ಓಣಿಗೆ ವಗ್ಗಾರಣಿ ಮಿರ್ಚಿ, ಒಂದು ಪಕ್ಷ ಕಳುಹಿಸಿಕೊಟ್ಟರೇ, ಮತ್ತೊಂದು ಪಕ್ಷ ಉಪ್ಪಿಟ್ಟು ಮಾಡಿ ಉಣಬಡಿಸುತ್ತಿತ್ತು. ಸಂಜೆಯಾಯಿತೆಂದರೆ ಸಾರಾಯಿ ಪಾಕೇಟುಗಳ ಸುರಿಮಳೆ, ಕಾರ್ಯಕರ್ತರು ಬಾರುಗಳಲ್ಲಿ ಕುಡಿದು - ತಿಂದುಕುಪ್ಪಳಿಸುವಂತೆ ಆಸ್ಥೆವಹಿಸಿದವು. ಪಾಪ, ಹಳ್ಳಿಗರು ಹಬ್ಬ-ಹರಿದಿನದ ಮರುದಿನ ಮಾತ್ರವೇ ಕರಿಯೆಂದು ಮಾಂಸತಿನ್ನುವುದು ವಾಡಿಕೆ, ಪ್ರತಿ ರವಿವಾರಗಳು ಕರಿಗಳಾಗಿ ಪರಿಣಮಿಸಿದವು ಓಣಿ, ಓಣಿಗಳಲ್ಲಿ ಕುರಿಗಳು, ಕೋಳಿಗಳು, ಹಲವೆಡೆ, ಕೋಣಗಳು ಬಲಿಯಾದವು. ಅಷ್ಟೊಂದು ಹಣ ಸುರಿಯಲಾಗದ ಕೆಲ ಅಭ್ಯರ್ಥಿಗಳು ಮಾಂಸದಂಗಡಿಯಿಂದ ಕೆಲ ಕೆ.ಜಿ ಮಾಂಸ ತೂಗಿಸಿ ಕಳುಹಿಸಿದರು. ಬರದ ಸಮಯದಲ್ಲಿ ಸುಗ್ಗಿಯೂಟ ಸವಿದರು.

ಕೆಲವೆಡೆ ಓಟಿನ ತೂಕವು ಎಂ.ಸಿ. ಬಾಟಲ್ ಜೊತೆ ನೂರು ರೂಪಾಯಿ ತೂಗಿತಲ್ಲದೇ 30 ಹಾಗೂ 50 ರೂಪಾಯಿಗಳ ಜೊತೆ ಸಾರಾಯಿ ಪಾಕೇಟ್ ಸೇರಿ ಸಾಧಾರಣ ತೂಗಿತು.

ಪಕ್ಷಗಳು	ಜಿಲ್ಲಾ ಪಂಚಾಯತ್ ಸ್ಪರ್ಧಿಸಿ ಸ್ಥಾನಗಳು	ಜಿಲ್ಲಾ ಪಂಚಾಯತ್ ಗೆದ್ದ ಸ್ಥಾನಗಳು	ತಾಲೂಕು ಪಂಚಾಯತ್ ಸ್ಪರ್ಧಿಸಿದ ಸ್ಥಾನಗಳು	ತಾಲೂಕು ಪಂಚಾಯತ್ ಗೆದ್ದ ಸ್ಥಾನಗಳು
ಕಾಂಗ್ರೆಸ್	32	23	112	60
ಜನತಾದಳ(ಯು)	26	04	81	28
ಜನತಾದಳ (ಎಸ್)	09	01	21	02
ಬಿಜೆಪಿ	12	04	41	15
ಸಿಪಿಐ(ಎಂ)	02	-	05	-
ಸಿಪಿಐ	01	-	-	-
ಬಿ.ಎಸ್.ಪಿ	07	-	23	-
ಪಕ್ಷೇತರರು	11	-	39	07

ಶೇ 25 ಮಾತ್ರವೇ ನೀರಾವರಿ ಹೊಂದಿದ ಬರದ ಜಿಲ್ಲೆಯ ಬಡವರು ಕಿರುನೀರಾವರಿ ಹಾಗೂ ಕಾಮಗಾರಿಗಳ ಮರೆತು ಹಣದ ಹೊಳೆಯಲ್ಲಿ ತೇಲಿ ಹೋದುದು, ಕಳಪೆ ಕ್ರಿಮಿನಾಶಕ, ಕಳಪೆಗೊಬ್ಬರ, ಕಳಪೆ ಬೀಜ ಮಾರಾಟಗಾರರ ಮೇಲೆ ನಿಯಂತ್ರಣ ಹೊಂದದ ಕೃಷಿ ಇಲಾಖೆಯ ಉಸ್ತುವಾರಿಯಾಗಿರುವ ಜಿಲ್ಲಾ ಪಂಚಾಯತ್‌ನ ನಿಜವಾದ ಹೊಣೆಗಳು ಮತದಾರರ ಮುಂದೆ ಬರಲೇ ಇಲ್ಲ. ಸಿ.ಪಿ.ಐ.(ಎಂ) ಹೊರತು ಯಾವ ವಿರೋಧ ಪಕ್ಷಗಳೂ ಇವನ್ನು ಬಯಲಿಗೆಳೆಯುವ, ರೈತರ ಮುಂದೆ ಕೃಷಿ ಹಾಗೂ ಗ್ರಾಮೀಣ

ಜಿಲ್ಲಾ-ತಾಲ್ಲೂಕು ಪಂಚಾಯ್ತಿ ಚುನಾವಣೆಗಳು

ಯು. ಬಸವರಾಜ

ಜಾತಿಸಭೆಗಳು, ಧಾರ್ಮಿಕ ಕೇಂದ್ರಗಳ ಮೈಕುಗಳು, ಕಳಸಗಳು ಕಾಂಪೌಂಡುಗಳು ಮತ್ತೊಂದು ತೂಕ ನೀಡಿದವು. ಅಭ್ಯರ್ಥಿಗಳು ಕಳುಹಿಸಿದ ಸುಮಂಗಲಿಯರು ನೀಡಿದ ಕುಂಕುಮದ ಜೊತೆ ಕುಪ್ಪಸದ ಬಟ್ಟೆಗಳು ತೂಕದಲ್ಲಿ ಪಾಲ್ಗೊಂಡವು.

ಪ್ರತಿಯೊಬ್ಬ ಬಡಮತದಾರ 2-3 ಪಕ್ಷಗಳಿಂದ ಕೆಲಪಕ್ಷೇತರ ಅಭ್ಯರ್ಥಿಗಳಿಂದ ಕನಿಷ್ಠವೆಂದರೂ 100 ರೂಪಾಯಿಗಳಷ್ಟು ಹಣ ಹಾಗೂ 3-4 ಪಾಕೇಟ್ ಸೆರೆ ಪಡೆದಿದ್ದಾನೆ. 4-5 ಮತದಾರರಿರುವ ಕುಟುಂಬದ ಆದಾಯ ಆ ದಿನ 500ರವರೆಗೆ ಕನಿಷ್ಠ ಏರಿತು. ಪ್ರತಿಯಾಗಿ ಶೇ. 71ರಷ್ಟು ಮತದಾನವಾಗುವಂತೆ ನೋಡಿಕೊಂಡಿತು. ಹೆಚ್ಚಿನೆಡೆ ಮನೆ ಮಂದಿಯೊಂದಿಗೆ ಅಂದು ಹಬ್ಬ ಆಚರಿಸಿತು.

ಕೋಷ್ಟಕ-2
ಕಳೆದ ಜಿಲ್ಲಾ ಪಂಚಾಯತ್ ಹಾಗೂ ಈಗಿನ ಜಿಲ್ಲಾ ಪಂಚಾಯತ್‌ನಲ್ಲಿ ವಿವಿಧ ಪಕ್ಷಗಳ ಬಲಾಬಲದ ವಿವರ.

ವರ್ಷ	ಕಾಂಗ್ರೆಸ್	ಜನತಾದಳ	ಬಿಜೆಪಿ
1995	08	24	0
2000	23	41	4

ಅದೇ ದಿನ ಹಾಲು ಬಾಷೆ ಮಾಡಿಸಿಕೊಳ್ಳುವ, ಪ್ರಮಾಣಮಾಡಿಸಿಕೊಳ್ಳುವ ಜಾತಿ ಜನರ ಸಭೆಗಳು ಓಣಿಓಣಿಗಳಲ್ಲೂ ನಡೆದ ಸುಗ್ಗಿಯೂಟ ಸವಿದವರ ಜೊತೆ ಕೈಜೋಡಿಸಿ, ಜಿಲ್ಲೆಯ, ತಾಲೂಕಿನ ಅಭಿವೃದ್ಧಿಯ ಪ್ರಶ್ನೆಗಳಿಗೆ ಕಲ್ಲು ಹಾಕಿದವು.

ತಾಲೂಕು ಪಂಚಾಯ್ತಿ ಕ್ಷೇತ್ರದಲ್ಲಿ ಈ ಪಕ್ಷಗಳ ಅಭ್ಯರ್ಥಿಗಳು ತಲಾ ಎರಡುವರೆ ಲಕ್ಷದಿಂದ 5 ಲಕ್ಷಗಳವರೆಗೆ ಖರ್ಚುಮಾಡುವಂತೆ ಹಾಗೂ ಜಿಲ್ಲಾ ಪಂಚಾಯ್ತಿಗೆ ಕನಿಷ್ಠ 8 ಲಕ್ಷದಿಂದ 25 ಲಕ್ಷದವರೆಗೆ ಖರ್ಚುಮಾಡುವಂತೆ ನೋಡಿಕೊಂಡಿವೆ. ಕೆಲ ಪ್ರತಿಷ್ಠಿತ ಕಣಗಳಲ್ಲಿ ಅಭ್ಯರ್ಥಿಗಳ ಖರ್ಚು 80 ಲಕ್ಷಕ್ಕೆ ಮುಟ್ಟಿದ ಮಾತು ಕೇಳಿಬರುತ್ತಿದೆ.

ಕೋಷ್ಟಕ 1
ಬಳ್ಳಾರಿ ಜಿಲ್ಲಾ ಪಂಚಾಯತ್‌ನ ಒಟ್ಟು ಮತದಾರರು ಹಾಗೂ ಮತಚಲಾಯಿಸಿದವರ ವಿವರ

ಲಿಂಗವಾರು	ಒಟ್ಟು ಮತದಾರರು	ಮತ ಚಲಾಯಿಸಿದವರು	ಶೇಕಡಾವಾರು
ಪುರುಷರು	3.99,065	2,97,432	
ಮಹಿಳೆಯರು	4,08,659	2,79,313	
ಒಟ್ಟು	8,04,729	5,76,745	71.40

ಆಡಳಿತ ಯಂತ್ರಾಂಗ ಮೂಕ ಪ್ರೇಕ್ಷಕನಂತೆ ನೋಡಿತು, ಮಾತ್ರವಲ್ಲ ಹುಚ್ಚು ಹೊಳೆಯಲ್ಲಿ ಕೊಚ್ಚಿಹೋಯಿತು.

ಜಿಲ್ಲೆಯ ಭೂಮಾಲಿಕರು, ಶ್ರೀಮಂತ ಗುತ್ತಿಗೆದಾರರು, ರಸಾಯನಿಕ ಗೊಬ್ಬರ ಕ್ರಿಮಿನಾಶಕ ಮಾರಾಟಮಾಡಿ ರೈತರ ಮೂಲ ಖರೀದಿಸುವ ಬಕಾಸುರ ಬಡ್ಡಿ ವ್ಯಾಪಾರಗಳು, ಅವರ ಕಪ್ಪು ಹರಾವು ಸಾರಾಯಿ ಗುತ್ತಿಗೆದಾರರ ಎರಡನೇ ದರ್ಜೆಯ ಸಾರಾಯಿ ಪಾಕೇಟ್ ಜೊತೆಸೇರಿ ಚುನಾವಣೆಯಲ್ಲಿ ವಿಜೃಂಭಿಸಿದವು.

ಅಭಿವೃದ್ಧಿಗೊಂದು ಪ್ರಣಾಳಿಕೆಯನ್ನಿಡುವ ಕೆಲಸ ಮಾಡಲಿಲ್ಲ. ಕುಣಿಗಳಿಂದ ಕೂಡಿದ ರಸ್ತೆಗಳು, ಹೊಲಗಳು ಕಾಣದ ರಸ್ತೆ, ಸೇತುವೆಗಳು ಕಾಣದ ಗ್ರಾಮ ನೈರ್ಮಲ್ಯ, ಆರೋಗ್ಯ ಹಾಗೂ ಇಲ್ಲದ ಕಾಡುಗಳಿಗೆ ಚೆಲ್ಲಿದ ನೂರಾರು ಕೋಟಿ ಹಣ ನುಂಗಿದ ಹೆಗ್ಗಣಗಳು ಗೇಣಿದಾರರ ಶ್ರಮ ಹೀರುವ, ರೈತರ ರಕ್ತ ಹೀರುವ ಬಡ್ಡಿ ವ್ಯಾಪಾರಿಗಳು ಆ ಪಕ್ಷ ಅಥವ ಈ ಪಕ್ಷದ ಹೆಸರಿನಲ್ಲಿ ಆಡಳಿತ ಯಂತ್ರದ ಮೇಲೆ ಹತೋಟಿಯನ್ನು ಗಳಿಸಿದರು ಹಾಗೂ ಮತದಾರರಿಗೆ ಉಣಬಡಿಸಿದ ಮಾಂಸ ಸೆರೆಗಳಿಗೆ ಬದಲಿಯಾಗಿ ರೈತ- ಕೂಲಿಕಾರರ ದೋಚಿತಿನ್ನುವ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡರು.

ಸಿಪಿಐ(ಎಂ)ನ ಟೀಕೆ ಹಾಗೂ ಮಾತುಗಳು ಸೆರೆ, ಹಣದ ಅಬ್ಬರದಲ್ಲಿ ಜಾತಿ ಬಾಂಧವ್ಯ ಹಾಗೂ ಸಾಲಗಾರರ ಒತ್ತಡದಲ್ಲಿ ಕೆಲವೇ ಜನರಿಗೆ ಮಾತ್ರ ತಲುಪಿದುವು.

ಸಿಪಿಐ(ಎಂ) ಮಾತ್ರವೇ,

ಅದು ಸಿಪಿಐ(ಎಂ) ಮಾತ್ರವೇ ಜನತೆಯನ್ನು ಭ್ರಷ್ಟರನ್ನಾಗಿಸದೇ ಜಾತಿಯ ಭಾವನೆಯಲ್ಲೂ ಮುಳುಗಿಸದೇ, ಪ್ರಮಾಣ-ಭಾಷೆಗಳಿಂದ ಕಟ್ಟಿ ಹಾಕದೇ ಜಿಲ್ಲೆಯ, ತಾಲೂಕಿನ ರೈತರ-ಕೂಲಿಕಾರರ ಹಾಗೂ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯ ಹೋರಾಟದ ಕಾರ್ಯಕ್ರಮಕ್ಕೆ ತಾನು ಸ್ಪರ್ಧಿಸಿದ ಸೀಮಿತ ಕ್ಷೇತ್ರದಲ್ಲಾದರೂ ಮತದಾರ ಯೋಚಿಸಿ ಮತನೀಡಲು ಕೋರಿತು.

ಜನವಿರೋಧಿ, ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುವ ಅಭಿವೃದ್ಧಿ ಹೀನ ಅಪ್ರಮಾಣಿಕ ಅನೈತಿಕ ರಾಜಕೀಯಕ್ಕೆ ಮತವೋ? ಇಲ್ಲಾ, ಜಿಲ್ಲಾ, ತಾಲೂಕಿನ ಅಭಿವೃದ್ಧಿಯ ಹೋರಾಟದ ಕಾರ್ಯಕ್ರಮಕ್ಕೆ, ನೈತಿಕ ಪ್ರಾಮಾಣಿಕ-ಜನಪರ ರಾಜಕೀಯಕ್ಕೆ ಮತವೋ ಎಂಬ ಪ್ರಶ್ನೆಯನ್ನು ಜನತೆಯ ಮುಂದೊಡ್ಡಿತು. ನೂರಾರು ಜನರು ಪಾಲ್ಗೊಂಡು ಹತ್ತಾರು ಸಭೆಗಳನ್ನು, ಬೀದಿಬದಿ ಬೈಟೆಕ್ ಸಭೆ ನಡೆಸಿ ಮತದಾರರ ಮನವೊಲಿಸಲು ಮುಂದಾಯಿತಾದರೂ, ಕುರುಗೋಡು ಕ್ಷೇತ್ರದಲ್ಲಿ ಗೆದ್ದ ಅಭ್ಯರ್ಥಿಯ ಕಾಲುಭಾಗ ಮಾತ್ರವೇ ಪಡೆದು ಆಮಟ್ಟಿಗೆ ಭ್ರಷ್ಟ ಹಾಗೂ ಅನೈತಿಕ, ಜನ ವಿರೋಧಿ ರಾಜಕೀಯದ ಜೊತೆ ಹೋರಾಡಿತು. ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ 1500ರಷ್ಟು ಮತ ಪಡೆದರೂ ಮತದಾರರು ತಾಲೂಕು ಪಂಚಾಯ್ತಿ ವಿಷಯದಲ್ಲಿ ಹೆಚ್ಚಿನ ಮತನೀಡಲಿಲ್ಲ. ಮೊದಲ ಆದ್ಯತೆಯಾಗಿ ವಿರೋಧಿಗಳನ್ನೇ ಆಯ್ಕೆಮಾಡಿಕೊಂಡರು. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಕೆಲಸ ಕಾರ್ಯಗಳು ಶ್ಲಾಘನೆಗೊಳಗಾಗಿದ್ದೆಂದು ಈ ಚುನಾವಣೆಯ ವಿಶೇಷ.

ಬರದ ವಿರುದ್ಧ ಇಮ್ಮಡಿ ಹೋರಾಟ ನಡೆಸುವ, ಜಾತಿಭಾವನೆಯನ್ನು ಹೊಡೆದೋಡಿಸುವ ಹೋರಾಟದ ತುರ್ತಿನ ಅವಶ್ಯಕತೆಯನ್ನು ಚಳುವಳಿಯ ಪ್ರಭಾವವನ್ನೂ ಕ್ರೋಢೀಕರಿಸಿ ಮುನ್ನಡೆಯುವ ಅವಶ್ಯಕತೆಯನ್ನೂ ಸಿಪಿಐ(ಎಂ) ಪಕ್ಷದ ಸ್ಥಳೀಯ ಸಮಿತಿಗೆ ಈ ಚುನಾವಣೆ ಮನದಟ್ಟು ಮಾಡಿತು.

ಮಲಪ್ರಭಾ ನೀರಾವರಿ ಪ್ರದೇಶ

ಯಾವ ಬೆಳೆ ಬೆಳೆದರೂ......

ಕರ್ನಾಟಕದ ರೈತ ಚಳುವಳಿಯಲ್ಲಿ ಇತಿಹಾಸದ ನಿರ್ಮಾಣ ಮಾಡಿದ ನರಗುಂದ-ನವಲಗುಂದ ರೈತರ ಇಂದಿನ ಸಂಕಟ



ಧಾರವಾಡ ಜಿಲ್ಲೆಯ ನವಲಗುಂದ ತಾಲೂಕು, ಹುಬ್ಬಳ್ಳಿ ತಾಲೂಕಿನ ಪೂರ್ವಭಾಗ, ಗದಗ ಜಿಲ್ಲೆಯ ನರಗುಂದ ಬೆಳಗಾಂವ ಜಿಲ್ಲೆಯ ಸೌಂದತ್ತಿ ತಾಲೂಕು ಮಲಪ್ರಭಾ ನೀರಾವರಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು ಗದಗ ಜಿಲ್ಲೆಯ ರೋಣ ತಾಲೂಕನ್ನು ಇದರ ಪರಿಧಿಯಲ್ಲಿ ತರಲು ಯೋಜಿಸಿ ಕಾರ್ಯ ಅಭಿವೃದ್ಧಿ ಹಂತದಲ್ಲಿ ಇದೆ. ಸುಮಾರು ಹೆಚ್ಚುವರಿ ಭೂಮಿಗೆ ನೀರು ಪೂರೈಸುವ ಹಾಗೂ ಹುಬ್ಬಳ್ಳಿ -ಧಾರವಾಡ ನಗರಗಳಿಗೆ ಮತ್ತು ಇತರ ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುವುದು ಈ ಯೋಜನೆಯ ಗುರಿ. ಮೊದಲಿನಿಂದಲೂ ಬರಗಾಲದ ಬವಣೆಯಿಂದ ನಲುಗುತ್ತಿದ್ದ ಪ್ರದೇಶ ವಿದು ಎಷ್ಟೋ ಸಲ ವರ್ಷದ ಗಂಜಿಯೂ, ಭಾರದಷ್ಟು ಕಡಿಮೆ ಫಸಲು ಬಂದ ಉದಾಹರಣೆಗಳಿವೆ.

ಹೊಸ ಆಸೆ ಕುದಿರಿಸಿದ ಯೋಜನೆ

ಮಲಪ್ರಭಾ ನೀರಾವರಿ ಯೋಜನೆ ಈ ಭಾಗದ ರೈತರಿಗೆ ಹೊಸ ಬದುಕಿನ ಆಶೆಯನ್ನು ಕುದುರಿಸಿತು. ರೈತ ಹೊಸ ಕನಸು ಕಟ್ಟಲಾರಂಬಿಸಿದ ಅಧಿಕ ಫಸಲು, ಆರ್ಥಿಕ ಪರಿಸ್ಥಿತಿಯ ಸುಧಾರಣೆ, ನೆಮ್ಮದಿಯ ಜೀವನ ಅವನ ಕನಸಿನ ಸಂಗತಿಗಳಾದವು. ಕೃಷಿ ಕೂಲಿಕಾರರೂ ಸಹ ವರ್ಷವಿಡೀ ಕೆಲಸ ಸಿಕ್ಕುತ್ತದೆ ಎಂದು ಗುಳೆ ಹೋಗುವುದು ತಪ್ಪುತ್ತದೆ ಎಂದು ಆಶಿಸಿದರು. ಒಟ್ಟಾರೆಯಾಗಿ ಉತ್ತಮ ಜೀವನದ ಎಲ್ಲ ಅಂಶಗಳನ್ನು ಕಲ್ಪಿಸಿಕೊಂಡರು. ಇಲ್ಲಿಯ ರೈತರು 1974-75 ರಲ್ಲಿ ಮಲಪ್ರಭ ಕಾಲುವೆಗಳಗುಂಟ ಈ ಪ್ರದೇಶದಲ್ಲಿ ಹರಿದಳು.

ರೈತರ ನಿರೀಕ್ಷೆ ಹುಸಿಯಾಗಲಿಲ್ಲ. ಸಂಕರಣ ಬೀಜಗಳು ರಾಸಾಯನಿಕ ಗೊಬ್ಬರ ಮತ್ತು ಆಧುನಿಕ ಕೃಷಿ ಉಪಕರಣಗಳ ಬಳಕೆಯಿಂದ ಸಾಂಪ್ರದಾಯಕ ಕೃಷಿಯಲ್ಲಿ ಬೆಳೆಯುವದಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ಬೆಳೆತೆಗೆದರು. ರೈತರ ಹೃನ್ಮನಗಳು ಆನಂದ ದಿಂದ ಅರಳಿದವು. ಈ ಸ್ಥಿತಿ ನಿರಂತರ ಎಂದು ಭಾವಿಸಿದರು. ಆದರೆ ನೀರಾವರಿ ಪ್ರಾರಂಭವಾದ ನಾಲ್ಕಾರು ವರ್ಷಗಳಲ್ಲೆ ರೈತರು ಬಂಡಾಯದ ಕಹಳೆ ಊದಿದ್ದು ಯಾರಿಗಾದರೂ ಸಖೇದಾಶ್ಚರ್ಯ



ವನ್ನುಂಟು ಮಾಡಿರದು. ಕಾರಣವಿಷ್ಟೆ ಒಣ ಬೇಸಾಯದಲ್ಲಿ ಸಾಂಪ್ರದಾಯಕ ಪದ್ಧತಿಯನ್ನು ರೂಢಿಸಿಕೊಂಡಿದ್ದ ರೈತರು, ನೀರಾವರಿ ಬಂದ ನಂತರ ಆಧುನಿಕ ಕೃಷಿಗೆ ಮಾನಸಿಕವಾಗಿ ಹಾಗೂ ಧೈಹಿಕವಾಗಿ ಸಿದ್ಧಗೊಳ್ಳುತ್ತಿದ್ದ ಸಂದರ್ಭದಲ್ಲಿ ಹತ್ತು ಹಲವಾರು ಸಮಸ್ಯೆಗಳು ನೀರಾವರಿಯೊಂದಿಗೆ ಹರಿದು ಬಂದವು. ನೀರಾವರಿ ತೆರಿಗೆ ಅಭಿವೃದ್ಧಿಕರ, ಹುಟ್ಟುವಳಿಗಳಿಗೆ ಯೋಗ್ಯ ಬೆಲೆ ಸಿಕ್ಕದಿರುವುದು, ಬೀಜ, ಗೊಬ್ಬರಗಳಲ್ಲಿ ಮೋಸ ಹೀಗೆ ಸಮಸ್ಯೆಗಳ ಪಟ್ಟಿ ಬೆಳೆಯಿತು. ರೈತರು ಸಂಘಟಿತ ಶಕ್ತಿಯಾಗುವದರೊಂದಿಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನಿಶ್ಚಯಿಸಿದರು.

ಅದರ ಪರಿಣಾಮವೆ ನರಗುಂದ -ನವಲಗುಂದ ರೈತ ಬಂಡಾಯ. 1980 ರಲ್ಲಿ ನರಗುಂದ ಎರಡನೆ ಬಾರಿಗೆ ಬಂಡಾಯಕ್ಕೆ (1857 ರಲ್ಲಿ ನರಗುಂದ ಸಂಸ್ಥಾನಿಕ ಬಾಬಾಸಾಹೆಬ ಬ್ರಿಟಿಷರೊಂದಿಗೆ ಹೋರಾಡಿದ್ದು ಪ್ರಥಮ ಬಂಡಾಯ, ಹಸಿರು ನಿಶಾನೆ ತೋರಿಸಿತು ಮತ್ತು ಹಿಂಸಾತ್ಮಕ ಘಟನೆಯಲ್ಲಿ ಪರ್ಯಾವಸಾನಗೊಂಡಿತು. ಆ ಮೂಲಕ ಹೊತ್ತಿದ ಕಿಡಿ ಜ್ವಾಲೆಯಾಗಿ ರಾಜ್ಯಾದ್ಯಂತ ಪಸರಿಸಿದ್ದು ರಾಜ್ಯದಲ್ಲಿ ರೈತ ಸಂಘಟಿತ ಶಕ್ತಿಯಾಗಿ ರಾಜಕೀಯದಲ್ಲಿ ಒಂದು ನೆಲೆ ಕಂಡುಕೊಳ್ಳಲು ಪ್ರಯತ್ನಿಸಿದ್ದು, ಕೇಂದ್ರ-ರಾಜ್ಯ ಸರಕಾರಗಳು ರೈತರ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಲು ಸಿದ್ಧವಾದದ್ದು ರಾಷ್ಟ್ರ ಮಟ್ಟದಲ್ಲೂ ರೈತ ಸಂಘಟನೆ ಹುಟ್ಟು ಹಾಕಲು ಹವಣಿಸಿದ್ದು ಈಗ ಇತಿಹಾಸ.

ಮಲಪ್ರಭಾ ರೈತ ಬಂಡಾಯ ಒಂದು ಚರಿತ್ರಾರ್ಹ ಘಟನೆ ಇದು ಸಂಭವಿಸಿ ಈಗ 20 ವರ್ಷಗಳಾದವು ಬಂಡಾಯವಾದ ವರ್ಷವೆ ಒಂದು ಮಗು ಜನಿಸಿತು ಎಂದು ಭಾವಿಸಿದರೆ ಅವನಿಗೆ ಈಗ 20 ವರ್ಷಗಳ ತಾರುಣ್ಯ. ಇಲ್ಲೊಂದು ಐತಿಹಾಸಿಕ ಹೋರ್‍ಾಟ ನಡೆದ ಬಗ್ಗೆ ಈ ಯುವ ಪೀಳಿಗೆಗೆ ತಿಳಿದಿರಲಿಕ್ಕಿಲ್ಲ ಈ ಹೋರಾಟದ ಅಂತಃಸತ್ವ ಅದು ಉಂಟು ಮಾಡಿದ ವ್ಯಾಪಕ ಪರಿಣಾಮಗಳ ಕುರಿತು ಅವನು ಊಹಿಸಲಾರ ಗ್ರಹಿಸಲಾರ. ಆದರೆ ಅವನ ಪಾಲಕರಿಗೆ ಸಂಬಂಧಿಗಳಿಗೆ ಆ ನೆನಪು ಇನ್ನು ಹಸಿಯಾಗಿರಲಿಕ್ಕೆ ಸಾಕು. ಎರಡು ದಶಕಗಳ ಅವಧಿಯಲ್ಲಿ ರೈತಾಪಿ ವರ್ಗದ ಸ್ಥಿತಿಗತಿಗಳೇನು, ಸರಕಾರ ಅವರ ಸಮಸ್ಯೆಗಳ ಪರಿಹಾರಕ್ಕೆ ಕೈಗೊಂಡ ಕ್ರಮಗಳೇನು, ಅವನ ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಾದ ಬದಲಾವಣೆಗಳೇನು ಎಂಬುದರ ನೈಜ ಚಿತ್ರಣವನ್ನು ಗುರುತಿಸುವದು ಈ ಲೇಖನದ ಉದ್ದೇಶ. ಬಂಡಾಯದ ನಂತರ ಸರಕಾರ ರೈತರಿಗೆ ಸ್ವಲ್ಪ ರಿಯಾಯಿತಿಗಳನ್ನು ತೋರಿತು. ಅಭಿವೃದ್ಧಿಕರ ವಸೂಲಾತಿ ನಿಲುಗಡೆ, ಸಹಕಾರಿ ಸಂಘಗಳ ಮೂಲಕ ಸುಲಭ ಸಾಲ ಮುಂತಾದವುಗಳು ಅಂಥ ಸವಲತ್ತುಗಳಲ್ಲಿ ಸೇರಿದವು. ಆದರೆ ಈ ಸವಲತ್ತುಗಳು ಅವನ ಸಮಸ್ಯೆಗಳನ್ನು ನಿವಾರಿಸಲಿಲ್ಲ ಎಂಬುದ ದಿಟ,

ಜಲಾಶಯ ಭರ್ತಿಯಾದರಷ್ಟೇ ಬೆಳೆ

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಸುತ್ತವಿರುವ ಭೂಮಿ ಕಪ್ಪು ಮಣ್ಣಿನಿಂದ ಕೂಡಿದೆ. ಬೇಸಿಗೆಯಲ್ಲಿ ಉಷ್ಣತೆಯಿಂದ ಭೂಮಿಯಲ್ಲೂ ಆಳವಾದ ಸೀಳುಗಳು ಉಂಟಾಗುತ್ತವೆ. ಇಂಥ ಭೂಮಿಯಲ್ಲಿ ನೀರಾವರಿ ಸುಲಭವಲ್ಲ ಒಂದು ಹೆಕ್ಟೇರ್ ಭೂಮಿಗೆ ನೀರುಣಿಸಲು 3-4 ದಿನಗಳೇ ಬೇಕಾಗುತ್ತದೆ. ಕಾರಣ ನೀರು ಭೂಮಿಯ ಆಳಕ್ಕಿಳಿದು ಒಂದು ಕಡೆಗೆ ಹಾಯಿಸಿದ ನೀರು ಇನ್ನೊಂದು ಕಡೆಗೆ ಸಂಚಯವಾಗುತ್ತ ಹೋಗುತ್ತದೆ. ಬೇಸಿಗೆಯಲ್ಲೂ ಒಂದೆರಡು ಸಲ ಭಾರಿ ಮಳೆಯಾಗಿ ನೆಲದಲ್ಲಿ ಉಂಟಾದ ಕಂದಕಗಳು ಮುಚ್ಚಿಕೊಂಡಿದ್ದರೆ ಮಾತ್ರ ಕಾಲುವೆಯಿಂದ ಸುಲಭವಾಗಿ ನೀರು ಹಾಯಿಸಲು ಸಾಧ್ಯ.ಇಲ್ಲಿ ಹೇಳಬೇಕಾದುದು ಇಷ್ಟೆ ಕಾಲುವೆಯಲ್ಲೂ ನಿರಂತರವಾಗಿ ನೀರು ಹರಿಯುತ್ತಿರಬೇಕು. ಈ ಬೇಡಿಕೆ ಪೂರೈಸಲು ಅಣೆಕಟ್ಟೆಯಲ್ಲೂ ಗರಿಷ್ಠ ಮಟ್ಟದಲ್ಲಿ ನೀರಿನ ಸಂಗ್ರಹವಾಗ ಬೇಕಾಗುತ್ತದೆ. ಜಲಾಶಯ ಭರ್ತಿಯಾದ ಉದಾಹರಣೆಗಳು ಕಡಿಮೆ. ಜಲಾಶಯದ ಪ್ರದೇಶದ ಹರವು ಕಡಿಮೆ. ರಾಳಗಾಂವ ಸುತ್ತಲು ಧಾರಕಾರ ಮಳೆ ಬಿದ್ದರೂ ಬಾನಾಪೂರ ತಾಲೂಕಿಗೆ ಕಡಿಮೆ ಮಳೆಯಾದಲ್ಲಿ ಮಲಪ್ರಭಾ ಜಲಾಶಯ ಭರ್ತಿಯಾಗದು. ಆದ್ದರಿಂದ ಪ್ರತಿವರ್ಷ ಈ ಭಾಗದ ರೈತ ಮಳೆ ಬಿದ್ದಾಗಲೆಲ್ಲಾ ಜಲಾಶಯದ ಮಟ್ಟವನ್ನು ಗಮನಿಸುತ್ತಲೆ ಇರುತ್ತಾನೆ. ಜುಲೈ ತಿಂಗಳಷ್ಟೊತ್ತಿಗೆ ಜಲಾಶಯಕ್ಕೆ ನೀರು ಸಂಗ್ರಹವಾಗದೆ ಹೋದರೆ ರೈತರು ಆತಂಕಗೊಳ್ಳುತ್ತಾರೆ. ಎಷ್ಟೋ ಸಲ ಡಿಸೆಂಬರ್- ಜನವರಿ ತಿಂಗಳಲ್ಲಿ ಕಾಲವೆಗಳು ಬರಿದಾಗಿದ್ದ ಉದಾಹರಣೆಗಳಿವೆ. ಜೋಳ-ಗೋದಿ ಕಾಳು ಕಟ್ಟುವ ಸಮಯವಿದು. ಹತ್ತಿ ಕಾಯಿ ಒಡೆದು ಹತ್ತಿ ಬರುವ ಸಮಯ ಇಂಥ ಸಮಯದಲ್ಲಿ ಭೂಮಿಗೆ ನೀರಿಲ್ಲದಿದ್ದರೆ ಫಸಲು ನಷ್ಟವಾಗುತ್ತದೆ ಹಾಕಿದ ಹಣ ಪಟ್ಟ ಶ್ರಮ ವ್ಯರ್ಥವಾಗುತ್ತದೆ. ಹೀಗೆ ಬೆಳೆ ನಷ್ಟವಾದ ಪ್ರಸಂಗಗಳು ಅದೆಷ್ಟೊ.

ಕೈಕೊಟ್ಟ ಹತ್ತಿ ಬೆಳೆ

ನೀರಾವರಿ ಪ್ರಾರಂಭವಾದ ಮೂರು ನಾಲ್ಕು ವರ್ಷಗಳಲ್ಲಿ ರೈತರ ನೀರಿಕ್ಷೆ ಮೀರಿ ಫಸಲು ಬಂದಿತು. ಒಂದು ಎಕರೆ ಜಮೀನಲ್ಲಿ ಕ್ವಿಂಟಾಲು ಹತ್ತಿಯನ್ನು ಬೆಳೆದ ರೈತ ಅದೇ ಭೂಮಿಯಲ್ಲಿ 12-15 ಕ್ವಿಂಟಾಲ್ ವರಲಕ್ಷ್ಮಿ ಹತ್ತಿ ಬೆಳೆದಾಗ ಆ ರೈತನ ಆನಂದಕ್ಕೆ ಮಿತಿಯೆ ಇರಲಿಲ್ಲ. ಮನೆ ತುಂಬ ಕಾಳು, ಆವರಣದ ತುಂಬ ಹತ್ತಿ ಗಂಟುಗಳು ರೈತರ ಮನವನ್ನು ಸೂರೆಗೂಡವು. ವರ್ಷದಲ್ಲಿ ಎರಡು ಬೆಳೆ ದುಪ್ಪಟ್ಟು ಮೂರು ಪಟ್ಟು ಉತ್ಪಾದನೆ ನಿಶ್ಚಿತ ಎಂದು ಲೆಕ್ಕಹಾಕಿದ ರೈತರು ಖರ್ಚಿನ ಮಾರ್ಗಗಳನ್ನು ಕಂಡು ಕೂಂಡರು. ಅನುತ್ಪಾದಕ ವೆಚ್ಚಗಳು ವ್ಯಸನಗಳು ಅವರ ಬದುಕಿನಲ್ಲಿ ಸಾಮಾನ್ಯವಾದವು. ಆದರೆ ವರ್ಷಗಳು ಉರುಳಿದಂತೆ ಅವರ ಲೆಕ್ಕಾಚಾರ ತಲೆಕೆಳಗಾಯಿತು, ವರಲಕ್ಷ್ಮಿ ವರ ನೀಡದಾದಳು. ಡಿ.ಸಿ.ಎಚ್. ಹತ್ತಿ ವರಲಕ್ಷ್ಮಿಯ ಬೆಳೆಗೆ ಪರ್ಯಾಯವಾಗಿ ಬಂದಿತು."ಅದು ಸ್ವಲ್ಪ ಕಾಲ ಮಾತ್ರ "ಹತ್ತಿಬೆಳೆಯುವುದು ಹಾಳಾಗುವದಕ್ಕೆ" ಎಂಬುದು ರೈತರ ಅನುಭವಕ್ಕೆ ಬಂದಿದೆ. ಒಂದು ಕಾಲದಲ್ಲಿ ಹತ್ತಿಯ ಪರಿವೇಷ ದಂತೆ ಕಂಡ ಈ ಪ್ರದೇಶದಲ್ಲಿ ಹತ್ತಿ ಬೆಳೆ ಮರುಭೂಮಿಯಲ್ಲಿ ಓಯಾಸಿಸ್ ನಂತೆ ಅಲ್ಲೊಂದು ಇಲ್ಲೊಂದು ಕಾಣಸಿಗುತ್ತದೆ. ಕೃಷಿ ತಜ್ಞರಲ್ಲೂ ಇದಕ್ಕೆ ಪರಿಹಾರ ಇದ್ದಂತೆ ಇಲ್ಲ. ಹತ್ತಿಯ ನಂತರ ಹಣದ ಬೆಳೆಯಾಗಿ ಸೂರ್ಯಕಾಂತಿಯನ್ನು ಆಶ್ರಯಿಸಿದ ರೈತರು ಬಹುಬೇಗನೆ ಕೈಸುಟ್ಟುಕೊಂಡರು ಒಂದು ರೋಗಕ್ಕೆ ಈ ಬೆಳೆ ತುತ್ತಾಗಿ ಬೆಳೆ ನಾಶವಾಗುತ್ತಿತ್ತು. ಗೋವಿನ ಜೋಳವೊಂದೆ ರೈತರ ಅಶಾಕಿರಣವಾಗಿದೆ. ನರಗುಂದ ನವಲಗುಂದ ತಾಲೂಕುಗಳಲ್ಲಿ ಈರುಳ್ಳಿ ಬಿತ್ತನೆ ಇಲ್ಲವೆನ್ನುವಷ್ಟು ಕಡಿಮೆ. ಆದರೆ ಈ ವರ್ಷ ಎಲ್ಲ ಕಡೆಗೂ ಈರುಳ್ಳಿ ಬೆಳೆಯಲಾಯಿತು. ಕಾರಣ ಹಿಂದಿನ ವರ್ಷ ಈರುಳ್ಳಿ ಒಳ್ಳೆ ಧಾರಣೆ ಪಡೆದು ರೈತರ ಭಾಗ್ಯದ ಬಾಗಿಲನ್ನೆ ತೆರೆಯಿತು. ಸಹಜವಾಗಿ ಈ ಭಾಗದ ರೈತರು ಈರುಳ್ಳಿ ಬೆಳೆಯಲು ಮನಸ್ಸು ಮಾಡಿದರು. ಎಲ್ಲ ಕಡೆಗಳಲ್ಲಿ ಈರುಳ್ಳಿ ಹೊಲಗಳು ಕಾಣಿಸಿಕೊಂಡವು. ಆದರೆ ರೈತರ ಅದೃಷ್ಟ ಮುಗ್ಗರಿಸಿತು. ಬೇಡಿಕೆ ಬಾರದೆ ಬೆಲೆ ಕುಸಿತವಾಗಿ, ಮಾರುಕಟ್ಟೆಗೆ ತಂದ ಈರುಳ್ಳಿಯನ್ನು ಬೆಡಿಕೆ ಸಿಗದೆ ಬರಿಗೈಯಿಂದ ಮನೆಗೆ ಬಂದ ರೈತರು ಅದೆಷ್ಟು ಕಸಿವಿಸಿಗೊಂಡಿರಬಹುದು. ಅನೇಕ ರೈತರು ಈರುಳ್ಳಿಯನ್ನು ಭೂಮಿಯಿಂದ ಕಿತ್ತಲ್ಲೇ ಅದೇ. ಮುಚ್ಚಿಹಾಕಿ ಗೊಬ್ಬರ ಮಾಡಿದರು. ಆದರೆ ಈ ಬೆಳೆಗೆ ಮಾಡಿದ ವೆಚ್ಚವನ್ನು ಭರಿಸುವದು ಹೇಗೆ? ಮತ್ತೆ ಸಾಲಕ್ಕೆ ಸಾವುಕಾರರ ಮನೆಯ ಹೊಸಲು ತುಳಿಯುವುದೊಂದೇ ಬಾಕಿ. ಭಾರತೀಯ ರೈತ ಮಳೆಯೊಡನೆ ಜೂಜಾಟವಾಡುತ್ತಾನೆ ಎಂದು ಹೆಳಲಾಗುತ್ತಿದೆ. ಭಾರತದ ರೈತ ಮಾರುಕಟ್ಟೆಯೊಡನೆಯೂ ಜೂಜಾಟವಾಡುತ್ತಾನೆ. ಎಂಬ ಇನ್ನೊಂದು ಮಾತನ್ನು ಅರ್ಥಶಾಸ್ತ್ರಕ್ಕೆ ಸೇರಿಸಬೇಕು. ಒಂದು ನೈಸರ್ಗಿಕ ಇನ್ನೊಂದು ಮಾನವ ನಿರ್ಮಿತ ಅಷ್ಟೆ ವ್ಯತ್ಯಾಸ.

ಸಾಲದ ಸುಳಿಯಲ್ಲಿ ರೈತ

ನೀರಾವರಿ ಬೇಸಾಯಕ್ಕೆ ಹೆಚ್ಚು ಬಂಡಾವಾಳದ ಅಗತ್ಯತೆ ಇರುತ್ತದೆ. ಸಂಕರಣ ಬೀಜ. ರಾಸಾಯನಿಕ ಗೊಬ್ಬರ, ಕೀಟ ನಾಶಕಗಳು, ಉಳುಮೆ ಯಂತ್ರಗಳು, ಇತ್ಯಾದಿ ಸಾಮಗ್ರಿ ಗಳಿಗೆ ಹಣ ಬೇಕಾಗುತ್ತದೆ. ಸಾಲದಲ್ಲಿ ಹುಟ್ಟಿ ಸಾಲದಲ್ಲೇ ಬೆಳೆದ ರೈತರು ನೀರಾವರಿ ಬೇಸಾಯಕ್ಕೆ ಅಗತ್ಯವಾದ ಬಂಡವಾಳ ತರುವುದಾದರೂ ಎಲ್ಲಿಂದ? ವ್ಯವಸಾಯ ಸಹಕಾರಿ ಸಂಘಗಳು (ಈಗ ಅವುಗಳನ್ನು ಬ್ಯಾಂಕ್ ಎಂದು ಕರೆಯಲಾಗುತ್ತಿದೆ) ರೈತರಿಗೆ ಹೆಚ್ಚಿನ ಸಾಲ ನೀಡಲು ಸಿದ್ಧವಾದವು 'ಅ' ಕಾಂಪೋನೆಂಟ್ 'ಬ' ಕಾಂಪೋನೆಂಟ್ ಎಂದು ಎರಡು ಬಗೆಯ ಸಾಲದ ಬಾಂಡುಗಳು ಜಾರಿಗೆ ಬಂದವು 'ಅ' ಕಾಂಪೋನೆಂಟ್ ಅಡಿಯಲ್ಲಿ ಸಾಲವನ್ನು ನಗದಾಗಿ 'ಬ' ಕಾಂಪೋನೆಂಟ್ ಅಡಿಯಲ್ಲಿ ಬೀಜ ಗೊಬ್ಬರ ಹಾಗೂ ಕೀಟ ನಾಶಕಗಳ ರೂಪದಲ್ಲಿ ಸಾಲ ನೀಡುವ ಕ್ರಮಗಳು ಜಾರಿಗೊಂಡವು. ಅಂದರೆ ಒಣ ಬೇಸಾಯದಲ್ಲಿ ಒಂದು ಸಾವಿರ ರೂಪಾಯಿ ಸಾಲ ಪಡೆಯುತ್ತಿದ್ದ ರೈತ ಈಗ 10 ಸಾವಿರ ರೂ ಸಾಲ ಪಡೆಯುವಂತಾದನು. ಸಹಕಾರಿ ಸಂಘಗಳಲ್ಲಿ ಸಾಲ ಪಡೆಯುವವರು ಬ್ಯಾಂಕುಗಳಿಂದ ಬೆಳೆಸಾಲ

ಪುಟ 10ಕ್ಕೆ

ಬಹುರಾಷ್ಟ್ರೀಯ ಕಂಪನಿ ಆಡಳಿತ ವರ್ಗದ ಕುತಂತ್ರಕ್ಕೆ ಸೋಲು

ಪ್ರಜಾಪ್ರಭುತ್ವ ಹಕ್ಕುಗಳ ಗೆಲವು

ಮೈಕೊ ಎಂಪ್ಲಾಯೀಸ್ ಅಸೋಷಿಯೇಷನ್‌ಗೆ ಮೇ 18 ರಂದು ನಡೆದ ಚುನಾವಣೆಯಲ್ಲಿ ಮೈಕೋ ಕಾರ್ಮಿಕರು ಕಾಂ। ಎಸ್. ಸೂರ್ಯನಾರಾಯಣರಾವ್‌ರವರ ನಾಯಕತ್ವದ ಆನೆ ತಂಡವನ್ನು 500 ಕ್ಕೂ ಹೆಚ್ಚು ಬಹುಮತದಿಂದ ಜಯಶೀಲರನ್ನಾಗಿಸಿದ್ದಾರೆ. ಎಲ್ಲಾ ಪದಾಧಿಕಾರಿಗಳನ್ನು, 25 ಕಾರ್ಯಕಾರಿ ಸಮಿತಿಯಲ್ಲಿ 19 ಸದಸ್ಯರನ್ನು, 103 ಜನರಲ್ ಕೌನ್ಸಿಲ್ ಸ್ಥಾನದಲ್ಲಿ 81 ಸದಸ್ಯರು ಎಸ್. ಸೂರ್ಯನಾರಾಯಣರಾವ್ ಆನೆ ತಂಡದಿಂದ ಜಯಶೀಲರಾಗಿದ್ದಾರೆ.

ಆಡಳಿತ ವರ್ಗದ ಎಲ್ಲಾ ಆಸೆ ಆಮಿಷಗಳನ್ನು ತಿರಸ್ಕರಿಸಿ, ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ, ಕೆಲಸದ ಭದ್ರತೆಗಾಗಿ, ಸಂಘದ ಘನತೆ ಗೌರವವನ್ನು ಎತ್ತಿಹಿಡಿಯಲು ಸೂರಿಯವರ ಆನೆ ತಂಡಕ್ಕೆ ಮತ ನೀಡಿ ಚುನಾಯಿಸಿದ್ದಾರೆ.


ಆಶ್ಚರ್ಯದ ಸಂಗತಿಯೇನೆಂದರೆ ಎರಡು ವರ್ಷಗಳ ಹಿಂದೆ, ಜಿಂಕೆ ತಂಡದವರ ಸುಳ್ಳು ಆಶ್ವಾಸನೆಯನ್ನು ನಂಬಿ ಅವರನ್ನು ಚುನಾಯಿಸಿದ ಕಾರ್ಮಿಕರು ಈಗ ಮತ್ತೆ ಸೂರಿಯವರ ಆನೆ ತಂಡವನ್ನು ಚುನಾಯಿಸಿ, ಆಡಳಿತ ವರ್ಗದ ತಂತ್ರವನ್ನು ಕಾರ್ಮಿಕರು ಅರಿತವರಾಗಿದ್ದಾರೆ. ಜಾಗತೀಕರಣ ಹಾಗೂ ಉದಾರೀಕರಣದ ಹಿನ್ನೆಲೆಯಲ್ಲಿ ಸಿಐಟಿಯುವಿನ ನಿಲುವು ಇಂದಿನ ಸನ್ನಿವೇಶದಲ್ಲಿ ಹೆಚ್ಚು ಪ್ರಸ್ತುತವೆನಿಸಿದೆ. ಮತ್ತು ಅವರಿಂದ ಮಾತ್ರವೇ ಕಾರ್ಮಿಕರ ಹಿತರಕ್ಷಣೆ ಮಾಡುವ ಸಮರ್ಥ ನಾಯಕತ್ವ ಕೊಡಲು ಸಾಧ್ಯವೆಂಬ ನಂಬಿಕೆ ಎಲ್ಲಾ ಕಾರ್ಮಿಕರಲ್ಲೂ ಮೂಡುತ್ತಿದೆ.

1979-ಕಾರ್ಮಿಕರಲ್ಲಿ ವಿಶ್ವಾಸಮೂಡಿಸಿದ ವರ್ಷ

ಎರಡು ವರ್ಷಗಳಲ್ಲಿ ಆದ ಬದಲಾವಣೆಯ ಕಾರಣವನ್ನು ತಿಳಿಯುವ ಪ್ರಯತ್ನ ಮಾಡಿದರೆ ಮಾತ್ರ ನಮಗೆ ಮುಂದಿನ ದಾರಿ ಸ್ಪಷ್ಟವಾಗುತ್ತದೆ. ಮೈಕೋ ಕಾರ್ಮಿಕರ ಇತಿಹಾಸದಲ್ಲಿ 1979ನೇ ವರ್ಷ ಚಿರಕಾಲ ನೆನಪಿನಲ್ಲಿ ಉಳಿಯುವಂತಹದು. 1979ರ ಹಿಂದಿನ 25 ವರ್ಷಗಳಲ್ಲಿ ಕಾರ್ಮಿಕರನ್ನು ನಿರಂತರವಾಗಿ ಭಯದ ವಾತಾವರಣದಲ್ಲಿರಿಸಿ, ದಬ್ಬಾಳಿಕೆಯಿಂದ ಕಾರ್ಮಿಕ ಸಂಘವನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು, ತಮಗೆ ಹೇಗೆ ಬೇಕೋ ಹಾಗೆ ಉಪಯೋಗಿಸಿ ಲಾಭ ಮಾಡಿಕೊಳ್ಳುತ್ತಿದ್ದ ಬಹುರಾಷ್ಟ್ರೀಯ ಮೈಕೊ ಕಾರ್ಖಾನೆಯ ಆಡಳಿತ ವರ್ಗ ಮೊದಲನೇ ಬಾರಿಗೆ ಕಾರ್ಮಿಕರ ವಿರೋಧವನ್ನು ಕಾಂ। ಸೂರಿಯವರ ನಾಯಕತ್ವದಲ್ಲಿ ಎದುರಿಸಬೇಕಾಯಿತು. ಆಗ ಎಲ್ಲಾ ಕಾರ್ಮಿಕರಲ್ಲೂ ಮೂಡಿದ್ದ ಒಂದು ಹತಾಶ ಭಾವನೆಯೇನೆಂದರೆ, ಯಾರದೇ ನಾಯಕತ್ವದಲ್ಲಿ ಸಂಘ ಇದ್ದರೂ ಸಹ ಆಡಳಿತ ವರ್ಗದ ಧೋರಣೆಯನ್ನು ಬದಲಾಯಿಸಲು, ಕಾರ್ಮಿಕರ ಹಿತರಕ್ಷಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲವೆಂಬ ವಿಷಯ ಕಾರ್ಮಿಕರಲ್ಲಿ ಜನಜನಿತವಾಗಿತ್ತು.

ಮೈಕೊ ಕಾರ್ಮಿಕ ಸಂಘದಲ್ಲಿ ಕಾಂ. ಸೂರ್ಯನಾರಾಯಣ ರಾವ್ ತಂಡದ ಗೆಲುವು. ಎರಡೇ ವರ್ಷದಲ್ಲಿ ಕಹಿ ಉಂಡ ಕಾರ್ಮಿಕರು ಪಡೆದ ಎಚ್ಚರ

ಆದರೆ 1979ರಲ್ಲಿ ಮೊದಲನೆ ಬಾರಿಗೆ ಸಂಘಕ್ಕೆ ಪಾದಾರ್ಪಣೆ ಮಾಡಿದ ಕಾಂ। ಎಸ್. ಸೂರ್ಯನಾರಾಯಣರಾವ್‌ರವರ ನಾಯಕತ್ವ ಆ ಭಾವನೆಯನ್ನೂ ಹೋಗಲಾಡಿಸಿ, ಕಾರ್ಮಿಕರಲ್ಲಿ ಆತ್ಮ ವಿಶ್ವಾಸವನ್ನು ಉಂಟು ಮಾಡಿದರು. ಮೂರು ತಿಂಗಳ ದೀರ್ಘ ಯಶಸ್ವಿ ಹೋರಾಟದಲ್ಲಿ ಆಡಳಿತ ವರ್ಗ, ಅದಕ್ಕೆ, ಶಾಮೀಲಾಗಿದ್ದ ಕಾಂಗ್ರೆಸ ಗುಂಡೂರಾವ್ ಸರ್ಕಾರ ಗುಂಡೂರಾವ್‌ರ ನೆರಳಿನಂತಿದ್ದ ಎಫ್.ಎಂ. ಖಾನ್ ಹಾಗೂ ಪೊಲೀಸರು ಮತ್ತು ಬಾಡಿಗೆ ಗೂಂಡಾಗಳ ದಬ್ಬಾಳಿಕೆ, ದೌರ್ಜನ್ಯವನ್ನು ಹಿಮ್ಮೆಟ್ಟಿಸಿ, ಎಲ್ಲಾ ಕಾರ್ಮಿಕರನ್ನು ಒಂದುಗೂಡಿಸಿ, ನಡೆಸಿದ ಹೋರಾಟ ಬೆಂಗಳೂರಿನ ಕಾರ್ಮಿಕ ಇತಿಹಾಸದಲ್ಲಿಯೇ ನೆನಪಿನಲ್ಲಿ ಉಳಿಯುವಂತಹದು. ಬೆಂಗಳೂರಿನ ಎಲ್ಲಾ ಕಾರ್ಮಿಕ ಸಂಘಗಳ ಸಹಾಯ, ಜನಸಾಮಾನ್ಯರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರ ಸಹಾಯದಿಂದ ಯಶಸ್ವಿ ಬೆಂಗಳೂರು ಬಂದ್ ಮಾಡಿ ಆಡಳಿತ ವರ್ಗವನ್ನು ಸಂದಾನದ ಮೇಜಿಗೆ ಕರೆತರಲು ಸಾದ್ಯವಾಯಿತು. ನಂತರದಲ್ಲಿ ಆಡಳಿತ ವರ್ಗ ಸರ್ಕಾರದ ಮೇಲೆ ಒತ್ತಾಯ ತಂದು ಎಸ್. ಸೂರ್ಯನಾರಾಯಣರಾವ್‌ರವರನ್ನು ಬೆಂಗಳೂರಿನಿಂದ ಗಡಿಪಾರು ಮಾಡಿಸಲು ಮಾಡಿದ ಪ್ರಯತ್ನವು ಅಲ್ಲದೆ ಕೊಲೆ ಮೊಕದ್ದಮೆ ಪ್ರಯತ್ನವೂ ವಿಫಲವಾಗಿ ಕೊನೆಯಲ್ಲಿ ಕರ್ನಾಟಕ ಹೈಕೋರ್ಟಿನ ಮಧ್ಯಪ್ರವೇಶದಿಂದ, ಕೋರ್ಟಿನ ಮೇಲ್ವಿಚಾರಣೆಯಲ್ಲಿ ಮೈಕೊ ಕಾರ್ಮಿಕ ಸಂಘಕ್ಕೆ ಚುನಾವಣೆ ನಡೆದು ಕಾರ್ಮಿಕರ ಪ್ರಜಾಪ್ರಭುತ್ವ ಸ್ಥಾಪನೆಯಾಯಿತು. ಕಾಂ। ಸೂರಿಯವರು ನಾಯಕತ್ವದಲ್ಲಿ ಆನೆ ತಂಡ ಪ್ರಚಂಡ ಬಹುಮತದಿಂದ ಆರಿಸಿ ಬಂದರು. ಕರ್ನಾಟಕ ಹೈಕೋರ್ಟಿನ ಮೇಲ್ವಿಚಾರಣೆಯಲ್ಲಿ ನಡೆದ ಈ ಚುನಾವಣೆಯು ಕಾರ್ಮಿರ ರಂಗದಲ್ಲಿ ಒಂದು ಇತಿಹಾಸವಾಗಿದೆ. ಅಂದಿನಿಂದ 1998ರವರೆಗೂ ಹದಿನೆಂಟು ವರ್ಷ ಕಾರ್ಮಿಕರ ಕೆಲಸದ ಭದ್ರತೆ, ಕಾರ್ಮಿಕರ ಹಿತರಕ್ಷಣೆ ಮತ್ತು ಸೌಲಭ್ಯಗಳಿಗಾಗಿ ನಿರಂತರವಾಗಿ ಮಾಡಿದ ಕೆಲಸಗಳು ಕಾಂ। ಸೂರಿಯವರ ನಾಯಕತ್ವದ ಸಾಧನೆಯ ಮೈಲುಗಲ್ಲಾಗಿವೆ.



ಯಾವುದೇ ಕಾರ್ಮಿಕ ಸಂಘಟನೆಗಳಲ್ಲಿ ನಿರಂತರವಾಗಿ 18 ದೀರ್ಘ ವರ್ಷಗಳು ಕಾರ್ಮಿಕರ ನಾಯಕತ್ವ ವಹಿಸುವುದು, ಕಾರ್ಮಿಕರ ಪ್ರೀತಿಗೆ ಪಾತ್ರರಾಗುವುದು ಒಂದು ಸಾಧನೆಯೆಂದೇ ಹೇಳಬೇಕು. ಆದರೆ 1998ರ ಚುನಾವಣೆಯ ಪರಾಭವಕ್ಕೆ ಕಾರಣಗಳಾದರೂ ಏನು? ಎಂದು ವಿಚಾರ ಮಾಡಿದಾಗ ಕಾಣಬರುವ ಅಂಶವೇನೆಂದರೆ 1994-95ರಿಂದ ಹೊಸ ಕಾರ್ಮಿಕರು ಕೆಲಸಕ್ಕೆ ಸೇರ್ಪಡೆ ಆದಾಗ, ಹೇಗಾದರೂ ಮಾಡಿ ಈ ಸಂಘವನ್ನು ಒಡೆಯಬೇಕೆಂದು ಸಮಯ ಕಾಯುತ್ತಿದ್ದ ಆಡಳಿತ ವರ್ಗದವರು ಸೂರಿಯವರ ನಾಯಕತ್ವವನ್ನು ಸೋಲಿಸಲು ತಂತ್ರಗಳನ್ನು ರೂಪಿಸತೊಡಗಿದರು. ಈ ಹಿಂದೆ ನಡೆದ ಹೋರಾಟದ ಅರಿವಿರದಿದ್ದ ಹಾಗೂ ಬಹುರಾಷ್ಟ್ರೀಯ ಕಂಪೆನಿಯ ಪ್ರಬಲಹಿಡಿತ, ಶೋಷಣೆಯ ವಿಧಾನಗಳು ಕುತಂತ್ರಗಳ ಬಗ್ಗೆ ಏನೊಂದು ತಿಳುವಳಿಕೆಯಿಲ್ಲದ, ಹೊಸದಾಗಿ ಸೇರಿದ್ದ ಕಾರ್ಮಿಕರು ಆಡಳಿತ ವರ್ಗದ ಸುಳ್ಳು ಅಪಪ್ರಚಾರಗಳಿಗೆ ಬಲಿಬಿದ್ದು ಮೋಸ ಹೋಗಿದ್ದು, ಈಗ ಅರ್ಥವಾಗಿದೆ.

ಬಡಾಯಿ ಸಂಘಟನೆ

1997-2001 ರವರೆಗಿನ ಬೇಡಿಕೆ ಒಪ್ಪಂದದ ಮಾತುಕತೆಯಲ್ಲಿ ಬಹಳ ಶ್ರಮವಹಿಸಿ ಯಾವುದೇ ಉತ್ಪಾದಕತೆಗೆ ಲಗತ್ತಿಸದೆ, ಆಡಳಿತ ವರ್ಗದ ಸುಮಾರು ಕೌಂಟರ್ ಡಿಮ್ಯಾಂಡ್‌ಗಳನ್ನು ತಿರಸ್ಕರಿಸಿ, ಆಡಳಿತ ವರ್ಗ ಕಾರ್ಮಿಕರ ಒಂದು ಭಾಗವನ್ನು ಎತ್ತಿಕಟ್ಟಿದ್ದರೂ ಸಹ ರೂ. 2300/-ಕ್ಕೆ ತಮ್ಮ ನಾಯಕತ್ವದ ಕೌಶಲ್ಯದಿಂದ, ಆಡಳಿತ ವರ್ಗವನ್ನು ಒಪ್ಪಿಸಲು ಕಾಂ। ಸೂರಿಯವರು ಸಮರ್ಥರಾದರು. ಇಂದಿನ ಕೈಗಾರಿಕಾ ಸನ್ನಿವೇಶದಲ್ಲಿ ಎಲ್ಲಾಕಡೆಗಳಲ್ಲೂ ಉತ್ಪಾದಕತೆಗೆ ಲಗತ್ತಿಸದೆ ಯಾವುದೇ ಬೇಡಿಕೆ ಪಡೆಯಲು ಕಷ್ಟವಾಗಿರುವಾಗ ಕಾಂ। ಸೂರಿಯವರ ಈ ಸಾಧನೆಯಿಂದ ಆಡಳಿತ ವರ್ಗದ ಕಣ್ಣು ಕೆಂಪಾದುದು ಸಹಜವೇ ಸರಿ.

ಆಗ ಆಡಳಿತ ವರ್ಗದ ಬೆಂಬಲಿತ ಜಿಂಕೆ ತಂಡದ ನಾಯಕರು ದ್ವಾರ ಸಭೆಗಳಲ್ಲಿ (ಗೇಟ್ ಮೀಟಿಂಗ್) ಕಾಂ। ಸೂರಿಯವರ ನೇತೃತ್ವದಲ್ಲಿ ಪಡೆದುಕೊಂಡಿರುವ ಬೇಡಿಕೆ ಒಪ್ಪಂದವನ್ನು ತಿರಸ್ಕರಿಸಿದ್ದೇ ಆದರೆ, ಯಾವುದೇ ಹೋರಾಟವಿಲ್ಲದೆ 15 ದಿನಗಳೊಳಗೆ ರೂ. 3000/- ಹಣವನ್ನು ಕೊಡಿಸುವುದಾಗಿ ತಿಳಿಸಿದರು. ರೂ. 3000/- ಹಣದ ಆಸೆಯಿಂದ, ಅದು ಕಾರ್ಯ ಸಾಧುವೇ ಎಂದು ವಿಚಾರ ಮಾಡದೆ, ಕಾಂ। ಸೂರಿಯವರು ಮಾಡಿದ್ದ ಬೇಡಿಕೆ ಒಪ್ಪಂದದ ಮಾತುಕತೆಯನ್ನು ತಿರಸ್ಕರಿಸಿ ಜಿಂಕೆ ತಂಡದವರನ್ನು ಸಂಘಕ್ಕೆ ಚುನಾಯಿಸಿದರು. ಆದರೆ ಜಿಂಕೆ ತಂಡದವರು ಅಧಿಕಾರಕ್ಕೆ ಬಂದಾಗ ಮಾಡಿದುದಾದರೂ ಏನು? ಬೇಡಿಕೆ ಒಪ್ಪಂದದಲ್ಲಿ ರೂ. 3000/- ಕೊಡಿಸುತ್ತೇವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದವರು ಕಾಂ। ಸೂರಿಯವರ ಮಾತುಕತೆ ನಡೆಸಿದ್ದ ಒಪ್ಪಂದಕ್ಕೇ ಸಹಿ ಮಾಡಿದುದಲ್ಲದೇ, ಒಂದು ಉತ್ತಮ ಪೆನ್ಷನ್ ಯೋಜನೆಯನ್ನು ಹಾಳುಮಾಡಿದರು. ಈ ಹಿಂದೆ ಕಾಂ। ಸೂರಿಯವರು ಕಾರ್ಮಿಕರಿಗೆ ಅಷ್ಟೇನೂ ಭಾದಿಸದ ಎರಡು ಕೌಂಟರ್ ಡಿಮ್ಯಾಂಡ್‌ಗಳಿಗೆ ಒಪ್ಪಿದುದು, ಇವರು ಒಪ್ಪಂದಕ್ಕೆ ಸಹಿ ಮಾಡಿದಾಗ ಅದು ಐದು ಕೌಂಟರ್ ಡಿಮ್ಯಾಂಡ್‌ಗಳಿಗೆ ಏರಿತು. ಪಾರದರ್ಶಕತೆ, ಪ್ರಜಾಪ್ರಭುತ್ವವೆಂದು ಬಡಾಯಿಕೊಚ್ಚಿಕೊಳ್ಳುತ್ತಿದ್ದ ಇವರು ಸರ್ವ ಸದಸ್ಯರ ಸಭೆ ಕರೆಯದೇ ಒಪ್ಪಂದಕ್ಕೆ ಸಹಿ ಮಾಡಿದರು. ನಂತರ ಜಿಂಕೆ ತಂಡದ ಮರಳು ಮಾಡುವ ಮಾತುಗಳನ್ನು ನಂಬಿ, ಅವರು ಹೇಳಿದ್ದೆ ಸತ್ಯವೆಂದು ನಂಬಿದ್ದ ಯುವ ಕಾರ್ಮಿಕರ ಮುಂದಾಳುವಾದ ಶ್ರೀ ವಾಸಿಂ ತಾಜ್‌ರವರನ್ನು ಸಸ್ಪೆಂಡ್ ಮಾಡಿಸಲಿಕ್ಕೆ ಕಾರಣರಾಗಿ, ಕಾರ್ಖಾನೆಯಲ್ಲಿ ಭಯದ ವಾತಾವರಣ ನಿರ್ಮಿಸಿದರು. ಸಸ್ಪೆಂಡ್ ಮಾಡಲಾದ ಕಾರ್ಮಿಕನ ರಕ್ಷಣೆಗೆ ಧಾವಿಸುವುದಿರಲಿ ತಾವೇ ನಿಂತು ಅವನ ವಿರುದ್ಧ ಸಾಕ್ಷಿ ಹೇಳಿದರೂ

ಹೊಸದಾಗಿ ಚುನಾಯಿತರಾದ ಆನೆ ತಂಡದ ಅಭ್ಯರ್ಥಿಗಳ ಹೆಸರುಗಳು ಕೆಳಕಂಡಂತಿವೆ.

ಕಾಂ. ಎಸ್.ಸೂರ್ಯನಾರಾಯಣ ರಾವ್ - ಅಧ್ಯಕ್ಷರು (ಪಾಪಣ್ಣನವರು ಅಧ್ಯಕ್ಷ ಸ್ಥಾನಕ್ಕೆ ಡಮ್ಮಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ವಿಜೇತರಾಗಿದ್ದರು. ನಂತರ ಅದನ್ನು ಕಾಂ.ಎಸ್.ಸೂರ್ಯನಾರಾಯಣರಾವ್‌ರವರಿಗೆ ಬಿಟ್ಟುಕೊಟ್ಟರು)

ಕಾಂ. ಹನುಮಂತರಾಯಪ್ಪ	- ಮೊದಲನೇ ಉಪಾಧ್ಯಕ್ಷರು
ಕಾಂ. ಗಂಗಾಧರಯ್ಯ	- ಎರಡನೇ ಉಪಾಧ್ಯಕ್ಷರು
ಕಾಂ. ಟಿ.ಶಿವಶಂಕರ್	- ಪ್ರಧಾನ ಕಾರ್ಯದರ್ಶಿ
ಕಾಂ. ಬ್ಯಾಂಕ್ ನಾರಾಯಣಸ್ವಾಮಿ	- ಸಹಾಯಕ ಕಾರ್ಯದರ್ಶಿ
ಕಾಂ. ಎಸ್.ತಿರುನಾವುಕ್ಕರಸು(ಅರಸು)	- ಸಂಘಟನಾ ಕಾರ್ಯದರ್ಶಿ
ಕಾಂ. ಡಿ.ಎ.ವಿಜಯಭಾಸ್ಕರ್	- ಖಜಾಂಚಿ

ಬಡಾಯಿದಾರರ ಬಾಯಿಗೆ ಬೀಗ ಹಾಕಿದ ಚುನಾವಣೆ

ಎರಡೇ ವರ್ಷಗಳಲ್ಲಿ ಜಿಂಕೆ ತಂಡಕ್ಕೆ ಬೆಂಬಲ ನೀಡಿದ ಯುವಕರಲ್ಲಿ ಭ್ರಮನಿರಸನಕ್ಕೆ ಕಾರಣ ಜಿಂಕೆ ತಂಡದ ಪದಾಧಿಕಾರಿಗಳ ಕಾರ್ಯವೈಖರಿ. ಪಾರದರ್ಶಿಕತೆ ಎಂದು ಹೇಳುತ್ತಿದ್ದ ಪದಾಧಿಕಾರಿಗಳು ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಫಲರಾದರು. ಆಡಳಿತ ವರ್ಗ ಇದನ್ನು ದುರುಪಯೋಗ ಮಾಡಿ ಕೆಲಸದ ಹೊರೆ ಮತ್ತು ಭಯದ ವಾತಾವರಣ ಮೂಡಿಸಿತು. ವಾಸಿಂ ತಾಜ್‌ರವರು ಕೆಲಸದ ವೇಳೆ ಏನೋ ಸಣ್ಣ ತಪ್ಪು ಮಾಡಿದರು ಎಂದು ಅವರ ಮೇಲೆ ವಿಚಾರಣೆ ದಾಖಲು ಮಾಡಿದಾಗ ಪದಾಧಿಕಾರಿಗಳು ಅವನ ರಕ್ಷಣೆಗೆ ಧಾವಿಸುವ ಬದಲು ಕ್ಷಮಾಪಣೆ ಪತ್ರ ಕೊಟ್ಟು ಕೆಲಸಕ್ಕೆ ಬಾ, ಇಲ್ಲದಿದ್ದರೆ ಏನು ಮಾಡಿದರೂ ಕೆಲಸ ದೊರಕುವುದಿಲ್ಲ ಎಂದು ಬೆದರಿಕೆ ಹಾಕಿದರು. ಜಿಂಕೆ ತಂಡದ ಬೆಂಬಲಿಗನಾದ ವಾಸಿಂ ಈ ಮಾತನ್ನು ಕೇಳಿ ಭ್ರಮನಿರಸನವಾಗಿ 'ಆನೆ'ತಂಡದ ಕಡೆ ನೋಡಿದರು. ಆನೆ ತಂಡದವರು ವಿಚಾರಣೆ ನಡೆಸಿದರು. ವಿಚಾರಣೆಯಲ್ಲಿ ಹುರುಳಿಲ್ಲವೆಂದು ಹೇಳಿದರು. ಸಂಘದ ಪದಾಧಿಕಾರಿಗಳು ಅವರ ಬೆಂಬಲಕ್ಕೆ ನಿಲ್ಲದ ಕಾರಣ ಅವರನ್ನು ಆಡಳಿತ ವರ್ಗ ಕೆಲಸದಿಂದ ವಜಾ ಮಾಡಿದರು.

ಇದರಿಂದ ಕೆರಳಿದ 2200 ಕಾರ್ಮಿಕರು ಸಹಿ ಮಾಡಿ ವಾಸಿಂ ತಾಜ್‌ರವರನ್ನು ಕೆಲಸಕ್ಕೆ ತೆಗೆದು ಕೊಳ್ಳುವಂತೆ ಆಗ್ರಹಿಸಿದರು. ಆಡಳಿತ ವರ್ಗ ಮಾನ್ಯತೆ ಪಡೆದ ಸಂಘದಿಂದ ಈ ಬಗ್ಗೆ ಆಗ್ರಹ ಬಂದಿಲ್ಲವೆಂದು ಬೆಲೆ ಕೊಡಲಿಲ್ಲ. ಕಾರ್ಮಿಕರು ಈ ಕಾರ್ಮಿಕನ ಬೆಂಬಲಾರ್ಥವಾಗಿ ಹುಂಡಿ ಹಿಡಿದು ಪರಿಹಾರವಾಗಿ 14 ಸಾವಿರ ಸಂಗ್ರಹಿಸಿದರು. ಹೀಗೆ 3 ಬಾರಿ ಮಾಡಿ ಪ್ರತಿತಿಂಗಳು ನಾಲ್ಕು ಸಾವಿರ ಕೊಡುತ್ತಿದ್ದಾರೆ. ಅವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವ ವಿಷಯವು ಸಹ ಚುನಾವಣೆಯಲ್ಲಿ ಮುಖ್ಯ ವಿಷಯವಾಗಿತ್ತು. ಆಡಳಿತದ ವರ್ಗದ ಪರವಾದ ನಿಲುವಿನಿಂದ ಬೇಸತ್ತ ಕಾರ್ಮಿಕರು 12.4.2000 ದಂದು ನಡೆದ ಸೊಸೈಟಿ ಚುನಾವಣೆಯಲ್ಲಿ ಜಿಂಕೆ ತಂಡದ 9 ಜನರನ್ನು ಸೋಲಿಸಿ ಎಲ್ಲಾ ಸ್ಥಾನಗಳಲ್ಲಿ ಆನೆ ತಂಡದವರನ್ನು ಚುನಾಯಿಸಿದರು. ಕಾರ್ಮಿಕರು ಕಮಿಟಿಕೌನ್ಸಿಲ್‌ನಲ್ಲಿ ಸಂಘದ ಚುನಾವಣೆ ನಡೆಸಬೇಕು, ಕಾರ್ಮಿಕರಲ್ಲಿ ನಿಮ್ಮ ಬಗ್ಗೆ ಒಲವಿಲ್ಲ ಎಂದು ಹೇಳಿದರೂ ಸಹ ಚುನಾವಣೆ ಘೋಷಣೆಯಾದ ಮೇಲೆ ಹೇಗಾದರೂ ಮಾಡಿ ಗೆಲ್ಲಬೇಕು ಎಂದು ಹೇಳಿ ಮಾಲೀಕರ ಸಹಕಾರದಿಂದ ಘಟನೆಗೆ ವಿರೋಧವಾದ ಕಾರ್ಮಿಕ ವಿರೋಧಿ ಒಪ್ಪಂದ ಮಾಡಿತು. ಇದು ಸಹ ಕಾರ್ಮಿಕರಲ್ಲಿ ಅತೃಪ್ತಿ ಹೆಚ್ಚಲು ಕಾರಣವಾಯಿತು. ಇದರ ಜೊತೆಗೆ ಆಡಳಿತ ವರ್ಗದವರು ಪದಾಧಿಕಾರಿಗಳನ್ನು ಗೆಲ್ಲಿಸುವ ದೃಷ್ಟಿಯಿಂದ 18.5.2000 ಕ್ಕೆ ಒಂದು ವಾರಕ್ಕೆ ಮುಂಚೆ ಕಾರ್ಖಾನೆ ಆವರಣಲ್ಲಿ ಬಹುಮಾನ ವಿತರಣೆ ಈ ಪದಾಧಿಕಾರಿಗಳ ಸಮ್ಮುಖದಲ್ಲಿ ನಡೆಯಿತು. ಜೊತೆಗೆ ಎಐಟಿಯುಸಿ ಮುಖಂಡರನ್ನು ಕರೆಸಿ ಎರಡು ಬಾರಿ ದ್ವಾರಸಭೆ ನಡೆಸಿ ಕಾಂ. ಸೂರ್ಯನಾರಾಯಣ ರಾವ್‌ರವರ ಮುಖಂಡತ್ವವನ್ನು ತೆಗಳುವ ಹಾಗೆ ಮಾಡಿದರು. ಇಷ್ಟೆಲ್ಲ ಮಾಡಿದರು ಸಹ ಕಾರ್ಮಿಕರು ಎರಡು ವರ್ಷಗಳ ಹಿಂದೆ ಇದ್ದ ವಾತಾವರಣ ಹಾಗೂ ಈಗಿನ ವಾತಾವರಣ ಹೋಲಿಸಿ, ತಿಳುವಳಿಕೆಯ ಅಭಾವದಿಂದ ಮಾಡಿದ ತಪ್ಪನ್ನು ಅರಿತು ಕಾಂ. ಸೂರ್ಯನಾರಾಯಣ ರಾವ್ ತಂಡವನ್ನು ಗೆಲ್ಲಿಸಿ ಸಂತಸದ ವಾತಾವರಣ



ವಿರುದ್ಧ ಸಾಕ್ಷಿ ಹೇಳಿದರೂ ಸೂರಿಯವರು ಬೇಡಿಕೆಯ ಬಗ್ಗೆ ಆಡಳಿತ ವರ್ಗದೊಡನೆ ಮಾತುಕತೆ ನಡೆಸುವಾಗ, ಶೇಕಡ ಹತ್ತರಷ್ಟು ಉತ್ಪಾದನೆಯ ಹೆಚ್ಚಳಕ್ಕೆ ಒಪ್ಪಿದ್ದೆ ಆದರೆ ರೂ. 3000/- ಕೊಡುತ್ತೇವೆಂದು ತಿಳಿಸಿದರು. ಆಗ ಅದನ್ನು ಜಿಂಕೆ ತಂಡದವರು ವಿರೋಧಿಸಿ, [illegible]ದಲ್ಲಿ ತಾವೇ ಅಧಿಕಾರಕ್ಕೆ ಬಂದಾಗ [illegible]ವುದೇ ಹೆಚ್ಚಿನ ಹಣವಿಲ್ಲದೆ ಕಾರ್ಮಿಕರಲ್ಲಿ ಭಯದ ವಾತಾವರಣ ಉಂಟುಮಾಡಿ ಶೇಕಡ 40ರಷ್ಟು ಉತ್ಪಾದಕತೆ ಹೆಚ್ಚಳಕ್ಕೆ ಕಾರಣರಾದವರು ಯಾರು? ಎಂಬುದು ಕಾರ್ಮಿಕರಿಗೆ ತಿಳಿದ ವಿಷಯವಾಗಿದೆ. ಕಾಂ। ಸೂರಿಯವರ ನಾಯಕತ್ವದ ಸಂಘವಿದ್ದಾಗ, ಕಾರ್ಮಿಕರು ನಿರ್ಭಯವಾಗಿ ತಮ್ಮ ಕುಂದುಕೊರತೆಗಳನ್ನು ಚರ್ಚಿಸುತ್ತಿದ್ದು ಕಾರ್ಮಿಕರು ಇವರ ಅಧಿಕಾರ ಅವಧಿಯಲ್ಲಿ ಭಯದ ವಾತಾವರಣ ಉಂಟುಮಾಡಿ, ತಮ್ಮ ತೊಂದರೆಗಳನ್ನು ಪರಿಹರಿಸಿಕೊಳ್ಳಲಾಗದೆ ಮೂಕವೇದನೆ ಅನುಭವಿಸತೊಡಗಿದರು. ಕಾರ್ಖಾನೆಯಲ್ಲಿ ಕಾರ್ಮಿಕರು ಪರ್ಸನಲ್ ಮ್ಯಾನೇಜರ್‌ರವರೇ ಕಾರ್ಮಿಕ ಸಂಘದ ಅಧ್ಯಕ್ಷರೆಂದು ಹೇಳಿಕೊಳ್ಳು ವಂತಾಗಿದ್ದುದು ಒಂದು ವಿಪರ್ಯಾಸವೇ ಸರಿ.

ಆಡಳಿತ ವರ್ಗದ ಚಮಚಾಗಳಾದ 'ಜಿಂಕೆ'


ಕಾಂ.ಸೂರಿಯವರ ನಾಯಕತ್ವದ ಕಾರ್ಮಿಕ ಸಂಘವನ್ನು ಗೌರವ, ಭಯ ಮಿಶ್ರಿತ ಭಾವದಿಂದ ಕಾಣುತ್ತಿದ್ದ ಆಡಳಿತ ವರ್ಗ, ಜಿಂಕೆ ತಂಡದವರು ಅಧಿಕಾರಕ್ಕೆ ಬಂದಾಗ ಆಡಳಿತ ವರ್ಗದವರು ಅದನ್ನು ತಮ್ಮ ಜಾಗೀರುದಾರಿಕೆಯಂತೆ ನಡೆಸಿಕೊಳ್ಳುತ್ತಿದ್ದುದು ಎಲ್ಲ ಕಾರ್ಮಿಕರಿಗೆ ತಿಳಿದ ವಿಷಯುವಾಗಿದೆ.

ಜಿಂಕೆ ತಂಡದವರು ಚುನಾಯಿತರಾಗಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ನಡೆದ ಕ್ಯಾಂಟಿನ್ ಚುನಾವಣೆಯಲ್ಲಿ ಹೀನಾಯವಾಗಿ ಸೋತ ನಂತರ, ಕಾರ್ಮಿಕರಿಗೆ ಕೃತಜ್ಞತೆ ತಿಳಿಸಲು ಆನೆ ತಂಡದವರು ಏರ್ಪಡಿಸಿದ ದ್ವಾರ ಸಭೆಯನ್ನು ನಡೆಯಲು ಬಿಡದೆ ಗೂಂಡಾಗಿರಿ ನಡೆಸಿದ ಇವರಿಗೆ ಪ್ರಜಾಪ್ರಭುತ್ವ, ಪಾರದರ್ಶಕತೆ ಬಗ್ಗೆ ಮಾತನಾಡುವುದು ಒಂದು ಗೀಳಾಗಿದೆ. [illegible] ಕಾರ್ಮಿಕರ ಮಕ್ಕಳಿಗೆ ಕೆಲಸ ಕೊಡಿಸುತ್ತೇವೆಂದು ಅದಕ್ಕಾಗಿ ಯಾವುದೇ ರೀತಿಯ ಹೋರಾಟ ಮಾಡಲು ತಯಾರಿರುವುದಾಗಿ ಬಡಾಯಿ ಕೊಚ್ಚಿಕೊಂಡ ಇವರು ನಂತರ ಅಧಿಕಾರಕ್ಕೆ ಬಂದಾಗ, ನಿವೃತ್ತಿಯ ಅಂಚಿನಲ್ಲಿರುವ ಹಿರಿಯ ಕಾರ್ಮಿಕರ ಮಕ್ಕಳಿಗೆ ಕೆಲಸದ ಬದಲು ಇನ್ನೂ ಬಹಳಷ್ಟು ವರ್ಷಗಳ ಸರ್ವಿಸ್ ಇರುವ ಕಾರ್ಮಿಕರ ಮಕ್ಕಳಿಗೆ, ಅಪಾರ ಹಣ ತೆಗೆದುಕೊಂಡು ಕೊಡಿಸಿದ್ದಾರೆಂದು ಕಾರ್ಖಾನೆಯಲ್ಲಿ ಕಾರ್ಮಿಕರು ಮಾತನಾಡಿ ಕೊಳ್ಳುತ್ತಿದ್ದಾರೆ. ಭಡ್ತಿಗಳಲ್ಲಿ, ಟ್ರಾನ್ಸ್‌ಫರ್ ಮತ್ತು ರಿಹ್ಯಾಬಿಲಿಟೇಷನ್‌ಗಳಲ್ಲೂ ಸಹ ಹಣದ ವ್ಯವಹಾರ ನಡೆದಿದೆಯೆಂಬ ಗುಮಾನಿ ಕಾರ್ಮಿಕರ ಮಧ್ಯದಲ್ಲಿ ಬಲವಾಗಿ ಹರಡಿದೆ.

ಈ ರೀತಿಯ ಅವ್ಯವಹಾರಗಳು ಆಡಳಿತ ವರ್ಗದ ಕೃಪಾಪೋಷಿತ ಕಾರ್ಮಿಕ ಸಂಘಗಳಲ್ಲಿ ದೇಶದೆಲ್ಲೆಡೆ ನಡೆಯುತ್ತಿರುವುದನ್ನು ನಾವು ಇಂದು ಕಾಣಬಹುದು. ಜಾಗತೀಕರಣ ಮತ್ತು ಉದಾರೀರಣದಿಂದ ಪೈಪೋಟಿ ತೀವ್ರವಾಗಿ ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದು ಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಇದನ್ನೆಲ್ಲಾ ಎದುರಿಸಬೇಕಾದರೆ ಕಾರ್ಮಿಕರಲ್ಲಿ ವರ್ಗ ಪ್ರಜ್ಞೆಯನ್ನು ಬೆಳೆಸುವುದು ಬಹಳ ಮುಖ್ಯವಾದ ಕೆಲಸವಾಗಿದೆ. ಇದು ನಿರಂತರವಾಗಿ ನಡೆಯಬೇಕಾದ ಕೆಲಸವಾಗಿದೆ. ಆಗ ಮಾತ್ರ ಸಂಘಟನೆಯನ್ನು ಉಳಿಸಿಕೊಂಡು ಕಾರ್ಮಿಕರ ಕೆಲಸದ ಭದ್ರತೆ ಹಾಗೂ ಕಾರ್ಮಿಕರ ಹಿತರಕ್ಷಣೆ ಮಾಡಲು ಸಾಧ್ಯವಾಗುತ್ತದೆ.

ಹೊಸದಾಗಿ ಚುನಾಯಿತರಾದ ಮೈಕೊ ಎಂಪ್ಲಾಯೀಸ್ ಅಸೋಸಿಯೇಷನ್‌ನ ಕಾರ್ಯಕಾರಿ ಸಮಿತಿ ಮತ್ತು ಜನರಲ್ ಕೌನ್ಸಿಲ್ ಸಭೆ ಸೇರಿ ಸರ್ವಾನುಮತದಿಂದ ಕಾಂ. ಎಸ್.ಸೂರ್ಯನಾರಾಯಣರಾವ್‌ರವರಿಗೆ ಸಂಘದ ಗೌರವ ಸದಸ್ಯತ್ವ ನೀಡಿ, ಸಂಘದ ಅಧ್ಯಕ್ಷರನ್ನಾಗಿ ಚುನಾಯಿಸಿದೆ. ಜೂನ್ 7 ರಂದು ಸಂಘದ ಸರ್ವಸದಸ್ಯರ ಸಭೆ ಕಾಂ. ಎಸ್.ಸೂರ್ಯನಾರಾಯಣರಾವ್‌ರವರನ್ನು ಸಂಘದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಅನುಮೋದಿಸಿದೆ. ಕಾಂ. ಸೂರಿಯವರ ತಂಡದ ಜಯ ಕಾರ್ಮಿಕರಲ್ಲಿ ಹೊಸ [illegible] ಹುಟ್ಟುಹಾಕಿದೆ.

ಐ.ಎಂ.ಎಫ್. ವಿಶ್ವಬ್ಯಾಂಕ್ ಸಭೆಯ ವಿರುದ್ಧ ಭಾರಿ ಪ್ರತಿಭಟನೆ



ಐ.ಎಂ.ಎಫ್. - ವಿಶ್ವಬ್ಯಾಂಕ್‌ನ ಈ ಬಾರಿಯ ವಾಶಿಂಗ್‌ಟನ್ ಸಭೆ ಅದರ ವಿರುದ್ಧ ಸಂಘಟಿಸಲ್ಪಟ್ಟ ಭಾರಿ ಪ್ರತಿಭಟನಾ ಪ್ರದರ್ಶನಗಳಿಂದ ಇಡೀ ಜಗತ್ತಿನ ಗಮನ ಸೆಳೆಯಿತು. ಐ.ಎಂ.ಎಫ್.ನ ಸಭೆ ನಡೆಸಬೇಕಾದರೆ ವಾಶಿಂಗ್‌ಟನ್ ಪೋಲೀಸರು, ಸಾಮ್ರಾಜ್ಯಶಾಹಿ ನಗರದಲ್ಲಿ ಹೆಚ್ಚು ಕಡಿಮೆ ತುರ್ತುಪರಿಸ್ಥಿತಿ ಸಾರಬೇಕಾಯಿತು. ಅಗತ್ಯ ಸೇವೆ ಬಿಟ್ಟು ಇತರ ಸರ್ಕಾರಿ ನೌಕರರಿಗೆ ರಜಾ ಕೊಟ್ಟು ಪೋಲೀಸರು ಅಭೂತಪೂರ್ವ ಬಂದೋಬಸ್ತು ಮಾಡಿದ್ದರು. ವಾಶಿಂಗ್‌ಟನ್‌ನ ಈ ಪ್ರತಿಭಟನೆ ಸಿಯಾಟಲ್‌ನಲ್ಲಿ WTO ಸಭೆಯ ಸಂದರ್ಭದಲ್ಲಿ ನಡೆದ ಪ್ರತಿಭಟನೆಯ ನಂತರ, ಜಾಗತೀಕರಣದ ವಿರುದ್ಧ ಅಮೆರಿಕದಲ್ಲಿ ಮತ್ತು ವಿಶ್ವದಲ್ಲಿ ಪ್ರತಿಭಟನೆಯ ಅಲೆ ಏಳುತ್ತಿರುವುದರ ಸೂಚನೆ.

ವಾಶಿಂಗ್‌ಟನ್ ಪೋಲೀಸರು ಸಿಯಾಟಲ್‌ನಲ್ಲಿ WTO ಸಭೆ ವಿರುದ್ಧ ಭಾರಿ ಪ್ರತಿಭಟನೆ ನಡೆದಾಗಲಿಂದಲೂ, ವಾಶಿಂಗ್‌ಟನ್ ವಿಶ್ವಬ್ಯಾಂಕ್-ಐ.ಎಂ.ಎಫ್.ನ ಏಪ್ರಿಲ್ ಸಭೆಗೆ ಸಿದ್ಧತೆ ಆರಂಭಿಸಿದ್ದಾರಂತೆ. ಸಿಯಾಟಲ್ ಮರುಕಳಿಕೆ ಆಗಬಾರದು ಎಂದು ಅವರಿಗೆ ಆಜ್ಞೆ ಆಗಿತ್ತಂತೆ. ಅಂದರೆ ಪ್ರತಿಭಟನೆ ಆಗಗೊಡಬಾರದು ಸಭೆ ನಡೆಯಬೇಕು ಅಂತ ಪೋಲೀಸರು ವ್ಯಾಪಕ ಸಿದ್ಧತೆ ನಡೆಸಿದ್ದರು.

ಪ್ರತಿಭಟನಾಕಾರರೂ ವ್ಯಾಪಕ ಸಿದ್ಧತೆ ನಡೆಸಿದ್ದರಂತೆ. 'ಜಾಗತಿಕ ಸಾಮಾಜಿಕ ನ್ಯಾಯಕ್ಕಾಗಿ ಅಣಿನೆರೆಸುವಿಕೆ' ಎಂಬ ಸಂಘಟನೆ ಹಮ್ಮಿಕೊಂಡಿದ್ದರು. ಐಎಂಎಫ್ ವಿಶ್ವಬ್ಯಾಂಕ್ ಸಭೆ ನಡೆಸದಂತೆ ಮಾಡಬೇಕು. ಸಭೆ ನಡೆದರೂ ಅದರ ವಿರುದ್ಧ ವ್ಯಾಪಕ ಪ್ರಚಾರ - ಪ್ರಕ್ಷೋಭೆ ಆಗಬೇಕೆಂದು ನಿರ್ಧರಿಸಿದ್ದರು. ಪ್ರತಿಭಟನೆ ಹೆಚ್ಚು ಕಡಿಮೆ ಯಶಸ್ವಿಯಾಯಿತು ಎನ್ನಬಹುದು. ಸಭೆ ನಡೆದ ಪ್ರತಿದಿನ ಕೊನೆಯವರೆಗೂ ಹಲವರು ಪ್ರತಿನಿಧಿಗಳು ಸಭೆಗೆ ಹೋಗಲಾಗಲಿಲ್ಲ. ಹಲವು ಪ್ರತಿನಿಧಿಗಳು ತಡವಾಗಿ ಹೋಗಬೇಕಾಯಿತು. ಸಭೆ ಸಾಕಷ್ಟು ಅಸ್ತವ್ಯಸ್ತವಾಗಿತ್ತು.

ಮೆಣಸಿನ ಪಿಚಕಾರಿ ಪ್ರತಿಭಟನಾಕಾರರ ಮೇಲೆ

ಪೋಲೀಸರು ಸಭೆ ಆರಂಭವಾಗುವ ಹಿಂದಿನ ದಿನದಿಂದಲೇ ಪ್ರತಿಭಟನಾಕಾರರ ನಾಯಕರನ್ನು, ಕಾರ್ಯಕರ್ತರನ್ನು ಬಂಧಿಸಲು ಆರಂಭಿಸಿದ್ದರು. ಸಭೆಯ ಕೊನೆಯ ದಿನದ ಹೊತ್ತಿಗೆ ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಪೊಲಿಸರು ಬಂದಿಸಿದ್ದರು. ಪೊಲೀಸರು ಪ್ಲಾಸ್ಟಿಕ್ ದೊಣ್ಣೆಗಳು ಮತ್ತು ಮೆಣಸಿನ ಪಿಚಕಾರಿಗಳನ್ನು ವ್ಯಾಪಕವಾಗಿ ಬಳಸಿದ್ದರು. ಹಲವಾರು ಪ್ರತಿಭಟನಾಕಾರರು ಇದರಲ್ಲಿ ಗಾಯಗೊಂಡರು.

ಪ್ರತಿಭಟನಾಕಾರರು 'ಗೆರಿಲ್ಲಾ ತಂತ್ರ' ಬಳಸಿ ಹಲವಾರು ಕಡೆ ಪ್ರತಿಭಟನೆ ನಡೆಸಿದರು. ಸಭೆಗೆ ಪ್ರತಿನಿಧಿಗಳು ಬೇಗನೆ ಹೋಗಲು ಪ್ರಯತ್ನಿಸಿದರು. ಅವರನ್ನು ತಡೆಯಲು ಪ್ರತಿಭಟನಾಕಾರರು ಹಾಜರಿರುತ್ತಿದ್ದರು. ಪ್ರತಿಭಟನಾಕಾರರು ಈ ಕಾರ್ಯಾಚರಣೆಗೆ ವ್ಯಾಪಕ ತಯಾರಿ ನಡೆಸಿದ್ದು ಕಂಡುಬಂತು. ಸಂಘಟಿತವಾಗಿ ಕೆಲಸ ಮಾಡಿದ್ದು ಕಂಡು ಬಂತು.

ಕೊನೆಯ ದಿನ ಪೊಲೀಸರು ಇಡೀ ವಾಶಿಂಗ್‌ಟನ್‌ನ ಸರ್ಕಾರಿ ನೌಕರರಿಗೆ ರಜಾ ಕೊಡಬೇಕಾಗಿ ಬಂತು. ಅಗತ್ಯ ಸೇವೆಯವರನ್ನು ಬಿಟ್ಟು ಇದು ಅಭೂತಪೂರ್ವ ಎಂದು ಹೇಳಲಾಗಿದೆ. ಪೊಲೀಸು ಬಂದೋಬಸ್ತಿಗೆ ಎಷ್ಟು ಖರ್ಚಾಗಿತ್ತಂದರೆ, ಸಭೆಯ ನಂತರ ವಾಶಿಂಗ್‌ಟನ್ ಪೊಲೀಸು ಇಲಾಖೆ, ಸರ್ಕಾರವನ್ನು ಆ ವೆಚ್ಚ ಭರಿಸುವಂತೆ ಕೇಳಿದೆಯಂತೆ.

ವಾಶಿಂಗ್‌ಟನ್‌ನಲ್ಲಿನ ಈ ಪ್ರತಿಭಟನೆ ಜಾಗತೀಕರಣ ವಿರುದ್ಧ ಪ್ರತಿಭಟನೆ, [illegible] ಜಗತ್ತಿನಾದ್ಯಂತ ತೀವ್ರಗೊಳ್ಳುತ್ತಿರುವುದರ ಸೂಚಕ.

ಶತಮಾನದ ಯೋಜನೆ ಹಾಲ್ದಿಯಾ ಪೆಟ್ರೋಕೆಮಿಕಲ್ಸ್

ಜಿ.ಎಸ್.ಮಣಿ

ಹೌದು ಇದು ಪಶ್ಚಿಮ ಬಂಗಾಳದ ಜನತೆಯ ಶತಮಾನದ ಕನಸು. ಸ್ವಾತಂತ್ರ್ಯ ಪಡೆಯುವವರೆಗೆ ಔದ್ಯಮಿಕ ಕ್ಷೇತ್ರದ ಮುಂಚೂಣಿಯಲ್ಲಿದ್ದ ಪಶ್ಚಿಮ ಬಂಗಾಳ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಹಿಂದೆ ಬಿದ್ದಿದ್ದು ಎಡರಂಗ ಸರ್ಕಾರ 1977ರಲ್ಲಿ ಅಧಿಕಾರಕ್ಕೆ ಬಂದ ನಂತರ ಮತ್ತೆ ಆರೋಗ್ಯಪೂರ್ಣ ಔದ್ಯಮಿಕ ಬೆಳವಣಿಗೆಗಾಗಿ ಸತತ ಶ್ರಮಪಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹಾಗೆಯೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಮತ್ತು ಈಗಿನ ಬಿಜೆಪಿ ನೇತೃತ್ವದ ಸರ್ಕಾರಗಳು ಈ ರಾಜ್ಯದ ಬಗ್ಗೆ ಮಲತಾಯಿ ಧೋರಣೆ ತೋರಿ ನೆರವು ನೀಡದೇ ಇರುವುದೂ ಎಲ್ಲರಿಗೆ ಗೊತ್ತು. ಆದ್ದರಿಂದಲೇ ಎಡರಂಗ ಸರ್ಕಾರದ ಪ್ರಯತ್ನಗಳು ಬಹಳ ಪ್ರಾಮುಖ್ಯತೆ ಪಡೆಯುವುದು.

ಏಪ್ರಿಲ್ 2 ರಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಅವರು ಹಾಲ್ದಿಯಾ ಪೆಟ್ರೋಕೆಮಿಕಲ್ಸ್ ಎಂಬ ಬೃಹತ್ ಯೋಜನೆಯನ್ನು ದೇಶಕ್ಕೆ ಅರ್ಪಿಸಿದರು. ಕೇಂದ್ರ ಸರ್ಕಾರದ ಯಾವ ಮಂತ್ರಿಗಳೂ ಈ ಕಾರ್ಯಕ್ರಮಕ್ಕೆ ಬರಲಿಲ್ಲ. ಆದರೂ ಪಶ್ಚಿಮ ಬಂಗಾಳದ ಜನತೆ ಈ ಕಾರ್ಯಕ್ರಮದಿಂದ ಪುಲಕಿತಗೊಂಡರು. ದಶಕಗಳ ಶ್ರಮದ ಫಲ ಪಡೆದ ಭಾವ ಅವರಲ್ಲಿತ್ತು.

"ಇದು ತ್ವರಿತ ಔದ್ಯಮೀಕರಣದತ್ತ ರಾಜ್ಯ ಸರ್ಕಾರಗಳು ಸಾಧಿಸಿದ ಯಶಸ್ಸುಗಳಲ್ಲೆಲ್ಲ ಅತಿ ಮುಖ್ಯ ಯಶಸ್ಸು. ನಮಗಿದು ನಿಜವಾಗಿಯೂ ಶತಮಾನದ ಯೋಜನೆ" ಎಂದು ಜ್ಯೋತಿಬಸು ಬಾವತುಂಬಿ ಹೇಳಿದ್ದರ ಹಿಂದೆ ದೊಡ್ಡ ಹೋರಾಟ ಮತ್ತು ರಾಜಕೀಯ ಸಂಕಲ್ಪ ಮತ್ತು ಕ್ರಿಯಾಶೀಲತೆಯ ಇತಿಹಾಸವೇ ಇದೆ.

ಪ.ಬಂಗಾಳದ ಉದ್ದಿಮೆ ಮಂತ್ರಿ ಬಿದ್ಯುತ್ ಗಂಗೂಲಿ ಅವರು "ಇದು ಪ.ಬಂಗಾಳ 200 ವರ್ಷಗಳ ಮತ್ತು ಇಡೀ ಭಾರತದ 10 ವರ್ಷಗಳ ಇತಿಹಾಸದಲ್ಲೇ ಬಹುಮುಖ್ಯ ಘಟನೆ" ಎಂದು ಹೇಳಿದ್ದೂ ಇದೇ ಹಿನ್ನೆಲೆಯಲ್ಲಿ.

ದೇಶದ ಬೃಹತ್ ಉದ್ಯಮಿ ರತನ್ ಟಾಟಾ ಈ ಸಂದರ್ಭದಲ್ಲಿ ಹೇಳಿದ ಮಾತು ಎಡರಂಗ ಸರ್ಕಾರದ ಟೀಕಾಕಾರರ ತಲೆಗೇ ಹೊಡೆದು ಹೇಳಿದ ಉತ್ತರ. ಅವರು ಹೇಳಿದ್ದು "ಇದು ಬಹಳ ಜನರಿಗೆ ಆಶ್ಚರ್ಯವುಂಟು ಮಾಡಬಹುದು. **ಆದರೆ ಈ ರಾಜ್ಯ ಸರ್ಕಾರದ ಜೊತೆಗಿನ ನನ್ನ ಸಂಬಂಧವನ್ನು ಒಂದೇ ಮಾತಿನಲ್ಲಿ ಹೇಳಬಹುದಾದರೆ ಅದು ಅತ್ಯುತ್ತಮ ಸರ್ಕಾರ ಅತ್ಯಂತ ವ್ಯಾವಹಾರಿಕ ಮತ್ತು ವೃತ್ತಿಪರವಾದದ್ದು. ಜ್ಯೋತಿಬಸು ಅವರಿಂದಾಗಿಯೇ ಈ ಕನಸು ನನಸಾಗಿದ್ದು"**

ಈ ಯೋಜನೆಯ ಮುಖ್ಯ ಪಾಲುದಾರ ಅನಿವಾಸಿ ಭಾರತೀಯ ಪೂರ್ಣೇಂದು ಚಟರ್ಜಿ ಹೇಳಿದು "ನಾನು 1971ರಲ್ಲಿ ಭಾರತವನ್ನು ಬಿಟ್ಟು ಹೊರಟಾಗ ಜ್ಯೋತಿಬಸು ಅವರು ಬಂಗಾಲದ ಬೀದಿಗಳಲ್ಲಿ ರಾಜಕೀಯ ಹೋರಾಟ ನಡೆಸುತ್ತಿದ್ದರು ಆನಂತರ ಅವರು ಭಾರತದ ಅತ್ಯಂತ ಜನಪ್ರಿಯ ಮುಖ್ಯಮಂತ್ರಿಗಳಾದರು."

1977ರಿಂದ ಎಡರಂಗ ಸರ್ಕಾರ ಕನಸು ಕಂಡು ಪೋಷಿಸಿ ಬೆಳೆಸಿದ ಯೋಜನೆ ಇದು. ಈ ಯೋಜನೆಗೆ ಬಂದ ಅಡೆತಡೆಗಳೇ ಹೆಚ್ಚು. 'ಟಾಟಾ ಟೀ' ಎಂಬ ಕಂಪನಿ ಪಾಲುದಾರಿಕೆ ತೊರೆದು ಹೊರ ಹೋಯಿತು. ಪ.ಬಂಗಾಳದ ಔದ್ಯಮಿಕ ಅಭಿವೃದ್ಧಿ ಮಂಡಳಿ, ಟಾಟಾ ಮತ್ತು ಚಟರ್ಜಿ ಗುಂಪುಗಳು ಸೇರಿ ಅನುಷ್ಠಾನಕ್ಕೆ ತಂದ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಕಿಲುಬು ಕಾಸಿನ ನೆರವೂ ದೊರೆಯಲಿಲ್ಲ. ಪರೋಕ್ಷವಾಗಿ ಅಡೆತಡೆಗಳನ್ನೇ ಒಡ್ಡಲಾಯಿತು. ಯೋಜನೆಗೆ ಹಣ ಸಾಲದೆ ರಾಜ್ಯದ ಜನರಿಂದ ಹಣ ಎತ್ತುವ ಪರಿಸ್ಥಿತಿ ಬಂದಿತು. ಮುಖ್ಯವಾಗಿ ಸಿಪಿಐ(ಎಂ) ಬೀದಿ ಬೀದಿಯಿಂದ ಹಣ ಎತ್ತುವ ಕಾರ್ಯಕ್ರಮ ಹಾಕಿಕೊಂಡಿತು. ಈ ಯೋಜನೆಯ ಮಹತ್ವ ಅರಿತ ಜನರು ಧಾರಾಳವಾಗಿ ಹಣಕಾಸಿನ ಕೊಡುಗೆ ನೀಡಿದರು.

ಯೋಜನೆ.

ಹಾಲ್ದಿಯಾ ಕಲ್ಕತ್ತದಿಂದ 127 ಕಿ.ಮಿ. ದೂರದಲ್ಲಿದೆ. ಈಗದು ಔದ್ಯಮಿಕ ಚಟುವಟಿಕೆಯ ಕೇಂದ್ರವಾಗಿ ಹೊರಹೊಮ್ಮಿದೆ. ಹಲ್ದಿಯಾ ಪೆಟ್ರೋಕೆಮಿಕಲ್ಸ್ ಭಾರತದ ಆರನೇ ಪೆಟ್ರೋಕೆಮಿಕಲ್ ಸಂಕೀರ್ಣ. ಇದು ಜಾಮ್ ನಗರದಲ್ಲಿರುವ ರಿಲಯನ್ಸ್‌ನ ಇಂತಹ ಸ್ಥಾವರದ ನಂತರ ಎರಡನೇ ದೊಡ್ಡ ಸ್ಥಾವರ.

1971ರಲ್ಲಿ ರೂಪುಗೊಂಡ ಈ ಯೋಜನೆಗೆ 1977ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ದೊರೆಯಿತು. ಈ ಯೋಜನೆಯಲ್ಲಿ ಇಂದಿನ ಹೂಡಿಕೆ 5170 ಕೋಟಿ ರೂಪಾಯಿಗಳು. ಈ ಸಂಕೀರ್ಣ ಸುಮಾರು ಒಂದು ಸಾವಿರ ಎಕರೆಗಳ ಜಮೀನಿನಲ್ಲಿ ಮೂಡಿಬಂದಿದೆ.

1997ರ ಜನವರಿಯಲ್ಲಿ ಪ್ರಾರಂಭವಾದ ಯೋಜನಾ ಅನುಷ್ಠಾನ ಕಾರ್ಯ ಬರೀ 37 ತಿಂಗಳುಗಳಲ್ಲಿ ಪೂರ್ಣಗೊಂಡಿದೆ. ಜಾಗತಿಕವಾಗಿ ಇಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಸಮಯ 41 ತಿಂಗಳುಗಳು.

ಈ ಯೋಜನೆಯಿಂದಾದ ಸುಮಾರು 1350 ಇತರ ಕೈಗಾರಿಕೆಗಳು ಮೂಡಿ ಬರಲಿವೆ. ಮುಂದಿನ ಐದು ವರ್ಷಗಳಲ್ಲಿ ಮೂಡಿಬರಲಿರುವ ಈ ಯೋಜನೆಗಳಲ್ಲಿ ಶೇ. 60ರಷ್ಟು ಸಣ್ಣ ಕೈಗಾರಿಕೆಗಳಾಗಿರುತ್ತವೆ. ನೇರ ಸಂಬಂಧಿತ 354 ಯೋಜನೆಗಳು ಮೊದಲ ವರ್ಷದಲ್ಲಿ ಪ್ರಾರಂಭವಾಗಿ ಸುಮಾರು 55000ದಷ್ಟು ಉದ್ಯೋಗಗಳನ್ನು ಸೃಷ್ಟಿಸಲಿವೆ. ಈ ಯೋಜನೆಯ ಸಂಬಂಧಿತ ಯೋಜನೆಗಳೇ ಸುಮಾರು ಎರಡೂ ಕಾಲು ಲಕ್ಷದಷ್ಟು ಉದ್ಯೋಗ ಸೃಷ್ಟಿಸಲಿವೆ.

ಹೀಗೆ ಪ.ಬಂಗಾಳದ ಔದ್ಯಮಿಕ ಚಿತ್ರಣವನ್ನೇ ಬದಲಿಸುವಂತಹ ಯೋಜನೆ ಇದು. ಈ ಯೋಜನೆಯ ಯಶಸ್ಸಿಗಾಗಿ ಹಗಲಿರುಳೂ ಎಡರಂಗ ಸರ್ಕಾರ ಶ್ರಮಿಸಿದೆ.

ಎಡರಂಗ ಸರ್ಕಾರ/ ಕಮ್ಯುನಿಸ್ಟರು ಔದ್ಯಮಿಕರಣದ ವಿರೋಧಿಗಳು. ಟ್ರೇಡ್ ಯೂನಿಯನ್ನುಗಳನ್ನು ಕಟ್ಟಿ ಔದ್ಯಮಿಕ ವಾತಾವರಣವನ್ನೇ ಕೆಡಿಸಿ ದೇಶದ ಅಧಿಕಾರವನ್ನು ಹಾಳುಗೆಡುವುತ್ತಿದ್ದಾರೆ ಎಂಬ ಅಪಪ್ರಚಾರವನ್ನು ಬೂರ್ಜ್ವಾ ಮಾಧ್ಯಮಗಳು ಮಾಡುತ್ತಲೇ ಬಂದಿವೆ. ಹೀಗಿರುವಾಗ ಈ ಅಪಪ್ರಚಾರವನ್ನು ಮಾತಿನಿಂದ ಎಷ್ಟೇ ಖಂಡಿಸಿದರೂ ಅದು ಸಾಲುತ್ತಿರಲಿಲ್ಲ. ಆದರೆ ಹಲ್ದಿಯಾ ಪೆಟ್ರೋಕೆಮಿಕಲ್ಸ್ ನಂತಹ ಒಂದು ಯೋಜನೆ ಈ ಅಪಪ್ರಚಾರದ ವಿರುದ್ಧ ಒಂದು ಉಜ್ವಲ ಪ್ರತಿವಾದವಾಗಿ ಬೆಳೆದು ನಿಂತಿದೆ.

ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿಬಸು ಹಾಗೂ ಇತರ ಗಣ್ಯರು



ಯಾವ ಬೆಳೆ ಬೆಳೆದರೂ.......

ಪುಟ 7ರಿಂದ

ಬಳಕೆ ಮತ್ತು ಇತರ ವೆಚ್ಚಗಳಿಗೆ ಖರ್ಚಾಯಿತು. ಗೊಬ್ಬರ ಬೀಜಗಳು ಬೆಳೆ ಬೆಳೆಯಲು ಉಪಯೋಗಿಸಲ್ಪಟ್ಟರೂ ಅಂತರಬೇಸಾಯ ಮತ್ತಿತರ ಖರ್ಚಿಗೆ ಖಾಸಗಿಯವರ ಬಳಿ ಕೈ ಒಡ್ಡಲೇ ಬೇಕಾಯಿತು. ಇಂಥ ಪರಿಸ್ಥಿತಿಯಲ್ಲಿ ಬೆಳೆ ನಷ್ಟವಾದರೆ ಅಥವಾ ಬೆಳೆ ಬಂದರೂ ಯೋಗ್ಯ ಬೆಲೆ ಬಾರದೆ ಇದ್ದರೆ ರೈತರು ಮೇಲೆ ತೋರಿಸಿದ ಸಾಲವನ್ನು ತೀರಿಸುವುದಾದರು ಹೇಗೆ? ಬಂದ ಫಸಲು ಸಾಲಕ್ಕಾದರೆ ಜೀವನ ನಿರ್ವಹಣೆಗೆ ಮತ್ತೆ ಸಾಲ ಮಾಡುವುದು ಅನಿವಾರ್ಯ. ಒಂದೊಮ್ಮೆ ಬ್ಯಾಂಕು ಅಥವಾ ಸಹಕಾರಿ ಸಂಘಗಳಲ್ಲಿ ಕಟಬಾಕಿದಾರ ಆದರೆ ಮುಂದಿನ ವರ್ಷದ ಬೇಸಾಯ ಹಾಗೂ ಕುಟುಂಬ ನಿರ್ವಹಣೆಗೆ ಸಾವುಕಾರಿ ಸಾಲ ಪಡೆಯದೆ ಅನ್ಯಮಾರ್ಗವಿಲ್ಲ ಒಬ್ಬ ಸಾವುಕಾರನ ಸಾಲ ಮರುಪಾವತಿ ಮಾಡಲು ಇನ್ನೊಬ್ಬ ಸಾವುಕಾರನ ಮೊರೆ ಹೋಗುವುದು ಹೀಗೆ ಒಬ್ಬನಿಂದ ಇನ್ನೊಬ್ಬನ ಬಳಿ ಸಾಲಕ್ಕೆ ಹೋದಾಗಲೆಲ್ಲ ಸಾಲದ ಮೊತ್ತ ಹೆಚ್ಚುತ್ತಲೆ ಹೋಗುತ್ತದೆ ಸಣ್ಣ ತಗ್ಗು ಮುಚ್ಚಲು ದೊಡ್ಡ ತಗ್ಗು ತೋಡುವ ಹಾಗೆ ರೈತನ ಸ್ಥಿತಿ ಇದೆ. ಇಂಥ ಸಾವುಕಾರಿ ಸಾಲದ ಮೇಲಿನ ಬಡ್ಡಿಯೂ ಜಾಸ್ತಿ. ಯಾವ ಕಾನೂನಿನ ಕೈಗೂ ಅದು ಸಿಕ್ಕುವಂತಿಲ್ಲ ಇದೊಂದು ತಿರುಗಣೆ ಮಡುವು ಇದ್ದ ಹಾಗೆ ಈ ತಿರುಗಣ ಮಡುನಿಗೆ ಬಿದ್ದ ಯಾವನಾದರೂ ಜೀವ ಸಹಿತ ಪಾರಾಗಿ ಬರುವುದು ದುರ್ಲಭ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತರು ಸಾಲದ ತಿರುಗಣೆ ಮಡುವಿನಲ್ಲಿ ಬಿದ್ದಿದ್ದಾರೆ. ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳೆಷ್ಟೊ ಆದರೆ ಇತ್ತೀಚಿಗಷ್ಟೆ ರೈತರ ಆತ್ಮ ಹತ್ಯೆ ಪ್ರಕರಣಗಳು ಸರಕಾರದ ಕಿವುಡು ಕಿವಿಗೆ ಕೇಳಿಸಿವೆ.

ಬಾಣಲೆಯಿಂದ ಬೆಂಕಿಗೆ

ರೈತರ ಇಂಥ ದಯನೀಯ ಸ್ಥಿತಿಗೆ ಕಾರಣಗಳೇನು? ದೋಷಗಳನ್ನು ಹುಡುಕುತ್ತ ಹೋದಲ್ಲಿ ಅನೇಕ ಸಂಗತಿಗಳು ಗೋಚರಿಸುತ್ತವೆ. ಮೊದಲನೆಯದಾಗಿ ಮಣ್ಣು ತನ್ನ ಸತ್ವವನ್ನೆ ಕಳೆದುಕೂಂಡಂತಾಗಿದೆ. ನೀರಿನ ಅಸಮರ್ಪಕ ಬಳಕೆಯಿಂದ ಭೂಮಿಯಲ್ಲಿ ಅಂತರ ಜಲದ ಮಟ್ಟವು ಹೆಚ್ಚಾಗಿ ಬೆಳೆಗಳ ಬೇರು ಹರಡುವ ನೆಲದಲ್ಲಿ ಲವಣಾಂಶಗಳ ಸಂಗ್ರಹದಿಂದಾಗಿ ಬೆಳೆ ಕುಂಟಿತವಾಗುತ್ತದೆ ಎಂಬುದು ಕೃಷಿ ತಜ್ಞರ ಅಭಿಮತ. ಆದರೆ ರೈತರು ನೀರನ್ನು ಬಳಕೆ ಮಾಡುವಾಗ ವೈಜ್ಞಾನಿಕ ಕ್ರಮಗಳನ್ನು ಅನುಸರಿಸುವುದೆ ಕಡಿಮೆ. ಬೇಕಾ ಬಿಟ್ಟಿಯಾಗಿ ನೀರನ್ನು ಬಳಕೆ ಮಾಡಿ ಮಣ್ಣಿನ ಫಲವತ್ತತೆ ಕಡಿಮೆಯಾಗಿದೆ. ಹೀಗಾಗಿ ಇಳುವರಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ನೀರಾವರಿಯ ಪ್ರಾರಂಭದ ವರ್ಷಗಳಲ್ಲಿ ಎಕರೆಗೆ 15 ಕ್ವಿಂಟಾಲ್ ಹತ್ತಿ ಬೆಳೆದ ರೈತ ಈಗ 5 ಕ್ವಿಂಟಾಲ್‌ಗೆ ತೃಪ್ತಿ ಪಟ್ಟಿಕೊಳ್ಳಬೇಕಾಗಿದೆ. ಎರಡನೆಯದಾಗಿ ಉತ್ಪಾದನೆ ವೆಚ್ಚ ಏರುತ್ತಲೆ ನಡೆದಿದೆ. ಬೀಜ ಗೊಬ್ಬರ, ಕ್ರಿಮಿನಾಶಕ ಕೂಲಿ ಬೆಲೆಗಳು ಏರುತ್ತಲೆ ಇವೆ. ಆದರೆ ಎಕರೆವಾರು ಇಳುವರಿ ಕಡಿಮೆಯಾಗುತ್ತಿದೆ. ಮೂರನೆಯದಾಗಿ ಬೀಜ ಗೊಬ್ಬರ ಹಾಗೂ ಕೀಟನಾಶಕಗಳಲ್ಲಿ ಭಾರಿ ಮೋಸ ನಡೆಯುತ್ತದೆ. ಕಳಪೆ ಬೀಜಗಳು ಅವಧಿ ಮೀರಿದ ಕಲಬೆರೆಕೆಯಾದ ಕ್ರಿಮಿನಾಶಕ ಹಾಗೂ ರಾಸಾಯನಿಕ ಗೊಬ್ಬರಗಳು ರೈತರ ಉತ್ತಮ ಫಸಲಿನ ಕನಸನ್ನು ಭಗ್ನಗೊಳಿಸುತ್ತವೆ. ಚೋದ್ಯದ ಸಂಗತಿ ಎಂದರೆ ಕಳಪೆ ಬಿತ್ತನೆಯ ಪರಿಕರಗಳನ್ನು ಖರೀದಿಸುವ ಅನಿವಾರ್ಯತೆಗೆ ರೈತ ಒಳಗಾಗಿದ್ದಾನೆ. ಸಾಲದಲ್ಲಿದ್ದ ರೈತರು ಬೀಜ ಗೊಬ್ಬರ ವ್ಯಾಪಾರಿಗಳಿಂದ ಉದ್ರಿಯಿಂದ ಈ ವಸ್ತುಗಳನ್ನು ಪಡೆಯುತ್ತಾರೆ. ಉದ್ರಿಯಲ್ಲಿ ವಸ್ತುಗಳನ್ನು ಪಡೆಯುವಾಗ ವಸ್ತುಗಳ ಗುಣಮಟ್ಟ ಬೆಲೆಗಳ ಕುರಿತು ವಿಚಾರಿಸುವುದು ರೈತರಿಗೆ ಸಾಧ್ಯವಾಗದು. ವ್ಯಾಪಾರಿ ಕೊಟ್ಟದ್ದನ್ನು ಧನ್ಯವಾದಗಳೊಂದಿಗೆ ರೈತರ ಪಡೆಯುತ್ತಾರೆ. ಇಂಥ ವ್ಯಾಪಾರದಲ್ಲಿ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ಕಳಪೆ ಮತ್ತು ಅವಧಿ ಮೀರಿದ ವಸ್ತುಗಳು ಎರಡು ಉದ್ರಿಯಿಂದ ಕೊಂಡ ವಸ್ತುಗಳಿಗೆ ಬೆಲೆ ಹೆಚ್ಚು ಮತ್ತು ಬಡ್ಡಿ ಆಕರಣೆ ಮಾಡಲಾಗುತ್ತದೆ. ಇಂಥ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕಗಳಿಂದ ಬೆಳೆ ನಾಶವಾದರೂ ಅವುಗಳಿಗೆ ಮಾಡಿದ ಸಾಲವನ್ನು ರೈತರು ತೀರಿಸಲೇ ಬೇಕು. ನಾಲ್ಕನೆಯದಾಗಿ ರೈತರು ಬೆಳೆದ ಹುಟ್ಟುವಳಿಗಳಿಗೆ ಯೋಗ್ಯ ಬೆಲೆ ಸಿಗುತ್ತಿಲ್ಲ. ಆಹಾರ ನಿಗಮ ಭಾರತ ಹತ್ತಿ ನಿಗಮಗಳು ಇದ್ದರೂ ರೈತರ ನೆರವಿಗೆ ಬರುತ್ತಿಲ್ಲ. ಹೀಗಾಗಿ ವ್ಯಾಪಾರಿಗಳದೇ ದರ್ಬಾರು. ಹುಟ್ಟುವಳಿಗೆ ಯೋಗ್ಯ ಬೆಲೆ ಸಿಗುವದು ಅದೃಷ್ಟದ ಆಟ ಎಂದು ರೈತರು ಭಾವಿಸುವಂತಾಗಿದೆ. ಈ ವರ್ಷ ಈರುಳ್ಳಿ ಬೆಲೆ ಕುಸಿದಾಗ ರೈತರು ಹೋರಾಟಕ್ಕಿಳಿದಾಗ ರಾಜ್ಯ ಸರಕಾರ ಬೆಂಬಲ ಬೆಲೆ ಘೋಷಿಸಿ, ತಾನೆ ಖರೀದಿಸುವ ನಾಟಕ ಮಾಡಿತು. ಇಲ್ಲಿ ಪ್ರಸ್ತಾಪಿಸಿದ ಕೆಲವು ಅಂಶಗಳು ಸಾಮಾನ್ಯವಾಗಿ ಎಲ್ಲ ರೈತರಿಗೆ ಅನ್ವಯಿಸುತ್ತಿದ್ದರೂ ಕಂಗಾಲಾದ ಮಲಪ್ರಭಾ ರೈತರ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ.

ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ರೈತ ಕಾವಲುದಾರಿಯಲ್ಲಿದ್ದಾನೆ. ಬೇಸಾಯದಲ್ಲಿ ಸಾಂಪ್ರದಾಯಕ ಕಮಗಳನ್ನು ಬಿಡಲಾರದ ಹಾಗೂ ಆಧುನಿಕ ಬೇಸಾಯದ ಕ್ರಮಗಳನ್ನು ಅಳವಡಿಸಲಾರದ ಸ್ಥಿತಿಯಲ್ಲಿದ್ದಾನೆ. ಕೃಷಿ ತಜ್ಞರನ್ನು ಸಂಪರ್ಕಿಸದೆ ಸ್ವಯಂ ವೈದ್ಯ ನಂತೆ ವರ್ತಿಸುತ್ತಾನೆ. ಮೌಢ್ಯ ಹಾಗೂ ಹುಂಬತನ ಇನ್ನು ಅವನನ್ನು ಆಳುತ್ತಿದೆ. ರೈತರು ಒಂದು ಶಿಸ್ತಿಗೆ ಒಳಗಾಗಬೇಕು ಕೃಷಿ ತಜ್ಞರ ನಿರಂತರ ಸಂಪರ್ಕದಲ್ಲಿದ್ದು, ನೀರಾವರಿಯ ಸರಿಯಾದ ಕ್ರಮಗಳನ್ನು ಅನುಸರಿಸಲು ಸಲಹೆ ಮಾಹಿತಿ ಪಡೆಯುತ್ತಿರಬೇಕು. ಇದೊಂದೇ ಅವರಿಗೆ ಇರುವ ದಾರಿ.

ಹೋರಾಟ ಮಾಡಿ ಚರಿತ್ರಾರ್ಹ ಘಟನೆಗೆ ನಾಂದಿ ಹಾಡಿದ ಈ ಭಾಗದ ರೈತರು ಒಂದು ಸಂಘಟಿತ ಶಕ್ತಿಯಾಗಿ ಹೊರ ಹೊಮ್ಮದಿರುವುದು ಪರಿಸ್ಥಿತಿಯ ವೈಚಿತ್ರ್ಯ. ತಮ್ಮಲ್ಲಿ ಸಂಘಟನೆ ಇಲ್ಲದ ಬಗ್ಗೆ ಕೊರಗಿದೆ. ಸಂಘಟನೆಯ ಕೊರತೆಯಿಂದಾಗಿ ಶೋಷಣೆಗೆ ಗುರಿಯಾಗುತ್ತಿದ್ದೇವೆಂಬ ಅರಿವಿದೆ. ಸಂಘಟಿತಗೊಳ್ಳುವ ಒಲವಿದ್ದರೂ ಅಸಹಾಯಕತೆ ಕಾಡುತ್ತದೆ. ನಾಯಕತ್ವದ ಕೊರತೆ ಇದಕ್ಕೆ ಕಾರಣ. ಮಲಪ್ರಭಾ ರೈತ ಹೋರಾಟವನ್ನೆ ಮೂಲ ಬಂಡವಾಳ ಮಾಡಿಕೊಂಡ ಕೆಲವು ರೈತ ಮುಖಂಡರು ರಾಜ್ಯ ರೈತ ಸಂಘವನ್ನು ಹುಟ್ಟು ಹಾಕಿದರು. ಅಷ್ಟಿಷ್ಟು ಚಳುವಳಿಯನ್ನು ಮಾಡಿದರು. ವಿಶಾಲ ದೃಷ್ಟಿಕೋನದ ಅಭಾವ ಹಾಗೂ ರಾಜಕೀಯ ತೆವಲುಗಳಿಂದಾಗಿ ರೈತ ಸಂಘ ಛಿದ್ರಗೊಂಡಿದೆ. ರೈತ ಸಮುದಾಯವನ್ನು ಇನ್ನಷ್ಟು ಹತಾಶೆಗೊಳಿಸಿದೆ.

ಒಟ್ಟಾರೆ ರೈತರಿಗೆ ಶ್ರಮ ಹೆಚ್ಚಾಗಿದೆ. ಶ್ರಮಕ್ಕೆ ತಕ್ಕಷ್ಟು ಫಲ ಭೂಮಿಯಿಂದ ದೊರೆಯುತ್ತಿಲ್ಲ ಎಂಬುದು ಆತಂಕಕ್ಕೀಡು ಮಾಡಿದೆ. ನಿರಾಶೆ ಅಸಮಧಾನ ಆಕ್ರೋಶಗಳನ್ನು ತನ್ನ ಒಡಲೊಳಗಿರಿಸಿಕೊಂಡು ರೈತರು ತಮ್ಮ ಅಸಹಾಯಕತೆ ದೌರ್ಬಲ್ಯಗಳನ್ನು ಕೊಡವಿ ಮೇಲೆದ್ದು ಬಂದು ಸಂಘಟಿತ ಶಕ್ತಿಯಾಗಿ ರೂಪಗೊಂಡು ಹೋರಾಟದ ಹಾದಿ ಹಿಡಿಯುವ ದಿನಗಳು ದೂರವಿಲ್ಲ.

ಇತಿಹಾಸದ ಪುಟಗಳಿಂದ

ಸಾಹಿತ್ಯದೊಡನೆ ಗುದ್ದಾಡಿ ಅರ್ಥದೊಡನೆ ಹೋರಾಡಿ

ಮೊದಲನೆಯ ಅಂಕದ ಮೊದಲನೆಯ ದೃಶ್ಯದಿಂದಲೆ ಪ್ರಾರಂಭಿಸಿದೆ. ಒಂದೊಂದು ಪಂಕ್ತಿಯನ್ನೂ ಚೆನ್ನಾಗಿ ಅರ್ಥಮಾಡಿಕೊಂಡು ಭಾವವನ್ನು ಗ್ರಹಿಸಿಯೆ ಮುಂದುವರಿಯುವ ಹಟ. ಆದರೆ ಹತ್ತಾರು ಪಂಕ್ತಿಯನ್ನು ಓದಿದರೂ ಏನೂ ಅರ್ಥ ಹೊಳೆಯಲೆ ಇಲ್ಲ. ಕಷ್ಟ ಪದಗಳಿಗೆ ನಿಘಂಟನ್ನು ನೋಡಿ ತಿಳಿದು ಮತ್ತೆ ಓದಿದೆ. ಪ್ರಯೋಜನವಾಗಲಿಲ್ಲ. ಅರೆ! ಇದೇನು? ನನಗೆ ಇಂಗ್ಲಿಷ್ ಭಾಷೆ ಬರುತ್ತದೆ. ಎಸ್.ಎಸ್. ಎಲ್.ಸಿ. ಓದುತ್ತಿದ್ದೇನೆ! ಆದರೆ ಷೇಕ್ಸ್ ಪಿಯರ್‌ನ ಈ ನಾಟಕ ಏಕೆ ಅರ್ಥವಾಗುತ್ತಿಲ್ಲ. ನನ್ನ ವಿದ್ಯಾಹಂಕಾರಕ್ಕೆ ಒದೆ ಬಿದ್ದಂತಾಯಿತು. ನಿಘಂಟನ್ನೂ ನೋಡಿ ಪದಗಳಿಗೆಲ್ಲ ಅರ್ಥ ತಿಳಿದಿದ್ದೇನೆ. ಆದರೂ ಭಾವವಾಗುತ್ತಿಲ್ಲವಲ್ಲಾ? ಅಳು ಬಂದಂತಾಯಿತು. ಸಿಟ್ಟೂ ಬಂದಿತು. ಪುಸ್ತಕಕ್ಕೆ ಬರೆದಿದ್ದ ಪೀಠಿಕೆಯಲ್ಲಿದ್ದ ಕಥಾ ಸಾರಾಂಶವನ್ನು ಓದಿದೆ. ಕಥೆಯೇನೊ ತಕ್ಕಮಟ್ಟಿಗೆ ಗೊತ್ತಾಯಿತು. ಅದನ್ನು ಆಧಾರವಾಗಿಟ್ಟುಕೊಂಡು ಮತ್ತೆ ಮೊದಲನೆಯ ದೃಶ್ಯವನ್ನು ಓದತೊಡಗಿದೆ. ಉಹ್ಲು! ಏನೂ ಅರ್ಥವಾಗಲಿಲ್ಲ. ಸಿಟ್ಟೇರಿತು! ಪುಸ್ತಕವನ್ನು ತೆಗೆದು ಎದುರಿಗೆ ಆರೇಳು ಅಡಿಗಳಲ್ಲಿದ್ದ ಗೋಡೆಗೆ ಬಲವಾಗಿ ಎಸೆದು ಅಪ್ಪಳಿಸಿಬಿಟ್ಟೆ! ಹಾಳೆಗಳೆಲ್ಲ ಹಕ್ಕಿಪುಕ್ಕಗಳಂತೆ ಕೆದರಿ, ಕ್ಯಾಲಿಕೊ ರಟ್ಟು ಗೋಡೆಗೆ ಡಿಕ್ಕಿಯಾದ ಪೊಡೆತಕ್ಕೆ ಹಿಸಿದು, ರಪ್ಪನೆ ಕೆಳಗೆ ಬಿತ್ತು. ಕಣ್ಣಲ್ಲಿ ನೀರೂ ಬಂತು. ಅಯ್ಯೋ ದುಡ್ಡುಕೊಟ್ಟು ಕೊಂಡ ಪುಸ್ತಕ ಹಾಳಾಯಿತಲ್ಲಾ ಎಂದೂ ಕರುಳು ಕಿವಿಚಿತು. ಎದ್ದುಹೋಗಿ ಅದನ್ನೆತ್ತಿಕೊಂಡು ಹಾಳೆ ರಟ್ಟುಗಳನ್ನೆಲ್ಲ ಸರಿಪಡಿಸಿದೆ. ಮತ್ತೆ ಓದಲು ಪ್ರಯತ್ನಿಸಿದೆ.

ಈ ಸಾರಿ, ಮನಸ್ಸಿಗೆ ಹೊಳೆಯಿತು, ಅರ್ಥವಾಗದಿದ್ದರೂ ಓದುತ್ತಾ ಹೋಗಬೇಕೆಂದು ಹೇಗಿದ್ದರೂ ಕಥೆ ಸ್ವಲ್ಪಮಟ್ಟಿಗೆ ಗೊತ್ತಿತ್ತು. ಸುಮ್ಮನೆ ಓದುತ್ತಾ ಹೋದೆ. ತಂತಿ ಅಲ್ಲಲ್ಲಿ ತುಂಡುಗಡಿದಿದ್ದರೂ ಸಮೀಪಗತವಾಗುವು ದರಿಂದ ವಿದ್ಯುತ್ತು ತುಂಡಿನಿಂದ ತುಂಡಿಗೆ ಹಾರುವಂತೆ ಅನೇಕ ಎಡೆಗಳಲ್ಲಿ ಅರ್ಥವಾಗ ದಿದ್ದರೂ ಕಥಾಸೂತ್ರದ ಸಹಾಯದಿಂದ ಭಾವಕಲ್ಪನೆಯಾಗಿ ಮನಸ್ಸಿಗೆ ಸಂತೋಷ ವಾಗತೊಡಗಿತು. ಪೂರ್ತಿ ನಾಟಕವನ್ನು ಓದಿ ಮುಗಿಸಿಯೆಬಿಟ್ಟೆ! ಅಂತೂ ಕಡೆಯಲ್ಲಿ ಪರ್ವಾ ಇಲ್ಲ ಎನ್ನಿಸಿತು.

ನನಗಿಂತಲೂ ತಿಳಿದವರು ಯಾರಾದರೂ ನಮ್ಮ ಜೊತೆ ಇದ್ದಿದ್ದರೆ ಅವರಿಂದ ಓದಿಸಿ ಅರ್ಥ ಹೇಳಿಸಿಕೊಂಡು ಭಾವವಿವರಣೆ ಪಡೆದು ಅಷ್ಟೊಂದು ಪಾಡುಪಡದೆ ಮುಂದುವರಿಯ ಬಹುದಿತ್ತು. ಆದರೆ ಆಗ ನಾನಿದ್ದ ಸ್ಥಿತಿಯಲ್ಲಿ ಆ ಅನುಕೂಲವಿರಲಿಲ್ಲ. ನನ್ನ ರೂಮುಮೇಟುಗಳು ನನಗಿಂತಲೂ ಮಹಾಬೃಹಸ್ಪತಿಗಳು. ಬೇರೆಯವರ ಪರಿಚಯವಿಲ್ಲ. ಹೈಸ್ಕೂಲಿನ ಅಧ್ಯಾಪಕರು ಪಾಠ ಹೇಳಿಕೊಡುವುದೆ ಹರ್ಮಾಗ್ರಾಲವಾಗಿತ್ತು. ಅವರ ಮನೆಗಳನ್ನು ಹುಡುಕಿಕೊಂಡು ಹೋಗಿ, ಅವರ ಸಮಯ ಕಾದು, ಅದನ್ನೆಲ್ಲ ಮಾಡುವ ಚೇತನ ನನ್ನದಾಗಿರಲಿಲ್ಲ. ಆದ್ದರಿಂದ ಯಾರ ನೆರವನ್ನೂ ಹಾರೈಸದೆ ಏಕಾಂಗಿಸಾಹಸಿಯಾಗಿಯೆ ಮುಂದುವರಿಯಬೇಕಾಗಿತ್ತು. ಅದರಿಂದ ಒಂದು ದೊಡ್ಡ ಲಾಭವಾಯಿತು. ಸಾಹಿತ್ಯದೊಡನೆ ಹೋರಾಡಿ, ಅರ್ಥದೊಡನೆ ಗುದ್ದಾಡಿ, ತಪ್ಪೊನೆಪ್ಪೊ ಭಾವಗಳೊಡನೆ ಗರುಡಿಯಾಡಿ, ನನ್ನ ಬುದ್ಧಿಗೆ ವ್ಯಾಯಾಮ ಒದಗಿ ಬಲಿಷ್ಠವಾಯಿತು; ಉಜ್ಜಿ ಉಜ್ಜಿ ನನ್ನ ಭಾವಶಕ್ತಿ ಉಜ್ವಲವಾಯಿತು; ಪ್ರತಿಭೆಗೆ ಒಂದು ಕೆಚ್ಚು ಲಭಿಸಿ, ಆತ್ಮಪ್ರತ್ಯಯ ನಿಷ್ಠೆಗೆ ನಾಂದಿಯಾಯಿತು. ಆದ್ದರಿಂದ ನಾನು ಎಸ್.ಎಸ್.ಎಲ್.ಸಿ. ತರಗತಿಯಲ್ಲಿರುವಾಗಲೆ ಷೇಕ್ಸ್‌ಪಿಯರ್ ನಾಟಕಗಳನ್ನೂ ಮಿಲ್ಟನ್ ಕವಿಯ ಪ್ಯಾರಡೈಸ್ ಲಾಸ್ಟ್ ಕಾವ್ಯವನ್ನೂ ಓದಲು ಸಮರ್ಥನಾದೆ.


- ಕುವೆಂಪು

'ನೆನಪಿನ ದೋಣಿ'ಯಿಂದ

ವಿಪುಲವಾದ ಜ್ಞಾನಲೋಕಕ್ಕೆ ನನ್ನನ್ನು ನಾನೇ ಎಳೆದುಕೊಂಡು ಹೋದೆ

ಇ.ಎಂ.ಎಸ್-ಓದು

ಇಂಗ್ಲೀಷ್ ಸಾಹಿತ್ಯದಲ್ಲಿನ ಉತ್ತಮ ಕೃತಿಗಳನ್ನು ಆಸ್ವಾದಿಸುವವರೂ ಇತರರೂ ಸಹ ಆಸ್ವಾದಿಸುವಂತೆ ಮಾಡುವವರೂ ಆದ ಅಧ್ಯಾಪಕರೊಡನೆ ಪ್ರಸಂಗಗಳು, ಆ ಪ್ರಸಂಗ ಗಳಲ್ಲಿ ಪ್ರಸ್ತಾಪಿಸಲ್ಪಡುವ ಗ್ರಂಥಗಳನ್ನು ಸ್ವತಃ ಆರಿಸಿ ಓದಿ ಮನನ ಮಾಡಿಕೊಳ್ಳುವ ಸೌಕರ್ಯ ಗಳು, ಪುರಾತನ ಗ್ರೀಸಿನ, ರೋಮಿನ, ಮಧ್ಯಯುಗದ ಯುರೋಪಿನ ಮತ್ತು ಪ್ರಾಚೀನ ಭಾರತದ ಇತಿಹಾಸಗಳೆಲ್ಲ ಓದಿ ಮನಸ್ಸಿನಲ್ಲಾಗುವ ಒಂದು ಬೌದ್ಧಿಕ ವಾತಾವರಣ - ಈ ವಿಷಯಗಳನ್ನು ಕುರಿತು ಓದಲು ಯೋಗ್ಯ ವಾದ ಅನೇಕ ಪುಸ್ತಕಗಳುಳ್ಳ ಕಾಲೇಜು ಲೈಬ್ರರಿ- ಇವೆಲ್ಲ ನನಗಲ್ಲಿ ಸಹಾಯಕವಾಗಿದ್ದವು. ಈ ಸೌಕರ್ಯಗಳೆಲ್ಲವನ್ನೂ ಉಪಯೋಗಿಸಿ ಕೊಂಡು ಪರೀಕ್ಷೆಗೆ ಅವಶ್ಯಕವಾಗಿರುವುದಕ್ಕಿಂತ ಹೆಚ್ಚಾಗಿ, ವಿಪುಲವಾದೊಂದು ಜ್ಞಾನಲೋಕಕ್ಕೆ ನನ್ನನ್ನು ನಾನೇ ಎಳೆದುಕೊಂಡು ಹೋದೆ. ನನಗೆ ಅತ್ಯಂತ ಆಸಕ್ತಿಯುಳ್ಳ ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳನ್ನು ಕುರಿತು ತಿಳಿದುಕೊಳ್ಳಲು ಸಹಾಯ ವಾಗುವ ಹಲವು ಗ್ರಂಥಗಳೂ ಕಾಲೇಜು ಲೈಬ್ರರಿಯಲ್ಲಿದ್ದವು. ಅವುಗಳನ್ನೆಲ್ಲ ಓದಿದೆ. ಸಾಹಿತ್ಯ ರಾಜಕೀಯ ವಿಷಯಗಳಲ್ಲದೆ ಇತರ ವಿಷಯಗಳನ್ನೂ ಸೇರಿಸಿ ಕೊಂಡು ಬರ್ನಾರ್ಡ್ ಷಾ ಎಚ್. ಜಿ. ವೆಲ್ಸ್ ಮುಂತಾದವರು ಬರೆದಿದ್ದ ಗ್ರಂಥಗಳಲ್ಲದೆ ರ‍್ಯಾಮ್ಸೆ ಮ್ಯಾಕ್ ಡೋನಾಲ್ಡರ 'ಸೋಷಲಿಸಂ' ಹೆರಾಲ್ಡ್ ಲಾಸ್ಕಿಯ 'ಕಮ್ಯುನಿಸಂ' ಎಂಬ ಗ್ರಂಥಗಳನ್ನೂ ಕಾಲೇಜ್ ಲೈಬ್ರರಿ ಯಿಂದಲೇ ನಾನು ತೆಗೆದು ಕೊಂಡು ಓದಿದುದು. ಎಷ್ಟೋ ತಪ್ಪು ವ್ಯಾಖ್ಯಾನ ಗಳಿಂದ ಕೂಡಿರುವುವು ಗಳಾದರೂ ಸೋಷಲಿಸ್ಟ್ - ಕಮ್ಯುನಿಸ್ಟ್ ಸಿದ್ಧಾಂತಗಳ ಮೊದಲ ಪಾಠ ಗಳನ್ನು ನನಗೆ ದೊರಕಿಸಿದ ಪುಸ್ತಕಗಳಿವು. ಅವು ಗಳು ನನಗೆ ಸಿಕ್ಕಿದುದೋ, ಒಂದು ಕ್ಯಾಥೊಲಿಕ್ ಮ್ಯಾನೇಜ್‌ಮೆಂಟಿನದೊಂದು ಲೈಬ್ರರಿಯಲ್ಲಿ!



ಚಿಂತನೆಯನ್ನು ಕಲಿಸಿದ ಹಲವು ಪತ್ರಿಕೆಗಳು

ಈ ಘಟ್ಟದಲ್ಲೇ 'ಮಾತೃಭೂಮಿ' ಯ ರಂಗ ಪ್ರವೇಶ. ಅದಕ್ಕಾಗಿ, ನಾನು ಇತರ ಕೆಲವರಂತೆ ಅತ್ಯಂತ ಆಸಕ್ತಿಯಿಂದ ಈ ಪತ್ರಿಕೆಯ ಪ್ರಕಟಣೆಯನ್ನು ನಿರೀಕ್ಷಿಸುತ್ತಿದ್ದೆ. ಮೊದಲ ಸಂಚಿಕೆ ಹೊರಗೆ ಬಂದಾಗಲಿಂದ ಅದನ್ನು ಕ್ರಮವಾಗಿ ಪ್ರಕಟವಾದೊಡನೆಯೇ ಓದುವುದೇ ಅಲ್ಲದೇ ಓದಿ ಮುಗಿಸಿದ ಮೇಲೂ ಸಂಚಿಕೆ ಸಂಚಿಕೆಯಾಗಿ ಜೋಡಿಸಿ ಜೋಪಾನವಾಗಿ ತೆಗೆದಿಡುತ್ತಿದ್ದೆ.

ರಾಷ್ಟ್ರೀಯ ವಿಷಯಗಳಿಗೆ 'ಮಾತೃಭೂಮಿ' ಹೇಗೋ ಸಮಾಜ ಸಂಸ್ಕಾರಕ್ಕೂ ಸಾಹಿತ್ಯಾಭಿವೃದ್ಧಿಗೂ ಸಹಾಯಕವಾದ ಬೇರೆ ಕೆಲವು ಪ್ರಕಟಣೆಗಳು ಈ ಸಮಯದಲ್ಲಿ ಹೊರ ಬರುತ್ತಿದ್ದವು. ಅವುಗಳನ್ನೂ ನಾನು ಕ್ರಮವಾಗಿ ಓದುತ್ತಾ ಆಯಾ ರಂಗಗಳಿಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಮನದಟ್ಟು ಮಾಡಿಕೊಳ್ಳಲು ಶ್ರದ್ಧೆ ವಹಿಸುತ್ತಿದ್ದೆ. ನಂಬೂದರಿಗಳ ಯೋಗಕ್ಷೇಮ ಸಭೆಯ ಪ್ರಚಾರ ಪತ್ರಿಕೆಯಾದ 'ಯೋಗಕ್ಷೇಮ' (ಮೊದಲು ವಾರಪತ್ರಿಕೆ, ಆಮೇಲೆ ದ್ವೈವಾರ್ಷಿಕ) ಮತ್ತು ಸಂಘ ಸಂಸ್ಕಾರಿಗಳೂ ಸಾಹಿತ್ಯ ಪ್ರಿಯರೂ ಆದ ಕೆಲವು ನಂಬೂದರಿಗಳು ನಡೆಸುತ್ತಿದ್ದ 'ಉಣ್ಣಿ ನಂಬೂದಿರಿ' (ಯುವನಂಬೂದರಿ) ಎಂಬ ಮಾಸಪತ್ರಿಕೆ, ಕಣ್ಣಂಬ್ರ ಕುಂಜುಣ್ಣಿ ನಾಯರ್ ಅವರ ಮತ್ತು ಕೆ.ಪಿ.ರಾಘವನ್ ನಾಯರ್ ಅವರ ಸಂಪಾದಕತ್ವದಲ್ಲಿ ನಡೆಸುತ್ತಿದ್ದ ಸಾಹಿತ್ಯ ಮಾಸ ಪತ್ರಿಕೆಯೊಂದು(ಕೈರಾಳಿ ಎಂದು ಅದರ ಹೆಸರಿರಬೇಕು), 'ಸಾಹಿತ್ಯ' ಎಂಬ ಇನ್ನೊಂದು ಮಾಸಪತ್ರಿಕೆ ಇವೆಲ್ಲ ನಾನು ಓದುತ್ತಿದ್ದೆ. ಅವುಗಳಲ್ಲೆಲ್ಲ ಆಯಾ ವಿಷಯಗಳಿಗೆ ಸಂಬಂಧ ಪಟ್ಟ ಪ್ರಶ್ನೆ, ಸಮಸ್ಯೆಗಳನ್ನು ಕುರಿತು ಹಲವು ಪ್ರೌಢ ಲೇಖಕರಿಂದ ವಿವಿಧ ದೃಷ್ಟಿಗಳನ್ನು ತಂತಮ್ಮ ನಿಲುವುಗಳನ್ನು ಸಮರ್ಥಿಸುತ್ತ ವಿರೋಧಾಭಿಪ್ರಾಯಗಳನ್ನು ಖಂಡಿಸುವಾಗ ಉಪಯೋಗಿಸುವ ತರ್ಕಸರಣಿಯನ್ನೂ, ಅವುಗಳಿಗೆ ಪ್ರತಿಯಾಗಿ ಬರುವ ಉತ್ತರಗಳನ್ನೂ ನಾನು ಶ್ರದ್ಧೆಯಿಂದ ಓದಿ ಮನವರಿಕೆ ಮಾಡಿ ಕೊಳ್ಳುತ್ತಿದ್ದೆ. ಈ ಖಂಡನ ಮಂಡನಗಳನ್ನೆಲ್ಲಾ ಓದುವಾಗ ಇವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ನನ್ನ ಮನಸ್ಸಲ್ಲೇ ಯೋಚನೆ ಮಾಡುತ್ತಿದ್ದೆ. ಇದರ ನಿರ್ಣಯದಲ್ಲಿ ಸಹಾಯ, ಸಲಹೆಗಳನ್ನು ಕೊಡತಕ್ಕಂಥವರ ಜೊತೆಯಲ್ಲಿ ಮಾತಾಡಿ ತಿಳಿದುಕೊಳ್ಳುತ್ತಿದ್ದೆ.

ಪುಸ್ತಕ ದೊರಕುವಂತ ಎಲ್ಲ ಕಡೆಗಳಿಂದಲೂ

ಕಾಲೇಜು ಲೈಬ್ರರಿಯಿಂದ ಮಾತ್ರವಲ್ಲ, ದೊರಕುವಂಥ ಮತ್ತೆಲ್ಲ ಕೇಂದ್ರಗಳಿಂದಲೂ ಓದಲು ಒಳ್ಳೆಯದೆಂದು ತೋರುವ ಪುಸ್ತಕಗಳನ್ನೆಲ್ಲ ತಂದು ಓದುವುದರಲ್ಲೂ ನಾನು ಶ್ರದ್ಧೆವಹಿಸಿದ್ದೆ. ಪ್ರತಿಸಲ ತೃಶೂರಿನಿಂದ ಊರಿಗೆ ಹೋಗಿ ವಾಪಸು ಬರುವಾಗಲೂ ಷೋರನೂರು ರೈಲ್ವೆ ಪ್ಲಾಟ್‌ಫಾರಮ್ಮಿನ ಬುಕ್‌ಸ್ಟಾಲಿನಲ್ಲಿ ಎರಡು ಮೂರು ಪುಸ್ತಕಗಳನ್ನು ಕೊಂಡು ತರುವುದು, ನನಗೆ ಪದ್ಧತಿಯಾಗಿ ಹೋಗಿತ್ತು. ಹಾಗೆ ವಿವಿಧ ವಿಭಾಗಗಳಲ್ಲಿಯೂ ವಿಶೇಷವಾಗಿ ಇತಿಹಾಸ, ರಾಜ್ಯಾಡಳಿತ ಪದ್ಧತಿಗಳು (Political System) ಭಾರತದಲ್ಲೂ, ಇತರ ರಾಜ್ಯಗಳಲ್ಲೂ ನಡೆದ, ನಡೆಯುತ್ತಿರುವ ಸ್ವಾತಂತ್ರ್ಯ ಸಮರಗಳು - ಇಂಥ ವಿಷಯಗಳನ್ನು ಕುರಿತುಳ್ಳ ಕೆಲವು ಪುಸ್ತಕಗಳನ್ನು ನಾನು ಶೇಖರಿಸಿಕೊಂಡಿದ್ದೆ.

3 ಗಂಟೆಯಾಗಿತ್ತು

ಓದುವುದರಲ್ಲಿ ಮಗ್ನನಾಗಿದ್ದ ನನ್ನ ಏಕಾಗ್ರತಾ ಸಮಾಧಿಯನ್ನರಿತು ಯಾರೊಬ್ಬರೂ ನನ್ನೆಡೆ ಸುಳಿಯಲಿಲ್ಲ. ಮಾತನಾಡಿಸುವ ಧೈರ್ಯವನ್ನು ಮಾಡಲಿಲ್ಲವೆಂದು ತೋರುತ್ತದೆ. ಊಟದ ಸಮಯಕ್ಕೆ ನನ್ನನ್ನು ಕರೆಯಲೂ ಸ್ವಲ್ಪ ಹಿಂದೆಮುಂದೆ ನೋಡಿರಬೇಕೆಂದು ಭಾವಿಸುತ್ತೇನೆ. ನನಗಾಗಿ ಕಾದೂ ಕಾದೂ ಕಡೆಗೆ ಭೂಪಾಳಂ ಚಂದ್ರಶೇಖರಯ್ಯನವರು ತಮಗೆ ಸಹಜವಾಗಿದ್ದ ಕಿರುನಗೆಗೂಡಿ ಬಂದು "ಎಲ್ಲರೂ ಕಾಯುತ್ತಿದ್ದಾರೆ ಬಹಳ ಹೊತ್ತಿನಿಂದ ತಮಗಾಗಿ....." ಎಂದು ಊಟಕ್ಕೆ ಎಬ್ಬಿಸಿದರು. ಊಟ ಮುಗಿಸಿ ಬಂದು ಮತ್ತೆ ಓದತೊಡಗಿದೆ. ರಾತ್ರಿ ಮುಂದೆ ಮುಂದೆ ಸಾಗಿತ್ತು. ಚಂದ್ರಶೇಖರಯ್ಯ ತಮ್ಮ ಆ ಕೊಠಡಿಯಲ್ಲಿಯೆ ನನಗೊಂದು ತಮಗೊಂದು ಹಾಸಿಗೆ ಹಾಕಿದ್ದರು. ನಾನು ಓದು ನಿಲ್ಲಿಸಿ ಮಲಗುತ್ತೇನೆಂದು ಸ್ವಲ್ಪಕಾಲ ಕಾದು, ನಾನು ಓದುವುದರಲ್ಲಿ ತನ್ಮಯವಾಗಿದ್ದುದನ್ನು ಅರಿತು, ತಾವು ಮಲಗಿದರು. ರಾತ್ರಿ ಒಂದು ನಿದ್ದೆ ಮುಗಿದು ಎಚ್ಚರವಾದಾಗ ನೋಡುತ್ತಾರೆ, ನಾನು ನಿಷ್ಪಂದನಾಗಿ ಕುಳಿತು ಓದುತ್ತಲೇ ಇದ್ದೇನೆ! ಗಡಿಯಾರ ನೋಡುತ್ತಾರೆ, ಮೂರು ಗಂಟೆ! ಅವರಿಗೆ ನಂಬಲಾಗಲಿಲ್ಲವಂತೆ. ಗಡಿಯಾರ ನಿಂತುಬಿಟ್ಟಿದೆಯೋ ಏನೋ ಎಂದು ನೋಡಿದಾಗ ಅದು ನಡೆಯುತ್ತಿತ್ತು! ಅವರು ಎದ್ದುಬಂದು ನನ್ನ ಬಳಿ ನಿಂತಾಗ ಫಕ್ಕನೆ ಎಚ್ಚೆತ್ತವನಂತೆ ತಲೆಯೆತ್ತಿದೆ. ಅವರು ಸಕರುಣ ಧ್ವನಿಯಿಂದ ಹೇಳಿದರು : "ಪುಟ್ಟಪ್ಪ, ನಿಮಗೆ ಕಾಣಿಕೆಯೊಪ್ಪಿಸುವುದಕ್ಕಾಗಿಯೇ ಈ ಗ್ರಂಥ ತಂದಿದ್ದೇವೆ. ಈಗ ರಾತ್ರಿ ಮೂರುಗಂಟೆಯಾಗಿದೆ. ಯಾಕೆ ನಿದ್ದೆಗೆಡುತ್ತೀರಿ? ರೈಲು ಪ್ರಯಾಣದಿಂದಲೂ ಭಾಷಣಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದುದರಿಂದಲೂ ದಣಿದಿದ್ದೀರಿ. ಅಲ್ಲದೆ ನಾಳೆ ಬೆಳಿಗ್ಗೆ ಮತ್ತೆ ಮೈಸೂರಿಗೆ ಹೊರಡಬೇಕಾಗಿದೆ. ಮೈಸೂರಿಗೇ ತೆಗೆದುಕೊಂಡು ಹೋಗಿ ನಿಧಾನವಾಗಿ ಓದಬಹುದಲ್ಲಾ?" ಎಂದರು. ಆ ಗ್ರಂಥವನ್ನು ನನಗಾಗಿ ಅವರು ತಂದಿದ್ದರೋ ಅಲ್ಲವೋ ನನಗೆ ಗೊತ್ತಿರಲಿಲ್ಲ. ಆದ್ದರಿಂದ ಅದನ್ನು ನಾನು ಮೈಸೂರಿಗೆ ಹೊರಡುವ ಮುನ್ನವೇ ಓದಿ ಮುಗಿಸಬೇಕೆಂದು ಮನಸ್ಸು ಮಾಡಿದ್ದೆ. ಅದು ನನ್ನದೇ ಆಗುವುದೆಂದು ತಿಳಿದ ಮೇಲೆ ಅವರು ಇಚ್ಛಿಸಿದಂತೆ ದೀಪ ಆರಿಸಿ ಮಲಗಿದೆ

- ಕುವೆಂಪು

'ನೆನಪಿನದೋಣಿ'ಯಿಂದ

ಕ್ರಾಂತಿಕಾರಿ ಚಳುವಳಿಗಳ ಪರಿಚಯ

ಅದೇ ರೀತಿಯಾಗಿಯೇ ಯುಕ್ತಿವಾದ (Rationalism) ಮತ್ತು ನಿರೀಶ್ವರವಾದ (atheism)ಗಳ ಚಿಂತಾಗತಿಯನ್ನು ರೂಢಿಸುವ ಗ್ರಂಥಗಳನ್ನು ನಾನು ಸ್ವತಃ ಕೊಂಡು ಶೇಖರಿಸುವುದೂ, ಇತರರಿಂದ ಎರವಲಾಗಿ ತಂದು ಓದುವುದೂ ಎಲ್ಲಾ ಈ ಸಂದರ್ಭದಲ್ಲೇ ಮಾಡಿದುದು. ಅದುವರೆಗೆ ಎಂ.ಸಿ.ಜೋಸೆಫ್ ಮತ್ತು ಇತರರ ನೇತೃತ್ವದಲ್ಲಿ ಹೊರಬರುತ್ತಿದ್ದ 'ಯುಕ್ತಿವಾದಿ'(Rationalist) ಮಾಸಪತ್ರಿಕೆಯ ಪಂಕ್ತಿಗಳಲ್ಲಿ ನಾನು ಓದಿದ್ದ ಕೆಲವು ವಿಷಯಗಳನ್ನು ಕುರಿತು ವಿಸ್ತಾರವಾಗಿಯೂ, ಶಾಸ್ತ್ರೀಯವಾಗಿಯೂ ವಿವರಿಸಿದ್ದ ಈ ಗ್ರಂಥಗಳು ನನ್ನ ಬೌದ್ಧಿಕ ಬೆಳವಣಿಗೆಗೆ ಬಹಳಷ್ಟು ಸಹಾಯ ಮಾಡಿದವು.

ಈ ವಿಶಾಲ ವ್ಯಾಸಂಗವು ಭಾರತದಲ್ಲೂ, ಪ್ರಪಂಚದ ಇತರ ಕಡೆಗಳಲ್ಲೂ ನಡೆಯುತ್ತಿದ್ದ ಕ್ರಾಂತಿ ಚಳುವಳಿಗಳ ಸೂಕ್ಷ್ಮ ಪರಿಚಯವನ್ನು ದೊರಕಿಸಿಕೊಳ್ಳುವುದರಲ್ಲಿ ನನಗೆ ನೆರವಾಯಿತು.

ಚಲನಚಿತ್ರಗಳಲ್ಲಿ 'ಅಭಿನಯ' ಕಲೆ

—ವೈಶಾಲಿ ಕಾಸರವಳ್ಳಿ ಚಲನಚಿತ್ರ ನಟಿ—

ಅಭಿನಯ ಎನ್ನುವುದು ಅಂತಿಮವಾಗಿ ಸಮಾಜದ ಸ್ಥಿತಿ/ಸಂಬಂಧಗಳನ್ನು ಪ್ರಕಟಪಡಿಸುವ ಸಾಧನ. ನಟ/ನಟಿ ತನ್ಮೂಲಕ ವೈಯಕ್ತಿಕವಾಗಿ ತಾನು ಹಾಗೂ ಸಾಮೂಹಿಕವಾಗಿ ಎಲ್ಲರೂ ಅರ್ಥಮಾಡಿಕೊಂಡ ಸತ್ಯಗಳನ್ನು ಸಂಶೋಧಿಸುತ್ತಿರುತ್ತಾರೆ. ತಾವು ನಿರ್ವಹಿಸುತ್ತಿರುವ ಪಾತ್ರದ ಮೂಲಕ ಆರಂಭವಾಗುವ ಈ ವಿಚಾರಮಂಡನೆ ಮತ್ತು ಹುಡುಕಾಟ ಚಿತ್ರಕತೆಯ ಮೂಲಕ ಇಡೀ ಚಿತ್ರವನ್ನೇ ಆಕ್ರಮಿಸುತ್ತಿರುತ್ತದೆ. ಹೀಗಿರುವುದರಿಂದ ಅಭಿನಯಕ್ಕೂ ನಟರ ವಿಚಾರಗಳನ್ನು ಮತ್ತು ಅಭಿಪ್ರಾಯಗಳನ್ನು ಕಟ್ಟಿಕೊಡುತ್ತಿರುವ ಸಮಕಾಲೀನ ಸಂದರ್ಭಗಳಿಗೂ ಒಂದು ಸಾವಯವ ಸಂಬಂಧವಿರುತ್ತದೆ. ಇದನ್ನು ಒಪ್ಪಿಕೊಂಡರೆ, ಆಗ ಒಟ್ಟು ನಂಬಿಕೆಗಳನ್ನೇ ಅಲ್ಲಾಡಿಸುವ ಜೀವನದ ದಿಕ್ಕುಗಳನ್ನೇ ಬದಲಿಸುವ ತಿರುವುಗಳನ್ನು ಸಮಾಜ ಪಡೆದಾಗ ನಮ್ಮ ಅಭಿನಯ ಕ್ರಮವೂ ಬದಲಾಗಬೇಕಾಗುತ್ತದಲ್ಲವೇ?

ಉದಾ: ಈಗ ನಮ್ಮ ಭಾರತದ ಸ್ಥಿತಿಯನ್ನೇ ತೆಗೆದುಕೊಂಡರೆ, ಸ್ವಾತಂತ್ರ್ಯ ಬರುವವರೆಗೆ ಹಾಗೂ ನಂತರದ ಒಂದೆರಡು ದಶಕಗಳವರೆಗೂ ಭಾರತವನ್ನು ಕಟ್ಟುವ ಉದಾತ್ತ ಆದರ್ಶವೊಂದು ನಮ್ಮ ಸಮಾಜದಲ್ಲಿ ಢಾಳಾಗಿ ಕಾಣುತ್ತಿತ್ತು. ಆಗ ನಮ್ಮ ಚಲನಚಿತ್ರಗಳ ವಸ್ತುವಿನಲ್ಲಿಯೂ ಆದರ್ಶನಾಯಕನೇ ಕೇಂದ್ರ ಬಿಂದುವಾಗಿದ್ದ. ಉಳಿದೆಲ್ಲ ಪಾತ್ರಗಳೂ ನಾಯಕ/ನಾಯಕಿ/ಪಕ್ಯದ ಆದರ್ಶಕ್ಕೆ ಹೊಂದಿಕೊಂಡಂತೆ ಹೆಣೆದಂತಹವಾಗಿರುತ್ತಿದ್ದವು. ನೆಹರು ಯುಗದ ನಂತರದ ಸಂದರ್ಭದಲ್ಲಿ ಆ ಎಲ್ಲಾ ಆದರ್ಶ[illegible]ವಾಗಿ, ರಾಜಕೀಯ ಮನುಷ್ಯನ ಸಣ್ಣತನ ಎದ್ದು ಕಾಣಲಾರಂಭಿಸಿತು. ಬದುಕು ವ್ಯಕ್ತಿ ಕೇಂದ್ರಿತವಾಯಿತು, ಸಿನಿಕತೆ ಕಾಣಿಸಿಕೊಳ್ಳಲಾರಂಭಿಸಿತು. ಇದು ಸಾಮಾಜಿಕ ಸ್ತರಗಳಲ್ಲೂ ಅನುರಣನಗೊಳ್ಳಲಾರಂಭಿಸಿತು. ಮತ್ತೆರಡು ದಶಕಗಳ ನಂತರ ಉಪಭೋಗ ಸಂಸ್ಕೃತಿ (Consumerism) ನಮ್ಮ ಜೀವನದ ಬೇರುಗಳವರೆಗೂ ಇಳಿದುಬಿಟ್ಟಿದೆ. ಹೀಗೆ ಹಂತಹಂತವಾಗಿ ನಮ್ಮ ನಂಬಿಕೆಗಳು, ಜೀವನ ದೃಷ್ಟಿ ಬದಲಾಗುತ್ತಾ ಹೋಗುತ್ತಿದೆ. ನಮ್ಮ ವಿಶೇಷವಾಗಿ ಕನ್ನಡ ಚಿತ್ರರಂಗದ ಅಭಿನಯ ತಂತ್ರಗಳು ಇದನ್ನು ಪ್ರತಿಫಲಿಸುತ್ತಿದೆಯೇ? 60 ರ ದಶಕಕ್ಕೂ, 80 ರ ದಶಕಕ್ಕೂ ಅಭಿನಯ ಶೈಲಿಯಲ್ಲಿ ಮಾರ್ಪಾಡುಗಳಾಗಿವೆಯೇ? ಅದಕ್ಕೆ ನಮ್ಮ ಯಾವ ಬದಲಾದ ಸಾಮಾಜಿಕ ಸ್ವರೂಪ ಕಾರಣವಾಗಿದೆ?


ವೈಶಾಲಿ ಕಾಸರವಳ್ಳಿ

ಇಲ್ಲಿರುವುದು ಪಾರ್ಸಿ ರಂಗಭೂಮಿಯಿಂದ ಹರಿದುಬಂದು ಆಗಿನ ಕಂಪನಿ ರಂಗಭೂಮಿ ಗಟ್ಟಿಯಾಗಿ ಕೃಷಿ ಮಾಡಿ ರೂಪಿಸಿದ ಅಭಿನಯದ ಮಾದರಿ. ನಟ ಅಥವಾ ನಟಿ ಪಾತ್ರದ ಒಳಹೊಕ್ಕು ತಾನೇ ಆ ಪಾತ್ರ ಎಂಬ ನಂಬಿಕೆ ಹುಟ್ಟಿಸುವಂತಹ ಅಭಿನಯ ಶೈಲಿ. ಕನ್ನಡದ ಆರಂಭದ ಚಿತ್ರಗಳಲ್ಲಿ ಈ ಮಾದರಿಯನ್ನು ನಾವು ಕಾಣಬಹುದು. ಅದರಲ್ಲೂ ಐತಿಹಾಸಿಕ -ಪೌರಾಣಿಕ ಚಿತ್ರಗಳಲ್ಲಿ ಇದನ್ನು ಬಹಳ ಚೆನ್ನಾಗಿಯೇ ನಿರ್ವಹಿಸುತ್ತಿದ್ದರು. ಇಲ್ಲಿ ಪ್ರತಿ ಪಾತ್ರಕ್ಕೂ ಒಂದೊಂದು ಪ್ರತ್ಯೇಕ ವಿಭಾಗ(Compartment) ಮಾಡಿಟ್ಟು ಅದಕ್ಕೆ ಆದಂತಹ ಒಂದು ಅಭಿನಯ ಕ್ರಮವನ್ನು ರೂಪಿಸಿದ್ದರು. ನಾಯಕ ಶೂರವೀರ ಸಾಹಸಿಯಂತೆ ಕಂಡರೆ, ನಾಯಕಿ ಪ್ರೇಮಿ, ವಿರಹಿ, ತಾಯಿಯಂತೆ ಕಾಣುವ 'ಸ್ತ್ರೀತ್ವ'ದ ರಮ್ಯ ಕಲ್ಪನೆಯ ಸಾಕ್ಷಾತ್ಕಾರವಾಗಿರುತ್ತಿದ್ದಳು. ಖಳನಾಯಕ-ಖಳನಾಯಕಿಯರೋ ಕ್ರೂರತ್ವವೇ ಮೈವೆತ್ತಿ ಬಂದಂತೆ ಅಥವಾ ಶಕುನಿ ಬುದ್ಧಿಯೇ ಸಾಕಾರಗೊಂಡಂತೆ ಇದ್ದರೆ, ಹಾಸ್ಯ ಪಾತ್ರಗಳು ಮಾತ್ರ ನಿಜ ಜೀವನದ ಹಾವಭಾವಗಳನ್ನೇ ಇಟ್ಟುಕೊಂಡಿರುತ್ತಿದ್ದರು. ಈ ತರಹದ ಕಂಪಾರ್ಟ್‌ಮೆಂಟ್(Compartment) ಮಾಡುವ ಕ್ರಮದಲ್ಲಿ ವ್ಯತ್ಯಾಸ ಕಾಣಿಸಲಿಲ್ಲ.

ಒಮ್ಮೆ ಸಾಮಾಜಿಕ ಚಿತ್ರಗಳ ಭರಾಟೆ ಕನ್ನಡದಲ್ಲಿ ಆರಂಭವಾದ ನಂತರ ಈ ಅಭಿನಯ ಶೈಲಿಯಲ್ಲಿ ಸ್ವಲ್ಪ ಮಿತ(Restraint) ಕಾಣಿಸಿಕೊಂಡಿತಾಗಲೀ ಪಾತ್ರವನ್ನು ನೋಡುವಂತೆ (Approach) ಮಾಡುವ ಕ್ರಮದಲ್ಲಿ ವ್ಯತ್ಯಾಸ ಕಾಣಿಸಲಿಲ್ಲ.

ಸ್ವಾತಂತ್ರ್ಯಪೂರ್ವ ಮತ್ತು ನೆಹರು ಯುಗದಲ್ಲಿ ದೇಶ ಕಟ್ಟುವ ಉದಾತ್ತ ಆದರ್ಶವಿದ್ದುದರಿಂದ ಆದರ್ಶ ನಾಯಕನೇ ನಮ್ಮ ಚಿತ್ರಗಳ ಕೇಂದ್ರ ಬಿಂದುವಾಗಿದ್ದ ಎಂದು ತಿಳಿಸಿದ್ದೀರಿ. ನಮ್ಮಲ್ಲಿ ಕಂಡುಬರುವ ಅಭಿನಯ ಶೈಲಿಗೆ ಅದು ಕಾರಣ ಎನ್ನುವ ಸೂಚನೆ ಅದರಲ್ಲಿದೆ ಎನಿಸುತ್ತದೆ ನನಗೆ. ಅದಕ್ಕಿಂತ ಭಿನ್ನವಾದ ಇನ್ನೊಂದು ವಾದವನ್ನು ಗಮನಿಸೋಣ.

ನಮ್ಮ ಜಾನಪದ ಹಾಗೂ ಸಾಂಪ್ರದಾಯಿಕ ರಂಗಭೂಮಿಯಲ್ಲಿ ನಾಯಕನನ್ನು ಉದಾತ್ತವಾಗಿಯೇ ಚಿತ್ರಿಸುವ ಒಂದು ವಾಡಿಕೆ ಇದೆ. ನಾಯಕ ಹೇಗೆ ಸಂಸ್ಕೃತ, ಭೂಯಿಷ್ಠ ಕನ್ನಡದಲ್ಲಿ ಮಾತಾಡುತ್ತಾನೆ. ವಿದೂಷಕ ಹೇಗೆ ನಮ್ಮ ನಿಮ್ಮಂತೆ ಆಡುಮಾತಿನಲ್ಲಿ ಮಾತಾಡುತ್ತಾನೆ. ನಮ್ಮ ಚಿತ್ರಗಳಲ್ಲಿ ನಾಯಕ-ನಾಯಕಿಯರನ್ನು ಸಾಮಾನ್ಯ ಜನರಿಗಿಂತ ಭಿನ್ನವಾದ ಮಟ್ಟದಲ್ಲೂ, ಹಾಸ್ಯ ಪಾತ್ರ ಮತ್ತು ಪೋಷಕ ಪಾತ್ರವನ್ನು ಸಾಮಾನ್ಯ ಜನರ ಮಟ್ಟದಲ್ಲೂ ಚಿತ್ರಿಸುವ ಸಂಪ್ರದಾಯಕ್ಕೆ ಇದೂ ಕಾರಣವಾಗಿರಬಹುದೇ? ಯೋಚಿಸಬೇಕು. ರಾಜ್‌ಕುಮಾರ್, ಉದಯಕುಮಾರ್, ಕಲ್ಯಾಣಕುಮಾರ್, ಪಂಡರಿಬಾಯಿ, ಲೀಲಾವತಿಯವರು ನಿರ್ವಹಿಸುತ್ತಿದ್ದ ಪಾತ್ರಗಳು ಗಾಂಭೀರ್ಯವೇ ಮೈವೆತ್ತಿ ಬಂದಂತಹ ಪಾತ್ರಗಳಾಗಿ ಚಿತ್ರಿತವಾಗುತ್ತಿದ್ದರೆ, ನರಸಿಂಹರಾಜು, ಬಾಲಕೃಷ್ಣರ ಹಾಸ್ಯ ಪಾತ್ರಗಳಿಗೆ ಮನುಷ್ಯ ಸಹಜವಾದ ಎಲ್ಲ ಭಾವನೆಗಳೂ ಇರುತ್ತಿದ್ದವು. ಆ ಪಾತ್ರಗಳಲ್ಲಿ ಹಾಸ್ಯದೊಂದಿಗೆ ನಮ್ಮ ಆಸೆಬುರುಕುತನ, ಆಲಸ್ಯ, ಪ್ರೇಮ, ಹೊಟ್ಟೆಕಿಚ್ಚು ಎಲ್ಲವೂ ಇರುತ್ತಿದ್ದವು. (ಬಹುಶ: ಈ ಕಾರಣಕ್ಕಾಗಿಯೇ ಇರಬೇಕು ನನಗೆ ಈ ಪಾತ್ರಗಳೇ ಹೆಚ್ಚು ಜೀವಂತ ಅನ್ನಿಸುತ್ತಿದ್ದುದು)

ಕನ್ನಡದ ಎಲ್ಲ ಒಳ್ಳೆಯ ಸಾಮಾಜಿಕ ಚಿತ್ರಗಳಲ್ಲೂ ಈ ಕಪಾರ್ಟ್‌ಮೆಂಟ್ (Compartmental) ಆದ ಅಭಿನಯ ಮೀರುತ್ತಿದ್ದರು ಎನ್ನುವುದು ಒಂದು ಒಳ್ಳೆಯ ಅಂಶ. ಸ್ಕೂಲ್ ಮಾಸ್ಟರ್, ಬೆಳ್ಳಿ ಮೋಡ, ನಾಂದಿ, ಉಯ್ಯಾಲೆ ಇವುಗಳನ್ನು ಹೆಸರಿಸಬಹುದು.

ಪುಟ್ಟಣ್ಣ-ಕಲ್ಪನಾ ಜೋಡಿಯ ಯಶಸ್ಸು ಕನ್ನಡ ಚಿತ್ರದಲ್ಲಿ ಹೊಸದೊಂದು ಅಭಿನಯ ಕ್ರಮವನ್ನು ತೆರೆದಿಟ್ಟದ್ದನ್ನು ಪ್ರಸ್ತಾಪಿಸಬಹುದು. ಪಾತ್ರದ ಮನಸ್ಸಿನಲ್ಲಾಗುವ ತಳಮಳವನ್ನು ಮೆಲೋಡ್ರಾಮ (High Key Meloderama) ಮೂಲಕ ವ್ಯಕ್ತಪಡಿಸಿ ಭಾವ ತೀವ್ರತೆಯನ್ನು ತಂದು ಕೊಡುವ ಪ್ರಯತ್ನ. ವೈಯಕ್ತಿಕವಾಗಿ ಈ ಅಭಿನಯ ಶೈಲಿಗೆ ನನ್ನ ಆಕ್ಷೇಪವಿದ್ದರೂ ಕನ್ನಡ ಚಿತ್ರದ ಇತಿಹಾಸದಲ್ಲಿ ಇದೊಂದು ಮುಖ್ಯ ಹೆಜ್ಜೆ ಎಂದೇ ಗುರುತಿಸುತ್ತೇನೆ.

ನಂತರ ಬರುವುದು ಉಪಭೋಗ ಸಂಸ್ಕೃತಿ. ಇವತ್ತಿನ ನಮ್ಮ ಚಿತ್ರಗಳಲ್ಲಿ ಈ ಸಂಸ್ಕೃತಿ ಆಳವಾಗಿ ನುಗ್ಗಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದು ಹೇಗೆ ಪ್ರಕಟವಾಗುತ್ತಿದೆ ಎಂದು ಗಮನಿಸಲು ಇವತ್ತಿನ ಹಿಂದಿ ಚಿತ್ರಗಳಲ್ಲಿ ಕಂಡುಬರುವ ಅಭಿನಯ ಶೈಲಿ ನೋಡಬಹುದು. ಉಪಭೋಗ ಸಂಸ್ಕೃತಿಯ ಒಂದು ಲಕ್ಷಣ ಎಲ್ಲವೂ ತನ್ನದಾಗಬೇಕು ಎಂಬ ಹಂಬಲ ಹುಟ್ಟಿಸಿ, ಗ್ರಾಹಕನನ್ನು ಚಪಲಚಿತ್ತನನ್ನಾಗಿಸುವುದು. ಅದು ಜಾಹಿರಾತು (Advertisement) ಆಗಿರಲಿ ಪ್ರಚಾರ ಪತ್ರವೇ ಆಗಿರಲಿ, ಅದು ಸುಂದರವಾಗಿದ್ದರೆ ಸಾಲದು ಕೆರಳಿಸುವಂತಿರಬೇಕು ಎಂಬ ನಂಬಿಕೆ ಇಲ್ಲಿರುತ್ತದೆ. ಇದು ನಮ್ಮ ಇತ್ತೀಚಿನ ಚಿತ್ರಗಳಲ್ಲೂ ಕಾಣುತ್ತಿದೆ. ಮುಖ್ಯವಾಗಿ ಹಾಡುಗಳ ಚಿತ್ರೀಕರಣದಲ್ಲಿ ನೂರಾರು ಜನರನ್ನು ಬಳಸುವುದು, ಚಿತ್ರದ ಕತೆಯ ಅಗತ್ಯ ನೋಡದೇ ಭಾರಿ ಹೊರಾಂಗಣ ಆರಿಸುವುದು, ಭರ್ಜರಿ ವೆಚ್ಚದಲ್ಲಿ ಚಿತ್ರೀಕರಣ ಮಾಡಲಾಗಿದ ಎಂದೇ ಪ್ರಚಾರಕ್ಕೆ ಇಳಿಯುವುದು. ಇವತ್ತಿನ ಜನಪ್ರಿಯ ಹಿಂದಿ ನಟ-ನಟಿಯರ ಅಭಿನಯ ಗಮನಿಸಿದರೆ ಗೊತ್ತಾಗುತ್ತದೆ. ಒಬ್ಬ ಮೀನಾಕುಮಾರಿಯೋ, ಒಬ್ಬ ನೂತನ್‌ಳೋ, ಒಬ್ಬ ನರ್ಗಿಸಳೋ, ಅವರು ಪಾತ್ರ ನಿರ್ವಹಿಸುತ್ತಿದ್ದ ಕ್ರಮಕ್ಕಾಗಿ, ಮೆಚ್ಚಿಗೆ ಪಡೆಯುತ್ತಿದ್ದರೆ ದಿಲೀಪ್ ಕುಮಾರ್, ರಾಜ್‌ಕುಮಾರ್ ಸಂಭಾಷಣೆ ಹೇಳುವ ಕ್ರಮದಿಂದಾಗಿ ಹೊಗಳಿಸಿಕೊಂಡಿದ್ದರು. **ಇವತ್ತಿನ ನಟಿಯರು ಅವರ ಸೊಂಟ ತಿರುಗಿಸುವ ಕ್ರಮಕ್ಕೂ ದೇಹ ಕುಲುಕಿಸುವುದಕ್ಕೂ ಹೆಸರಾಗಿರುತ್ತಾರೆ. ಇವರ ಬಂಡವಾಳ ಏನು ಎಂದು ಗೊತ್ತಾಗುವುದು ಒಂದು ಭಾವನಾತ್ಮಕ(Emotional) ದೃಶ್ಯ ಬಂದಾಗ ಮಾತ್ರ!**

ಈ ಬದಲಾವಣೆಗಳಿಗೆ ಯಾವ ಸಾಮಾಜಿಕ ರಾಜಕೀಯ ಬದಲಾವಣೆ ಕಾರಣವಾಗಿದೆ ಎಂದು ಇಡೀ ಭಾರತೀಯ ಚಿತ್ರರಂಗವನ್ನು ಗಮನಿಸಿದರೆ ತಿಳಿಯುತ್ತದೆ. ಹಿಂದಿ ಚಿತ್ರರಂಗದಲ್ಲಿ ಪೃಥ್ವಿರಾಜ್‌ಕಪೂರ್ ಶೈಲಿಯಿಂದ ರಾಜಕಪೂರ್, ದಿಲೀಪ್‌ಕುಮಾರ್ ಶೈಲಿಗೆ ಬದಲಾಗುವಾಗ ಪಾರ್ಸಿ ರಂಗಭೂಮಿಯ ಪ್ರಭಾವ ಹೋಗಿ ಸಾಮಾಜಿಕ ಚಿತ್ರಗಳ ಪ್ರಭಾವ ಆರಂಭವಾಗಿತ್ತು. ನ್ಯೂ ಥಿಯೇಟರ್ಸ್ ಪ್ರಭಾತ್‌ನ ಶಾಂತಾರಾಂ ಪ್ರಸಿದ್ಧಿಗೆ ಬರುತ್ತಿದ್ದರು (IPTA ಇಪ್ಟಾ-ಇಂಡಿಯನ್ ಪೀಪಲ್ಸ್ ಥಿಯೇಟ್ ಅಸೋಸಿಯೇಷನ್ ಎಂಬ ಪ್ರಗತಿಪರ ರಂಗಚಳುವಳಿ ಸ್ವಾತಂತ್ರ್ಯಕ್ಕೆ ಮೊದಲೇ ಆರಂಭವಾಗಿ ಪ್ರಭಾವ ಬೀರಿತು.) ಎಡಪಂಥೀಯ ನಂಬಿಕೆಗಳು ಕೂಡ ಕೆಲಸ ಮಾಡಲು ತೊಡಗಿತ್ತು. IPTA ದವರಾದ ಹೃಷಿಕೇಶ್ ಮುಖರ್ಜಿ, ಕೆ.ಎ ಅಬ್ಬಾಸ್, ಬಲರಾಜ್ ಸಹಾನಿ ಮೊದಲಾದವರು ಹಿಂದಿ ಚಿತ್ರರಂಗದಲ್ಲಿ ಮುಖ್ಯ ಸ್ಥಾನವನ್ನು ಆಕ್ರಮಿಸಿಕೊಂಡಿದ್ದನ್ನೂ ಗಮನಿಸಬಹುದು. ಆಗ ವಾಸ್ತವವಾದ ರೀತಿಯಲ್ಲಿ ಪಾತ್ರಗಳ ವ್ಯಾಖ್ಯಾನ ಆರಂಭವಾಯಿತೆನ್ನಬಹುದು. ಒಮ್ಮೆ ರಾಜ್‌ಕಪೂರ್ ಜನಪ್ರಿಯ ಆದನಂತರ ಅದು ಹಾಗೆಯೇ ಎಲ್ಲ ದಿಕ್ಕಿಗೂ ಹರಡತೊಡಗಿತು. ಆದರೆ ಅಭಿವ್ಯಕ್ತಿ ಕ್ರಮ ನಿಂತ ನೀರಲ್ಲ. ಸಮಾಜದಲ್ಲಿ ಬದಲಾವಣೆ ಆಗುತ್ತ ಹೋದಂತೆ, ಜಗದ ಅಭಿರುಚಿ ಬದಲಾಗುತ್ತಾ ಹೋದಂತೆ ಅವು ಬದಲಾಗುತ್ತಾ ಹೋಗುತ್ತವೆ. ಒಬ್ಬ ನಟ ಯಾ ನಟಿ ಸೂಕ್ಷ್ಮವಾಗಿ (Sensitive) ಆಗಿದ್ದರೆ ಇದನ್ನು ಅರ್ಥ ಮಾಡಿಕೊಂಡು ರೂಢಿಸಿಕೊಳ್ಳುತ್ತಾ ಹೋಗುತ್ತಾರೆ. ಪಕ್ಕದ ತಮಿಳುನಾಡಿನಲ್ಲಿ ಶಿವಾಜಿ ಗಣೇಶನ್ ಅಭಿನಯಿಸುವ ಕ್ರಮಕ್ಕಿಂತ ಭಿನ್ನವಾದ ಅಭಿನಯ ಶೈಲಿಯನ್ನು ಕಮಲ ಹಾಸನ್ ರೂಢಿಸಿಕೊಂಡದ್ದನ್ನು ಇಲ್ಲಿ ಉದಾಹರಿಸಬಹುದು.

ಕನ್ನಡ ಚಿತ್ರಗಳ ಅಭಿನಯ ಕ್ರಮ ಈ ಕೆಲವು ಬದಲಾವಣೆಗಳಿಂದಲೂ ಪ್ರಯೋಜನ ಪಡೆದು ಬೆಳೆದಿದೆ ಎಂಬುದನ್ನು ಗಮನಿಸಬಹುದು. ಸದ್ಯದ ಕನ್ನಡ ಚಿತ್ರಗಳ ಅಭಿನಯ ಶೈಲಿಗಳನ್ನು ಗಮನಿಸಿದರೆ ಒಂದು ಸ್ವಾರಸ್ಯಕರ ಅಂಶ ಕಾಣಬಹುದು. 60ರ ದಶಕಕ್ಕೂ ಮೊದಲಿನ ಕಂಪಾರ್ಟ್‌ಮೆಂಟಲ್(Compartmental) ಆದ ಅಭಿನಯ ಕ್ರಮವನ್ನೂ ನಾವಿಂದು ಕಾಣುತ್ತೇವೆ, 70ರ ದಶಕದಲ್ಲಿನ ಕಲ್ಪನಾ ಜನಪ್ರಿಯ ಮಾಡಿದ ತೀವ್ರ ಭಾವುಕ ಅಭಿನಯವನ್ನೂ ಕಾಣುತ್ತೇವೆ, 80ರ ಹೊಸ ಅಲೆಯ ಸಂಯಮದ ಅಭಿನಯವನ್ನೂ ಕಾಣುತ್ತೇವೆ. ಉಪಭೋಗ ಸಂಸ್ಕೃತಿ ಹಿಂದಿಯಲ್ಲಿ ಹುಟ್ಟುಹಾಕಿದ ನಖರಾಗಳನ್ನೇ ಅಭಿನಯ ಎನ್ನುವ ಶೈಲಿಯನ್ನೂ ನಾವಿಂದು ಕಾಣುತ್ತೇವೆ.

ಕೃಪೆ: **ಸಂಕುಲ**-1997

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ